ಗೀತಾ ನಾಗಭೂಷಣ ಅವರ ಕಾದಂಬರಿ : 'ಬದುಕು'

ಕನ್ನಡ ಎಂ.ಫಿಲ್. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧನಾ ವಿದ್ಯಾರ್ಥಿ

ಸುಮ.ಎಂ.

ರಿ.ನಂ. KRSMKS-00703

ಮಾರ್ಗದರ್ಶಕರು

ಡಾ. ಬೋರೇಗೌಡ ಚಿಕ್ಕಮರಳಿ
ಕನ್ನಡ ಸಹ ಪ್ರಾಧ್ಯಾಪಕರು
ವಿಜಯ ಪ್ರಥಮ ದರ್ಜೆ ಕಾಲೇಜು
ಪಾಂಡವಪುರ

ಅಧ್ಯಯನ ಕೇಂದ್ರ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ.
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)
ಕರ್ನಾಟಕ ಸಂಘ (ರಿ.), ಮಂಡ್ಯ

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ
ಹಂಪಿ

೨೦೧೩-೨೦೧೪

ಗೀತಾ ನಾಗಭೂಷಣ ಅವರ ಕಾದಂಬರಿ : 'ಬದುಕು'

ಕನ್ನಡ ಎಂ.ಫಿಲ್. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧನಾ ವಿದ್ಯಾರ್ಥಿ

ಸುಮ.ಎಂ.
ರಿ.ನಂ. KRSMKS-00703

ಮಾರ್ಗದರ್ಶಕರು

ಡಾ. ಬೋರೇಗೌಡ ಚಿಕ್ಕಮರಳಿ
ಕನ್ನಡ ಸಹ ಪ್ರಾಧ್ಯಾಪಕರು
ವಿಜಯ ಪ್ರಥಮ ದರ್ಜೆ ಕಾಲೇಜು
ಪಾಂಡವಪುರ

ಅಧ್ಯಯನ ಕೇಂದ್ರ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ,
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)
ಕರ್ನಾಟಕ ಸಂಘ (ರಿ.), ಮಂಡ್ಯ

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ
ಹಂಪಿ

೨೦೧೩-೨೦೧೪

ಮಾರ್ಗದರ್ಶಕರ ದೃಢೀಕರಣ ಪತ್ರ

"ಗೀತಾ ನಾಗಭೂಷಣ ಅವರ ಕಾದಂಬರಿ-'ಬದುಕು'" ಎಂಬ ವಿಷಯದ ಮೇಲೆ ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಎಂ.ಫಿಲ್.** (ಕನ್ನಡ) ಪದವಿಗೆ ವಿದ್ಯಾರ್ಥಿಯಾದ **ಸುಮ.ಎಂ.** ಅವರು ನನ್ನ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯಲ್ಲಿ ಬರೆದು ಒಪ್ಪಿಸುತ್ತಿದ್ದಾರೆಂದು ಹಾಗೂ ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು :

(ಡಾ.ಬೋರೇಗೌಡ ಚಿಕ್ಕಮರಳಿ)
ಕನ್ನಡ ಸಹ ಪ್ರಾಧ್ಯಾಪಕರು
ವಿಜಯ ಪ್ರಥಮ ದರ್ಜೆ ಕಾಲೇಜು
ಪಾಂಡವಪುರ

ದಿನಾಂಕ : 11-7-2014
ಸ್ಥಳ : ಪಾಂಡವಪುರ

ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ, ಸಂಶೋಧನಾ ಕೇಂದ್ರದಲ್ಲಿ 2013-14ರ ಸಾಲಿಗೆ **ಕನ್ನಡ ಎಂ.ಫಿಲ್.** ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **ಗೀತಾ ನಾಗಭೂಷಣ ಅವರ ಕಾದಂಬರಿ : 'ಬದುಕು'** ವಿಷಯವನ್ನು ಆಯ್ಕೆಮಾಡಿಕೊಂಡು ಡಾ. ಬೋರೇಗೌಡ ಚಿಕ್ಕಮರಳಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಯಾವುದೇ ಅಧ್ಯಾಯವನ್ನಾಗಲಿ, ಬೇರೆ ಯಾವ ವಿಶ್ವವಿದ್ಯಾನಿಲಯಕ್ಕೂ ಒಪ್ಪಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ. ಮತ್ತು ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್. (ಕನ್ನಡ) ಪದವಿಗಾಗಿ ಈ ನಿಬಂಧವನ್ನು ಅರ್ಪಿಸುತ್ತಿದ್ದೇನೆ.

ಸಂಶೋಧನಾ ವಿದ್ಯಾರ್ಥಿ)

Suma . m

(ಸುಮ.ಎಂ.)

ರಿ.ನಂ. KRSMKS-00703

ಕನ್ನಡ ವಿಭಾಗ

ಕರ್ನಾಟಕ ಸಂಘ (ರಿ.), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

ದಿನಾಂಕ : 11.07.2014

ಸ್ಥಳ : ಮಂಡ್ಯ

ಪರಿವಿಡಿ

ಅಧ್ಯಾಯ–೧

ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ಆಧುನಿಕ ಕನ್ನಡದ ಪ್ರಸಿದ್ಧ ಲೇಖಕಿಯರಲ್ಲಿ ಗೀತಾ ನಾಗಭೂಷಣ ಅವರು ಒಬ್ಬರಾಗಿದ್ದಾರೆ. ಇವರು ಸಾಹಿತ್ಯದ ಯಾವುದೇ ಪಂಥದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳದೆ ಮಾನವೀಯತೆಯ ಹುಡುಕಾಟದ ನೆಲೆಗಟ್ಟಿನಲ್ಲಿ ಸಾಹಿತ್ಯ ರಚಿಸುತ್ತಿರುವ ಇವರು ಹಲವಾರು ಕತೆ, ಕಾದಂಬರಿ, ವಿಮರ್ಶೆ, ಪ್ರಬಂಧ ಮುಂತಾದ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳಲ್ಲಿ ಮುಖ್ಯವಾಗಿ ಕೆಳಸ್ಥರದವರ ಮೇಲೆ ಮೇಲ್ವರ್ಗದವರ ದೌರ್ಜನ್ಯ, ನಿರ್ಗತಿಕ ಹೆಂಗಸರ ಮೇಲೆ ನಡೆಯುತ್ತಿದ್ದ ಲೈಂಗಿಕ ಶೋಷಣೆ, ಮೂಢನಂಬಿಕೆಗಳು, ಸ್ತ್ರೀಪರವಾದ ನಿಲುವು, ಸಮಾನತೆ, ಜಾತಿಮೌಢ್ಯತೆ, ವೈಚಾರಿಕತೆ ಇತ್ಯಾದಿ ಅಂಶಗಳು ವಸ್ತು ವಿಷಯಗಳಾಗಿವೆ. ಹೀಗೆ ಹಲವಾರು ಮಜಲುಗಳಲ್ಲಿ ಸಾಹಿತ್ಯ ರಚಿಸಿರುವ ಇವರಿಗೆ ಹೆಸರು ತಂದುಕೊಟ್ಟ ಕೃತಿಯೆಂದರೆ ಬದುಕು ಕಾದಂಬರಿ. ಈ ಕಾದಂಬರಿಯ ಬಗ್ಗೆ ಯಾರು ಅಧ್ಯಯನ ಮಾಡಿಲ್ಲ, ಮಾಡಿದ್ದರು ಪರಿಪೂರ್ಣವಾಗಿಲ್ಲ ಹಾಗಾಗಿ ಈ ಕಾದಂಬರಿಯ ಬಗ್ಗೆ ಪರಿಪೂರ್ಣ ಅಧ್ಯಯನಗಳು ನಡೆದಿಲ್ಲದಿರುವುದರಿಂದ ಈ ವಿಷಯದ ಬಗ್ಗೆ ಹೆಚ್ಚಿನ ಹೊಸ ಹೊಸ ವಿಚಾರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿರುವುದು ಕೃತಿಯ ಹೆಗ್ಗಳಿಕೆಯಾಗಿದೆ. ಆದುದರಿಂದ ಈ ಕೃತಿಯ ಮುಖ್ಯತೆಯು ಅಧ್ಯಯನಕ್ಕೆ ಮತ್ತೆ ಮತ್ತೆ ಒಳಪಡುವುದರಿಂದ ಬದುಕು ಕಾದಂಬರಿಯ ಬಗ್ಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ೨೦೧೩–೨೦೧೪ ನೇ ಸಾಲಿನ ಎಂ.ಫಿಲ್. ಪದವಿ ನಿಮಿತ್ತ ನಿಬಂಧ ರಚಿಸುವ ಉದ್ದೇಶ ನನ್ನದಾಗಿದೆ.

ಬದುಕು ಕಾದಂಬರಿಯು ಅಲಕ್ಷಿತ ಸಮುದಾಯದ ಸುತ್ತ ನಡೆಯುವ ಕಥಾನಕ. ಕೃತಿಯ ಲೇಖಕಿಯೂ ಅಲಕ್ಷಿತ ಸಮುದಾಯದಿಂದ ಬೆಳೆದು ಬಂದಿರುವುದರಿಂದ ಈ ಸಮುದಾಯದ ಒಳತೋಟಗಳನ್ನು, ಸೂಕ್ಷ್ಮ–ಸಂವೇದನೆಗಳನ್ನು ಅರಿತುಕೊಂಡವರು. ಇವರ ಬದುಕಿನ ವಾಸ್ತವ ಚಿತ್ರಣವನ್ನು ಕಣ್ಣಾರೆ ಕಂಡವರು. ಈ ದಿಸೆಯಲ್ಲಿ ಬದುಕು ಕಾದಂಬರಿಯು ಹಸಿ ಹಸಿಯಾದ ವಾಸ್ತವ ಚಿತ್ರಣ ಹೊಂದಿರುವುದು ಉಲ್ಲೇಖಾರ್ಹ ವಿಷಯವಾಗಿದೆ. ಲೇಖಕಿಯರೇ ಹೇಳುವಂತೆ.

"ಗುಡಿಸಲು ಮಂದಿಯಲಿ ನಾನು ಕಣ್ಣಾರೆ ಕಂಡದ್ದು. ನಾನು ನೇರವಾಗಿ ಅನುಭವಿಸಿದ್ದು. ನನವ್ವ ಚಿಂಗವ್ವ, ಆಯಿ, ಮುತ್ಯರಿಂದ ಕೇಳಿದ್ದು – ಎಲ್ಲರ ಕಲಬೆರಕೆಯ ಮಿಲವಾಟಿ ಈ ಕೃತಿಯಲ್ಲಿದ್ದರೂ ನನ್ನ ಜಿಲ್ಲೆಯ ಕಪ್ಪು ಮಂದಿಯ ಖರೇ ಖರೇ ಜವಾರಿ ಕಥೆ, ಕಾಮ–ಕುಡಿತ ಹಸಿವು ಈ ಮಂದಿಯ ಅವಿಭಾಜ್ಯ ಅಂಗಗಳು, ಬಹುಶಃ ಎಲ್ಲ

ಮಂದಿಯ ಬಾಳಿನದ್ದು ಕೂಡ? ಈ ಭಾಗದ ಹೆಣ್ಣು ಗಂಡುಗಳಿರಲಿ, ಹೊಲಗದ್ದೆ, ಮರಡಿ, ತೋಟ, ಬದುವು-ಬಂದಾರಿ, ಬೇಲಿ ಹಣದಿ ಹಳ್ಳಕೊಳ್ಳ, ಹಕ್ಕಿಪಕ್ಕಿ, ಮೀನು ಕಪ್ಪೆಗಳು ಕೂಡ ನನ್ನನ್ನು ಕಾಡಿಸಿವೆ."

ಹೀಗೆ ಅವರು ಇದುವರೆಗೆ ಬರೆದ ಎಲ್ಲಾ ಕತೆ ಕಾದಂಬರಿಗಳಲ್ಲಿ ಅಭಿವ್ಯಕ್ತಿಸಲು ಪ್ರಯತ್ನಿಸಿರುವ ಅನುಭವಗಳ ಘನಿಕೃತ ರೂಪವಾಗಿ ಬದುಕು ಮೂಡಿ ಬಂದಿದೆ. ಹಾಗಾಗಿ ಈ ಕೃತಿಯು ಮಹಾ ಕಾದಂಬರಿಗಳ ಸಾಲಿಗೆ ಸೇರಿಸಬಹುದಾಗಿದೆ.

ಈ ಕಾದಂಬರಿಯು ಶಿವಳ್ಳಿ ಗ್ರಾಮದ ಜಮಾದಾರ ಮಲ್ಲಪ್ಪ ಕೆಳಗೇರಿಯ ಹಿರಿಯ, ಇವನ ಕುಟುಂಬದ ಕತೆಯಾಗಿ ಕಾದಂಬರಿಯೂ ಬಿಚ್ಚಿಕೊಂಡರೂ, ಇವನ ಕುಟುಂಬದಾಚೆಗೆ ಹತ್ತು ಹಲವಾರು ಪಾತ್ರಗಳು, ಕಥೆಗಳು, ಉಪಕತೆಗಳು ಇಲ್ಲಿ ಚಿತ್ರಿತವಾಗಿದೆ. ಹಾಗಾಗಿ ಇದು ಸ್ವತಂತ್ರ ಪೂರ್ವ ನಿಜಾಮರ ಕಾಲದ ಹೈದರಾಬಾದ್ ಕರ್ನಾಟಕ ಹಳ್ಳಿಯೊಂದರ ಜನ-ಜೀವನವನ್ನು ಸಂಸ್ಕೃಂತಿ ಸಂಕಥನವನ್ನು ತನ್ನೊಡಲಿನಲ್ಲಿಟ್ಟುಕೊಂಡಿದೆ. ದುಡಿಮೆಯನ್ನು ನಂಬಿಕೊಂಡಿರುವ ಕೆಳಗೇರಿ ಮಂದಿಯಲ್ಲಿ ಹೊಟ್ಟೆಯ ಪ್ರಶ್ನೆ ಮುಖ್ಯವಾದಷ್ಟೆ ಹಳ್ಳಿಯ ರೀತಿ-ರಿವಾಜುಗಳು, ಶಾಸ್ತ್ರ-ಸಂಪ್ರದಾಯಗಳು ಮುಖ್ಯವಾಗುತ್ತವೆ. ಅವರ ದೈನಂದಿನ ಜೀವನದ ಒಂದೊಂದು ಚಿಕ್ಕ ಚಿಕ್ಕ ವಿವರಗಳನ್ನು ತೆರೆದಿಡುವ ಈ ಕಾದಂಬರಿಯಲ್ಲಿ ಲೇಖಕಿಯು ಕೆಳಜಾತಿ ಜನರ ಊಟೋಪಚಾರಗಳನ್ನು, ಆಚಾರ-ವಿಚಾರಗಳನ್ನು, ರೂಢಿ-ಸಂಪ್ರದಾಯಗಳನ್ನು, ರೀತಿ-ರಿವಾಜುಗಳನ್ನು ವರ್ಣಿಸಿದ್ದಾರೆ.

ಈ ಕೃತಿಯ ಇನ್ನೊಂದು ವಿಶೇಷತೆಯೆಂದರೆ 'ಜೋಗಣಿ' ಸಂಪ್ರದಾಯದ ಬಗ್ಗೆ ವೈಚಾರಿಕವಾಗಿಕ, ವರ್ಣನಾತ್ಮಕವಾಗಿ ಚಿತ್ರಿಸಿರುವುದು. ಕನ್ನಡ ಸಾಹಿತ್ಯದಲ್ಲಿ ಮೊದಲ ಬಾರಿಗೆ ಜೋಗತಿಯರ ಸಮಸ್ಯೆಯನ್ನು ಅತ್ಯಂತ ಸಾಂದ್ರವಾಗಿ ಚಿತ್ರಿಸಿರುವ ಕಾದಂಬರಿ. ಈ ಸಮಸ್ಯೆಯ ಚಿತ್ರಣವು ಕಾದಂಬರಿಯ ಪ್ರಾದೇಶಿಕತೆಯ ಲಕ್ಷಣವಾಗಿದೆ. ಹೀಗೆ ಹಳ್ಳಿಯ ಜನರ ಮೂಢನಂಬಿಕೆಗಳನ್ನು, ರೀತಿ-ರಿವಾಜುಗಳನ್ನು ಪ್ರಶ್ನಿಸುತ್ತಲೇ ಅದರ ಪರಿಹಾರಕ್ಕೆ ಪರ್ಯಾಯಗಳನ್ನು ಸೂಚಿಸಲಾಗಿದೆ.

ಕೆಳಸ್ತರದ ಜನಸಮುದಾಯದ ಬದುಕಿನ ಅವಿಭಾಜ್ಯ ಅಂಗಗಳಲ್ಲಿ ಕಾಮ ಕೂಡ ಒಂದು ಎಂದಿರುವ ಲೇಖಕಿ ಅದರ ವರ್ಗ ಆಯಾಮವನ್ನು ಮತ್ತು ಲಿಂಗ ಆಯಾಮವನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. ಇಲ್ಲಿ ದುಡಿಯುವ ಜನ ಜಾತಿಭೇದ, ಧರ್ಮಭೇದಗಳನ್ನು ವಯಕ್ತಿಕ ಪ್ರತಿಷ್ಠೆಗಳನ್ನಾಗಿಸದೆ ಮತ್ತು ಅದರ ಆಧಾರದ ಮೇಲೆ ರಾಜಕೀಯ ಮಾಡುವುದಿಲ್ಲ ಎಂಬ ತಾತ್ವಿಕತೆಯ ಹಿನ್ನೆಲೆಯಲ್ಲಿ ಮೂಡಿ ಬಂದಿದೆ.

ಸಾಂಸ್ಕೃತಿಕವಾಗಿ ಕೃತಿಯಲ್ಲಿ ಹಬ್ಬ-ಹರಿದಿನಗಳು, ವೈವಾಹಿಕ ಸಂಬಂಧಗಳು, ಆಚಾರಗಳು ಈ ಕಾದಂಬರಿಯಲ್ಲಿ ವಿಶಿಷ್ಟವಾಗಿ ಮೂಡಿ ಬಂದಿವೆ. ಇಲ್ಲಿಯ ಜನರು ವಿಶೇಷವಾಗಿ ಮೊಹರಂ, ಹೋಳಿ ಹುಣ್ಣಿಮೆ, ಕಾರುಣ್ಣಿಮೆ, ಬಸವಣ್ಣನ ತೇರು, ನಾಗರಪಂಚಮಿ, ಇತ್ಯಾದಿ ವಿಶೇಷ ಸಂದರ್ಭಗಳಲ್ಲಿ ಅವರ ಆಚಾರ-ವಿಚಾರ, ರೂಢಿ-ಸಂಪ್ರದಾಯಗಳ ಮೊತ್ತವನ್ನು ಕಾಣಬಹುದು. ಇಲ್ಲಿ ವಿವಿಧ ಧರ್ಮದವರು ಒಟ್ಟಾರೆಯಾಗಿ ಸೇರಿ ಸಹಭಾಗಿತ್ವದಿಂದ ಆಚರಿಸುವ ಮೊಹರಂ ವಿಶೇಷತೆಯನ್ನು ಪಡೆದುಕೊಳ್ಳುತ್ತದೆ. ಈ ಕೃತಿಯಲ್ಲಿ ಜನಪದೀಯ ಅಂಶಗಳು ಕಂಡು ಬಂದು, ಜಾತ್ರೆಯ ಸಂದರ್ಭದಲ್ಲಿ ಜನರೆಲ್ಲರೂ ಸೇರಿ ತೇರು ಎಳೆಯುವುದು, ಹಸುಗಳ ಮೆರವಣಿಗೆ ಮಾಡುವುದು, ಇತ್ಯಾದಿ ಅಂಶಗಳು ಕಂಡು ಬರುತ್ತವೆ. ಈ ಜಾತ್ರೆಗೆ ಸಂಬಂಧಿಸಿದಂತೆ ಮಾಪುರ ಜಾತ್ರೆಯಲ್ಲಿ ಜೋಗಣಿ ಬಿಡುವ ಸಂಪ್ರದಾಯ ಜಾತ್ರೆಯ ವಿಶೇಷತೆಗಳಲ್ಲಿ ಒಂದಾಗಿದೆ.

ಈ ಕೃತಿಯು ಕೆಳಸ್ತರದ ಜನರ ಜೀವನದ ಚಿತ್ರಣವನ್ನು ಬಿಂಬಿಸುವ ನಿಟ್ಟಿನಲ್ಲಿ ರಚನೆಯಾಗಿದೆ. ಕೆಳಸ್ತರ ಸಮುದಾಯದ ಜನ ಜೀವನದ ಅವಿಭಾಜ್ಯ ಅಂಗ ಸೇಂದಿ ಕುಡಿಯುವುದು. ಇಲ್ಲಿ ಗಂಡು-ಹೆಣ್ಣು ಎಂಬ ಭೇದವಿಲ್ಲದೆ, ವಯಸ್ಸಿನ ತಾರತಮ್ಯವಿಲ್ಲದೆ ಎಲ್ಲರೂ ಒಟ್ಟಿಗೆ ಕುಳಿತು ಸೇಂದಿ ಕುಡಿಯುವುದು ಈ ಜನರ ವಿಶೇಷ ಅಂಶಗಳಲ್ಲಿ ಒಂದಾಗಿದೆ.

ಕಾದಂಬರಿಯ ಆಕರ್ಷಣೀಯ ವಿಶೇಷವೆಂದರೆ ಇದು ರಚನೆಯಾಗಿರುವ ಭಾಷಾಶೈಲಿ. ಅಪ್ಪಟ ಉತ್ತರ ಕರ್ನಾಟಕದ ಭಾಷೆಯಲ್ಲಿ ರಚನೆಯಾಗಿದ್ದು, ಕಾದಂಬರಿಯ ವಸ್ತು ವಿಷಯವನ್ನು ಹಸಿಹಸಿಯಾಗಿ ಚಿತ್ರಿಸಿದ್ದರೂ, ಎಲ್ಲಿಯೂ ಅಶ್ಲೀಲವೆನಿಸದೆ, ಓದುಗರಿಗೆ ಮುಜುಗರವನ್ನುಂಟು ಮಾಡದೆ ಸರಾಗವಾಗಿ ಓದಿಸಿಕೊಂಡು ಹೋಗುವ ಗುಣ ಇದರ ಭಾಷಾ ಶೈಲಿಗಿದೆ.

ಒಟ್ಟಾರೆ ಬದುಕು ಕಾದಂಬರಿಯ ಮುಖ್ಯ ದ್ರವ್ಯ ಜೀವಂತಿಕೆಯ ಅನ್ವೇಷಣೆ, ಜೀವನ ಪ್ರೀತಿಯನ್ನು ಅಖಂಡವಾಗಿ ತುಂಬಿಕೊಂಡಿರುವ ಈ ಕಾದಂಬರಿಯಲ್ಲಿ ಮಾನವನ ನೋವು-ನಲಿವು, ಆಚಾರ-ವಿಚಾರ, ಹಬ್ಬ-ಹರಿದಿನಗಳು, ರೂಢಿ-ಸಂಪ್ರದಾಯಗಳು, ಮೂಢನಂಬಿಕೆ, ಆಹಾರ ಕ್ರಮಗಳು, ವ್ಯವಸಾಯ, ಉಡಿಗೆ-ತೊಡಿಗೆಗಳು, ಹಾದರ-ಪ್ರೇಮ-ಕಾಮ, ಸ್ನೇಹ, ಕಳವು-ಸುಳ್ಳು-ವೈವಾಹಿಕ ಸಂಬಂಧಗಳು, ಸಾಮಾಜಿಕ ಅಸಮಾನತೆ, ಮೇಲ್ವರ್ಗ ಮತ್ತು ಕೆಳವರ್ಗದವರ ನಡುವೆ ನಡೆಯುವಂತೆ ವೈರುಧ್ಯ ಅಂಶಗಳು, ಧಾರ್ಮಿಕ ನಂಬಿಕೆಗಳು, ಹೆಣ್ಣಿನ ಮೇಲಿನ ಲೈಂಗಿಕ ಶೋಷಣೆ ಇತ್ಯಾದಿ ಅಂಶಗಳನ್ನು ಲೇಖಕಿಯು ಈ ಕಾದಂಬರಿಯಲ್ಲಿ ಸವಿಸ್ತಾರವಾಗಿ ವರ್ಣಿಸಿದ್ದಾರೆ.

ಹೀಗೆ ಕೆಳಜಾತಿಯ ಜನರ ಅನುಭವದ ಮೆಗ್ಗಲುಗಳನ್ನು ತೆರೆದಿಡುವುದಷ್ಟೆ ಅಲ್ಲ ಅವಕ್ಕೊಂದು ನಿರ್ಧಿಷ್ಠ ಸಾಮಾಜಿಕ ಸ್ಥಾನಮಾನವನ್ನು ಕಲ್ಪಿಸಿಕೊಟ್ಟು, ಸಾಂಸ್ಕೃತಿಕವಾಗಿ ಮಹತ್ವವಾದದ್ದನ್ನು ನಿರ್ಮಿಸುವ ಮೂಲಕ ಜೀವಂತ ಸಮಾಜದ ಮೇಲೆ ಸಾರ್ವಕಾಲಿಕವಾಗಿ ಪ್ರಭಾವ ಬೀರುತ್ತದೆ.

ಈ ಹಿನ್ನೆಲೆಯಲ್ಲಿ ಸಾಮಾಜಿಕವಾಗಿ ಮಹತ್ವ ಪಡೆದುಕೊಂಡಿರುವ ಈ ಕಾದಂಬರಿಯು ಮತ್ತೆ ಮತ್ತೆ ಅಧ್ಯಯನಕ್ಕೆ ಒಳಪಡುವ ಲಕ್ಷಣ ಹೊಂದಿದೆ. ಹಾಗಾಗಿ ನನ್ನ ಅಧ್ಯಯನದ ಪರಿಧಿಯಲ್ಲಿ ಈ ಕಾದಂಬರಿಯನ್ನು ವಿಶ್ಲೇಷಿಸಲಾಗುತ್ತದೆ.

<u>ಅಡಿ ಟಿಪ್ಪಣಿ :</u>

೧. ಹ್ಯಾಂಗ ಹೇಳಲಿ ನಾನು... (ಲೇಖಕಿಯ ಮಾತು), 'ಬದುಕು' – ಗೀತಾನಾಗಭೂಷಣ, ಪು. X, ಪ್ರಕಟವಾದ ವರ್ಷ ೨೦೧೦.

ಅಧ್ಯಾಯ-೨

ಗೀತಾ ನಾಗಭೂಷಣ ಅವರ ಸಂಕ್ಷಿಪ್ತ ಪರಿಚಯ

ಆಧುನಿಕ ಕನ್ನಡ ಸಾಹಿತ್ಯದ ಹೆಸರಾಂತ ಮಹಿಳಾ ಲೇಖಕಿಯಲ್ಲಿ ಗೀತಾ ನಾಗಭೂಷಣ ಕೂಡ ಒಬ್ಬರು. ಕೆಳವರ್ಗದ ಸಮುದಾಯದಲ್ಲಿ ಹುಟ್ಟಿಬೆಳೆದ ಇವರು ತಮ್ಮ ಸಮುದಾಯದ ನೋವು-ನಲಿವುಗಳನ್ನು ಕಥೆ, ಕಾದಂಬರಿಗಳಲ್ಲಿ ತಂದಿರುವುದು ವಿಶೇಷ.

ಇವರ ಕತೆ, ಕಾದಂಬರಿಗಳಲ್ಲಿ ಕೆಳಸ್ತರದ ಸಮುದಾಯದ ಮೇಲಿನ ದೌರ್ಜನ್ಯ, ಮೇಲ್ವರ್ಗದ ಗೌಡ, ಕುಲಕರ್ಣಿ, ಸಾವುಕಾರರಿಂದ ನಿರ್ಗತಿಕ ಹೆಂಗಸರ ಮೇಲೆ ನಡೆಯುತ್ತಿದ್ದ ಲೈಂಗಿಕ ಶೋಷಣೆ, ಮೂಢನಂಬಿಕೆ, ಆಚಾರ-ವಿಚಾರಗಳು, ರೀತಿ-ನೀತಿಗಳ ವಿರುದ್ಧ ತನ್ನ ನೆಲದ ಜವಾರಿ ಭಾಷೆಯಲಿ ದಿಟ್ಟತನದಿಂದ ಬರೆದ ಏಕೈಕ ಮಹಿಳಾ ಲೇಖಕಿ ಎಂದರೆ ಗೀತಾನಾಗಭೂಷಣ ಅವರು.

ಇವರು ಅನಕ್ಷರಸ್ಥ ಬಡಕುಟುಂಬದಲ್ಲಿ ೨೮.೦೩.೧೯೪೨ರಲ್ಲಿ ಗುಲ್ಬರ್ಗ ಜಿಲ್ಲೆಯ ಸಾವಳಗಿ ಗ್ರಾಮದಲ್ಲಿ ಹುಟ್ಟಿದರು. ತಂದೆ ಶಾಂತಪ್ಪ ಕಲ್ಬುರ್ಗಿಯ ಬಟ್ಟೆ ಗಿರಿಣಿಯಲ್ಲಿ ಕಾರ್ಮಿಕನಾಗಿದ್ದ. ತಾಯಿ ಶರಣಮ್ಮ ಎಮ್ಮೆ ಕಟ್ಟಿಕೊಂಡು ಹಾಲು ಮಾರಿ ಜೀವಿಸುತ್ತಿದ್ದ ಬಡ ಹೆಣ್ಣುಮಗಳು.

ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದಾಗಲೇ, ಅಪ್ಪ ಹೇಳುತ್ತಿದ್ದ ಕಥೆಗಳನ್ನು ಕೇಳಿ ತಾನೂ ಕೂಡ ಝಾನ್ಸಿ ರಾಣಿಯಂತೆಯೂ, ಸರೋಜಿನಿ ನಾಯ್ಡುವಿನಂತೆಯೇ ಆಗಬೇಕೆಂದು ಕನಸು ಕಾಣುತ್ತಿದ್ದಳು.

ಪುಸ್ತಕದ ಪ್ರೀತಿ ಮತ್ತು ಓದುವ ಅಧಮ್ಯ ಆಸೆಯೊಂದಿಗೆ, ಮನೆಯ ಬಡತನದ ಅಗತ್ಯಗಳನ್ನು ಸರಿದೂಗಿಸಬೇಕಾದ್ದರಿಂದ ಕಲ್ಬುರ್ಗಿಯ ಕಲೆಕ್ಟರ್ ಕಛೇರಿಯಲ್ಲಿ ಗುಮಾಸ್ತೆ ಕೆಲಸಕ್ಕೆ ಸೇರಿದರು. ಇವರು ಜಿಲ್ಲೆಗೆ ಮೊಟ್ಟ ಮೊದಲ ಏಕೈಕ ಮಹಿಳಾ ಗುಮಾಸ್ತೆ ಕೂಡ ಆಗಿದ್ದರು. ಆರುವತ್ತರ ದಶಕದಲ್ಲಿ ಗುಲ್ಬರ್ಗ ನಗರದ ಯಾವ ಕಛೇರಿಯಲ್ಲಿಯೂ ಹೆಣ್ಣುಮಕ್ಕಳು ಕ್ಲರ್ಕ್ ಆಗಿ ಕೆಲಸ ಮಾಡುತ್ತಿರಲಿಲ್ಲವಾದ್ದರಿಂದ ಜನರ ಕುಹಕಕ್ಕೆ ಬಲಿಯಾದರು ಉದ್ಯೋಗ ಮಾಡಿಕೊಂಡೆ ವಿದ್ಯಾಭ್ಯಾಸ ಮುಂದುವರೆಸಿ ಎಂ.ಎ., ಬಿ.ಎಡ್., ಮುಗಿಸಿ ಕಾಲೇಜು ಪ್ರಿನ್ಸಿಪಾಲ್ ಆಗಿ ಕಾರ್ಯ ನಿರ್ವಹಿಸಿ ನಿವೃತ್ತರಾದರು.

ಬದುಕಿನೊಂದಿಗೆ ಬರವಣಿಗೆಯೂ ಜೊತೆ ಜೊತೆಗೆ ಹೆಜ್ಜೆ ಹಾಕಿತು. ಬಡತನದ ಬದುಕಿನಲ್ಲಿ ಕಾಣದ ಚಂದದ ವಸ್ತ್ರ, ಒಡವೆಗಳು, ರುಚಿ-ರುಚಿ ಅಡುಗೆ-ತಿಂಡಿಗಳು ಸುಂದರ ಕನಸಿನ ಆಕಾಂಕ್ಷೆಗಳಾದವು. ಗೀತಾ ಅವರು ಹೈಸ್ಕೂಲಿನಲ್ಲಿದ್ದಾಗಲೇ ಕಥೆ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡಿದ್ದರು. ಅ.ನ.ಕೃ., ಟಿ.ಕೆ.ರಾಮರಾವ್, ತ್ರಿವೇಣಿ, ಎಂ.ಕೆ.ಇಂದಿರಾ ಇವರ ಕಾದಂಬರಿಗಳಲ್ಲಿನ ಜನಪ್ರಿಯ ಶಿಷ್ಟ ಭಾಷೆ ಗೀತಾ ಅವರಿಗೆ ಇಷ್ಟವಾಗಿತ್ತು, ಹರೆಯದ

ದಿನಗಳ ನೂರಾರು ಕನಸುಗಳು ಕಣ್ಣ ಮುಂದಿದ್ದರಿಂದ ಅವತ್ತಿನ ಲೇಖಕರು ಬರೆಯುತ್ತಿದ್ದ ಮನರಂಜನಾ ಕಥೆ, ಕಾದಂಬರಿಗಳು ಬಹಳ ಖುಷಿ ಕೊಟ್ಟವು. ಆದ್ದರಿಂದ ಈತರ ಲೇಖಕಿಯರು ಬರೆಯುತ್ತಿದ್ದಂತೆ ಬಹುಮಹಡಿಯ, ಭವ್ಯ ಬಂಗಲೆಯಲ್ಲಿ ವಾಸಿಸುವ ಚೆಂದದ ಚೆಲುವೆಯರ ಬಗ್ಗೆ, ಅಂಥವರ ಹೈಸೊಸೈಟಿಯ ಒಡನಾಟದ ಬಗ್ಗೆ, ಉಡುಗೆ-ತೊಡುಗೆಗಳ ಬಗ್ಗೆ, ಥಳಕು ಬಳುಕಿನ ಪೈವ್‌ಸ್ಟಾರ್ ಹೋಟಲುಗಳಲ್ಲಿ ತಿಂದುಂಡು ಬದುಕುವ ಜನರ ಬಗೆಯೇ ಬರೆದ ಕಾದಂಬರಿಗಳೆಂದರೆ, 'ಏರಿಳಿತಗಳು', 'ಬದಲಾಗುವ ಬಣ್ಣಗಳು', 'ನನ್ನ ನಿನ್ನ ನಡುವೆ', 'ಆಘಾತ', 'ಅಭಿಮಾನ', 'ಮೊಹಬ್ಬ', 'ನಿನ್ನ ತೋಳುಗಳಲ್ಲಿ', 'ನನ್ನ ಒಲವು ನಿನ್ನ ಚೆಲುವು' ಮುಂತಾದ ಕಾದಂಬರಿಗಳನು ಬರೆದರು ಈ ಕಾದಂಬರಿಗಳಲ್ಲಿ ಬಂಡಾಯದ ಧೋರಣೆಗಳೇನೂ ಇರಲಿಲ್ಲ.

ತಮ್ಮ ಬದುಕಿನಲ್ಲಿ ಕಂಡುಂಡ ಕಹಿ, ಕೆಟ್ಟ ಅನುಭವಗಳು ವೈಯಕ್ತಿಕ ನೋವುಗಳೇ ಒಂದು ರೀತಿಯ ಬಂಡಾಯದ ದನಿಯನ್ನು ಬರಹಕ್ಕಿಳಿಸಲು ಪ್ರೇರಣೆ ನೀಡಿದವು. ಹಿರಿಯರು ನಿರ್ಧರಿಸಿದ ಒಗ್ಗದ ಮದುವೆ ಹೊಂದಾಣಿಕೆಯಿಲ್ಲದೆ ಮುರಿದು ಬಿತ್ತು. ನಂತರ ನಾಗಭೂಷಣ ಅವರನ್ನು ಮೆಚ್ಚಿ ಮದುವೆಯಾದರು ಅದು ಕೂಡ ಹೆಚ್ಚು ಕಾಲ ಉಳಿಯಲಿಲ್ಲ. ಹೀಗೆ ತಮ್ಮ ಬದುಕಿನಲ್ಲಿ ಕಂಡುಂಡ ನೋವಿನ ಸಂಘರ್ಷದ ಅನುಭವಗಳು ಗೀತಾ ಅವರ ಬರಹಕ್ಕೆ ಪೋಷಣೆ ನೀಡಿದವು.

ಒಮ್ಮೆ ಗೀತಾ ಅವರು ತಾಯಿಯ ತವರಾದ ಚುಂಚೂರು ಗ್ರಾಮಕ್ಕೆ ಮನೆ ದೇವತೆ ಮಾಪುರ ತಾಯಿ ದೇವಿಯ ಜಾತ್ರೆಗೆ ಹೋಗಿದ್ದಾಗ ಅಲ್ಲಿ ಕಂಡ ದಲಿತರ ಬೆತ್ತಲೆ ಸೇವೆ ಲೇಖಕಿಯ ಮನಸ್ಸಿನ ಮೇಲೆ ಅಘಾತ ಮೂಡಿಸಿದವು. ಬೆತ್ತಲೆ ಮೈಗೆ ಬೇವಿನ್ಹೊಟ್ಟೆಗೆ ಗಂಧದ್ಹೊಟ್ಟೆಗೆ ಸುತ್ತಿಕೊಂಡು ಹರಕೆ ಹೊತ್ತವರು ದೇವಸ್ಥಾನದ ಸುತ್ತ ಕುಣಿಯುತ್ತಾ ಬರುತ್ತಿದ್ದರು. ಇದೊಂದು ಆ ದೇವಿಯ ಹರಕೆ. ಈ ಬೆತ್ತಲೆ ಸೇವೆಗೆ ಗಂಡು-ಹೆಣ್ಣು, ಹರೆಯದವರು ಎಂಬ ವಯಸ್ಸಿನ ಭೇದವಿರಲಿಲ್ಲ. ಬರೀ ಬೆತ್ತಲೆಯಾಗಿ ನೆತ್ತಿಯ ಮೇಲೆ ಉರಿಯುವ ಸೊಡರಾರತಿಯ ತಟ್ಟೆ ಹೊತ್ತು ಬಾಯಲ್ಲಿ ಬೇವಿನೆಲೆ ಕಚ್ಚಿಕೊಂಡು ಹರಕೆ ಹೊತ್ತವರು ಬರಿಗಾಲಿನಿಂದ ದೇವಿಯ ಗುಡಿ ಸುತ್ತುತ್ತಿದ್ದರು. ಇದನ್ನು ಕಂಡು ಗೀತಾ ಅವರು ರೋಸಿ ಹೋದರು. ಇದಷ್ಟೇ ಅಲ್ಲದೇ ಅವರಿಗೆ ನೋವುಕೊಟ್ಟ ಮತ್ತೊಂದು ಆಚರಣೆಯೆಂದರೆ ಆಗ ತಾನೆ ಮೈನೆರೆದು ಹಸಿ ಬಿಸಿ ಹರೆಯ ಹೊತ್ತ ಅಮಾಯಕ ಹೆಣ್ಣು ಮಕ್ಕಳನ್ನು ದೇವಿಗೆ 'ಜೋಗಿಣಿ' ಅಂಥ ಬಿಡುವುದು. ಮನಸ್ಸಿರಲಿ, ಬಿಡಲಿ ಅವರು ಜೋಗಿಣಿಯಾದ ಅನಂತರ ತಲೆಯ ಮೇಲೆ ಪರಡಿ ಬುಟ್ಟಿಹೊತ್ತು, ಕೊರಳಲ್ಲಿ ಕವಡೆ ಸರ ಹಾಕ್ಕೊಂಡು, ಹಾಡುಗಳನ್ನು ಹಾಡುತ್ತಾ ಭಿಕ್ಷೆ ಬೇಡಬೇಕು. ಅವಳು ದೇವರ ಸೇವೆಗೆ ಮೀಸಲು ಆದರೂ ತನ್ನ ಜೀವನದುದ್ದಕ್ಕೂ ಬೀದಿ ಸೂಳೆಯಾಗಿಯೇ, ಬದುಕಬೇಕು, ಸೂಳೆಯಾಗಿಯೇ ಸಾಯಲುಬೇಕು. ಇವೆಲ್ಲಾ ಗೀತಾ ಅವರ ಕಥೆಯ, ಕಾದಂಬರಿಗಳ ವಸ್ತುವಾದವು.

ಇವರ ಬರಹಕ್ಕೆ ಮತ್ತಷ್ಟು ಪುಷ್ಟಿ ನೀಡಿದ್ದು ಚಂದ್ರಶೇಖರ ಕಂಬಾರರು ಬರೆದ

'ಸಿಂಗಾರವ್ವ ಮತ್ತು ಅರಮನೆ' ಕೃತಿಯನ್ನು ಓದಿ ಮೆಚ್ಚಿಕೊಂಡರು. ಈ ಕೃತಿಯ ಭಾಷೆಯನ್ನ ಓದಿದ ಮೇಲೆ ಮತ್ತಷ್ಟು ಧೈರ್ಯಬಂದಿತು. ಅವರು ಹಿಂದೆ ನೋಡದೆ ತಮ್ಮದೇ ಆಡು ಭಾಷೆಯಲ್ಲಿ ಕೃತಿ ರಚನೆಗೆ ತೊಡಗಿದರು. ಅವರ ಸಮಾಜದ ಹೆಣ್ಣುಮಕ್ಕಳ ಬಗ್ಗೆ ಕಥೆ ಬರೆಯಲು ಆರಂಭಿಸಿದರು. 'ಸುಧಾ' ವಾರ ಪತ್ರಿಕೆಯ ಎಂ.ಬಿ.ಸಿಂಗ್ ಅವರಿಂದ ತುಂಬ ಪ್ರೋತ್ಸಾಹ ಸಿಕ್ಕಿತು. ಅವರ ಪತ್ರಿಕೆಯಲ್ಲಿ ಗೀತಾ ಅವರ ಕಥೆಗಳು ಪ್ರಕಟವಾಗಲು ಆರಂಭವಾದವು.

'ಜೋಗಿಣಿ' ಎಂಬ ಹರಕೆ ಹೊತ್ತು ಸೂಳೆಗಾರಿಕೆಗೆ ಇಳಿಯುತ್ತಿದ್ದವರು ತೀರ ಕೇಳಜಾತಿಯ ಹೊಲೆ ಮಾದಿಗರು. ಮೇಲು ಜಾತಿ ಹೆಂಗಸರ್ಯಾರೂ ಇಂಥ ಹರಕೆ ಹೊರುತ್ತಿರಲಿಲ್ಲ. ಈ ಸಂಗತಿ ಗೀತಾ ಅವರಿಗೆ ಇನ್ನಷ್ಟು ನೋವು ತಂದಿತು. ಮೇಲ್ಜಾತಿಯವರು ಪೂಜೆ, ನೈವೇದ್ಯ ಮಾತ್ರ ಮಾಡುತ್ತಿದ್ದರು. ಇಂತಹ ರೀತಿ ರಿವಾಜುಗಳನ್ನು ಮಾಡಿದ ಮೇಲ್ಜಾತಿಯವರ ಚಾಲಾಕುತನದ ಸಂಚುಗಳನ್ನೆಲ್ಲ ಬರಹದ ಮೂಲಕ ಬಯಲಿಗಿಡುವ ಸಂಕಲ್ಪದಿಂದ ಬರೆದ ಕಾದಂಬರಿಯೇ 'ಮಾಪುರ ತಾಯಿಯ ಮಕ್ಕಳು' ಈ ಕೃತಿಯ ರಚನೆ ಗೀತಾ ಅವರ ಬದುಕಿನ ಮಹತ್ವದ ಘಟ್ಟ.

ತನ್ನ ಜಿಲ್ಲೆಯಲ್ಲಿ ಬರುವ ಹಳ್ಳಿಯ ಕೊಳಗೇರಿಯ ನಗರದ ಝೋಪಡಿ ಪಟ್ಟಿಯ ಮುಗ್ಧ, ಮೂರ್ಖ ಹೆಂಗಸರ ನೂರರು ಸಮಸ್ಯೆಗಳು ಗೀತಾ ಅವರ ಬರವಣಿಗೆಯ ವಸ್ತುಗಳಿಂದವು. ಅನಕ್ಷರಸ್ಥ, ಹಳ್ಳಿಯ ಹಣ್ಣಿನ ನೋವಿನ ಅನುಭವ, ಅವಳ ಶೋಷಣೆಯ ವಿವಿಧ ಮುಖಗಳನ್ನು ಕುರಿತು ಕಥೆಯಾಗಿಸುವಾಗ ಅಲ್ಲಿನವರ ದಿನನಿತ್ಯದ ಆಡು ಭಾಷೆಯಾದ ಜವಾರಿ ಭಾಷೆಯನ್ನು ಬಳಸಿಕೊಂಡು ಬರೆಯತೊಡಗಿದರು. ಈ ನಿಟ್ಟಿನಲ್ಲಿ ಬರೆದ ಕಾದಂಬರಿ 'ನೀಲಗಂಗಾ'. ಇದು ಲಂಕೇಶ್ ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟವಾದಾಗ ಓದುಗರಿಂದಲ್ಲದೆ, ವಿಮರ್ಶಕರಿಂದಲೂ ಮೆಚ್ಚುಗೆ ಪಡೆದುಕೊಂಡಿತು, ಕಾದಂಬರಿಯಲ್ಲಿ ಉಪಯೋಗಿಸಿದ್ದು ಸೌಮ್ಯ ಭಾಷೆಗಿಂತ ಗಟ್ಟಿತನದ, ಒರಟುತನದಿಂದ ಕೂಡಿದ ಜಿಲ್ಲೆಯ ಗಂಡು ಭಾಷೆಯನ್ನು ಓದುಗರು ಸ್ವಾಗತಿಸಿ ಮುಂದಿನ ಕಾದಂಬರಿಗಾಗಿ ಕಾಯತೊಡಗಿದರು.

ನಂತರ ಬಂದ ಕಾದಂಬರಿಯೇ 'ಹಸಿಮಾಂಸ ಮತ್ತು ಹದ್ದುಗಳು' ತರಂಗ ಪತ್ರಿಕೆಯಲ್ಲಿ ಪ್ರಕಟವಾದಾಗ ಇಡೀ ಕನಾಟಕದ ಜನತೆಯಲ್ಲ ದಂಗಾದರು. ಒಬ್ಬ ಹೆಣ್ಣು ಮಗಳಾಗಿ ಲೈಂಗಿಕತೆ, ಲೈಂಗಿಕ ಶೋಷಣೆಯ ಬಗ್ಗೆ ಎಷ್ಟೊಂದು ಧೈರ್ಯವಾಗಿ ಬರೆಯುತ್ತಾಳೆ ಎನ್ನುವ ಮೆಚ್ಚಿಗೆ ಒಂದು ಕಡೆಯಾದರೆ, ಎಂತಹ ನಾಚಿಕೆಟ್ಟವಳು ಎಂಬ ಆರೋಪದ ಮಾತುಗಳು ಕೇಳಿ ಬಂದವು. ಏನು ಅಶ್ಲೀಲ ಬರೀತಾಳ್ರೀ... ಎಂಬ ಟೀಕೆ ಟಿಪ್ಪಣಿಗಳು ಹುಟ್ಟಿಕೊಂಡರೂ ಮತ್ತೆ ಟೀಕೆ ಮಾಡಿದವರುಗಳು ಒಳಗೊಳಗೇ ಕಾದಂಬರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸತೊಡಗಿದರು. ಇದೇ ಕಾದಂಬರಿಯು ದೊರೈ ಭಗವಾನರ ನಿರ್ದೇಶನದಲ್ಲಿ 'ಹೆಣ್ಣಿನ ಕೂಗು' ಎಂಬ ಹೆಸರಿನಿಂದ ಚಲನ ಚಿತ್ರವಾಗಿಯೂ ಜನಪ್ರಿಯತೆ ಗಳಿಸಿತು. ಮುಂದೆ ಹಲವಾರು ಕಾದಂಬರಿಗಳಲ್ಲಿ ವಸ್ತುವಿನ ನಾವೀನ್ಯತೆ, ಬಳಸುವ ಭಾಷೆಯಲ್ಲಿನ

ಹೊಸತನದಿಂದ ಕನ್ನಡ ಸಾಹಿತ್ಯದ ಕಾದಂಬರಿ ಕ್ಷೇತ್ರದಲ್ಲಿ ತಮ್ಮದೇ ಆದ ಭದ್ರವಾದ ನೆಲೆಯನ್ನು ಕಂಡುಕೊಂಡರು.

'ಮಹಾಮನೆ' ಗೀತಾ ನಾಗಭೂಷಣ ಅವರ ಆರಂಭದ ಕಾದಂಬರಿಯಲ್ಲಿ ಒಂದು, ಇದು ಇತರ ಎಲ್ಲಾ ಕೃತಿಗಳಿಂದ ಭಿನ್ನವಾದ ನೆಲೆಯಲ್ಲಿ ರಚಿತವಾಗಿದೆ. ನಂತರ ಬರೆದ 'ಧುಮ್ಮಸ್ಸು' 'ದಂಗೆ', 'ಚಿಕ್ಕಿಯ ಹರೆಯದ ದಿನಗಳು', 'ಬದುಕಲು ಹೋದವರು', 'ಆಸರೆಗಳು', 'ಬದಲಾಗುವ ಬಣ್ಣಗಳು', 'ಮೋಹಾ', 'ಸವತಿ ಶ್ರೀಗಂಧ', 'ಚೈತ್ರದ ಹಾಡು', 'ಏರಳಿತಗಳು', 'ಕಾಗೆ', 'ಮುಟ್ಟಿತು', 'ಬದುಕು', 'ನನ್ನ ನಿನ್ನ ನಡುವೆ', 'ಅವಾಂತರ', 'ಅಭಿಮಾನ' ಮುಂತಾದ ಕಾದಂಬರಿಗಳು ಲಂಕೇಶ್ ಪತ್ರಿಕೆ, ಸುಧಾ, ತರಂಗ, ಪತ್ರಿಕೆಗಳಲ್ಲದೆ, ಐಬಿಎಸ್ ಪ್ರಕಾಶನ, ನವಕರ್ನಾಟಕ ಪ್ರಕಾಶನದಿಂದಲೂ ಪ್ರಕಟಗೊಂಡು ಹೀಗೆ ಒಟ್ಟು ೨೮ ಕಾದಂಬರಿಗಳನ್ನು ಬರೆದು ಪ್ರಕಟಿಸಿದ್ದಾರೆ.

ಇವರ ಸಂಶೋಧನಾ ಕೃತಿ ಎಂದರೆ 'ದುರುಗ ಮುರುಗಿಯರ ಸಂಸ್ಕೃತಿ'ಯಾದರೆ ಕಥಾ ಸಂಕಲನಗಳು 'ಜ್ವಲಂತ', 'ಅವ್ವ ಮತ್ತು ಇತರ ಕತೆಗಳು' ಹಾಗೂ 'ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು' ಖೇಮಣ್ಣ ಸಂಪಾದಿತ ಕೃತಿಯಾದರೆ ಕಿರುತೆರೆಯಲ್ಲಿ ಜೋಗಿಣಿ, ಅವ್ವ, ಸತ್ತ ಹೆಣ್ಣಿನ ಸುತ್ತ, ಜೀವನ ಚಕ್ರ, ನೀಲಗಂಗಾ ಧಾರಾವಾಹಿಯಾಗಿ ಪ್ರಸಾರಗೊಂಡಿವೆ. ಆಕಾಶವಾಣಿಯಲ್ಲಿಯೂ ಸುಮಾರು ೫೦ ಕಥೆಗಳು (ಬದುಕು ನುಂಗುವ ಮಂದಿ, ದಾಳ, ಹುಲಿಗ್ಯಾ, ಮೂಡಿ ಬರ್ತಾನ ಚಂದ್ರಾಮ ನೋಡ..., ಈ ಲೋಕವೆಲ್ಲ ಘೋರs. ವಾಸ್ತವ, ಮಾನಾಪಮಾನ ನಿಮ್ಮದಯ್ಯ, ಇದು ಎಂಥಾ ಲೋಕವಯ್ಯಾ, ಚಕ್ಕರ ಕಟ್ಟಾಚಾಕ್, ಕಳ್ಳು ಬಳ್ಳಿಯ ಕುಡಿಗಳು, ಐಬು, ಸಿರಿ ಸಂಪತ್ತು, ಪಟ್ಟಪಾಡೆಲ್ಲ ಹುಟ್ಟು ಹಾಡಾಗಿ, ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ, ಮಟದಯ್ಯ ಮತ್ತು ಧರ್ಮ, ಗಿರವಿ, ಕುಂಟು ಕಳವುಗಳ ನಡುವೆ ರುಕ್ಕ್ಯಾ, ಬಂಡು, ಭೂಮಿ ಮತ್ತು ಬೀಜ, ಸಂಗಾತಿ, ಹಿಂಸೆ, ಕೆಂಪಾದವೋ ಎಲ್ಲಾ ಕೆಂಪಾದವೋ.... ಮಠದವ್ವ ಆಸರೆಗಳು, ಬೇಲೂ, ಕಪ್ಪು, ಕಮರಿಹೋಗುವ ಕೆಳಜನರು, ಸಾವು, ಗೂಡಿನೊಳಗಿನ ಗುಟ್ಟು, ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ........., ಬೆಳಕಿನೆಡಿಗೆ, ನೀರು ಮತ್ತು ನೆತ್ತರು, ಗರ್ಭ, ಪುಂಡಿ ಪೂಜಾರಿಯಾದಾಗ, ಚಿತ್ತಿ ಮತ್ತು ರಿಕ್ಷಾ, ಬಂಜೆಂಬ ಶಬುದ ಹೊರಲಾರೆ, ನಿತ್ಯನರಳುವ ಮಂದಿ, ಬೇಲಿ, ಸತ್ತ ಹೆಣ್ಣಿನ ಸುತ್ತ, ಅವ್ವ, ಜಲ್ವಂತ, ಗೌಡನ ಗೋರಿ, ದುರಂತ ವೇದನೆಯ ವರ್ತುಳ, ಮತ್ತೆ ಅದೇ ಕಥೆ, ಬಂದ್ ಥೌಲು, ಅಂತ, ಅತಿಕ್ರಮಣ) ಮತ್ತು ೧೫ ನಾಟಕಗಳು ವಿವಿಧ ಕನ್ನಡ ಆಕಾಶವಾಣಿ ಕೇಂದ್ರಗಳಿಂದ ಪ್ರಸರವಾಗಿವೆ.

'ಕಲ್ಲರಳಿ ಹೂವಾಗಿ' ಸಣ್ಣ ಕಥೆಯ ೮ನೇಯ ತರಗತಿಗೆ ೧೬೮೦-೯೯ರವರೆವಿಗೆ, ಅವ್ವ ಮತ್ತು ಇತರ ಕಥೆಗಳ ಕಥಾ ಸಂಕಲನವು ಗುಲ್ಬರ್ಗ ವಿಶ್ವ ವಿದ್ಯಾಲಯದ ಪ್ರಥಮ ಬಿ.ಕಾಂ. ತರಗತಿಗೆ ೧೯೬೨ರಲ್ಲಿ, ಧುಮ್ಮಸ್ಸು ಕಾದಂಬರಿಯು ಕರ್ನಾಟಕ ವಿಶ್ವ ವಿದ್ಯಾಲಯದ ಪ್ರಥಮ ಬಿ.ಕಾಂ. ತರಗತಿಗೆ ೧೬೬೬ ರಲ್ಲಿ ಬದುಕು ಕಾದಂಬರಿ ಎಂ.ಎ., ತರಗತಿಗೆ

ಬೆಂಗಳೂರು ವಿಶ್ವವಿದ್ಯಾನಿಲಯದ ಪಠ್ಯ ಪುಸ್ತಕವಾಗಿ ಆಯ್ಕೆಯಾಗಿದ್ದವು.

ಹೀಗೆ ದಿಟ್ಟತನದಿಂದ ಬರೆದು ಪ್ರಖ್ಯಾತರಾದ ಗೀತಾ ನಾಗಭೂಷಣ ಅವರ ಕೃತಿಗಳಿಗೆ ಹಲವಾರು ಪ್ರಶಸ್ತಿಗಳು ಲಭ್ಯವಾಗಿವೆ. ಅವುಗಳೆಂದರೆ 'ಆಘಾತ' ಕಾದಂಬರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ (೧೯೮೩), ಕರ್ನಾಟಕದ ಸಾಹಿತ್ಯ ಅಕಾಡಮಿಯ ಗೌರವ ಪ್ರಶಸ್ತಿ (೧೯೯೮), ಗುಲ್ಬರ್ಗ ವಿಭಾಗ ಮಟ್ಟದ ಉತ್ತಮ ಉಪನ್ಯಾಸಕಿ ಪ್ರಶಸ್ತಿ (೧೯೯೬), ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿ (೧೯೯೮), 'ಧುಮ್ಮಸ್ಸು' ಕಾದಂಬರಿಗೆ ಸಿರಿವಾರದ ಉಮಾಪತಿ ಚುಕ್ಕಿ ಪ್ರತಿಷ್ಠಾನ, ರಾಯಚೂರು ಪ್ರಶಸ್ತಿ (೧೯೯೫), ಗುಲ್ಬರ್ಗಾದ ಎಸ್.ಆರ್.ಪಾಟೀಲ್ ಪ್ರತಿಷ್ಠಾನದ ಸಾಹಿತ್ಯ ಪ್ರಶಸ್ತಿ, 'ದಂಗೆ' ಕಾದಂಬರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿ (೧೯೯೮), ಕಾಯಕ ರತ್ನ ಪ್ರಶಸ್ತಿ, ಮಹಾಂತ ಜ್ಯೋತಿ ಪ್ರತಿಷ್ಠಾನ (೨೦೦೧), 'ಬದುಕು' ಕಾದಂಬರಿಗೆ ಕೇಂದ್ರ ಸಾಹಿಯ ಅಕಾಡೆಮಿ ಪ್ರಶಸ್ತಿ (೨೦೦೫), ಕನ್ನಡ ಸಾಹಿತ್ಯ ಪರಿಷತ್ತಿನ ಬಿ.ಸರೋಜಾದೇವಿ ಪ್ರಶಸ್ತಿ (೨೦೦೮), ಮಾಣಿಬಾಯಿ ಪಾಟೀಲ ಪ್ರಶಸ್ತಿ (೨೦೦೩), ಕರ್ನಾಟಕ ಲೇಖಕಿಯರ ಸಂಘದ ಅನುಪಮಾ ಪ್ರಶಸ್ತಿ (೨೦೦೫), ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ (೨೦೦೪), ಗುಲ್ಬರ್ಗ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರಶಸ್ತಿ (೨೦೦೮), ಧರ್ಮಸ್ಥಳದ ಸಾಹಿತ್ಯ ಪ್ರಶಸ್ತಿ (೨೦೦೭), ಆಳ್ವಾಸ್ ನುಡಿಸಿರಿಯ ಸಾಹಿತ್ಯ ಪ್ರಶಸ್ತಿ (೨೦೦೬), ಸೀತಾಸುತ ಸಿದ್ದೇಗೌಡ ಸ್ಮಾರಕ ಸಾಹತಿಯ ಪ್ರಶಸ್ತಿ ಮಂಡ್ಯ (೨೦೦೭), ಆರ್ಯಭಟ ಪ್ರಶಸ್ತಿ (೨೦೦೫), ಇವುಗಳಲ್ಲದೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮೊದಲ ಮಹಿಳಾ ಅಧ್ಯಕ್ಷರು (೨೦೦೫-೦೮) ಮತ್ತು ಗದಗದಲ್ಲಿ ನಡೆದ ೭೬ನೇ ಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಮುಂತಾದ ಗೌರವ ಪ್ರಶಸ್ತಿಗಳು ದೊರೆತಿವೆ.

ಹೀಗೆ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿರುವ ಗೀತಾ ಅವರು ಬದುಕು ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲ ದಲಿತ ಲೇಖಕಿಯಾಗಿದ್ದಾರೆ.

ಅಧ್ಯಾಯ–೩

ಬದುಕು ಕಾದಂಬರಿಯಲ್ಲಿ ಸಾಮಾನ್ಯ ಸಮುದಾಯಗಳ ಜೀವನ ಪರಿಕಲ್ಪನೆ

ಕಾದಂಬರಿಯು ಅನಾವರಣಗೊಳ್ಳುವುದು ಮಲ್ಲಪ್ಪಗೌಡನ ಸಂಸಾರ ಮತ್ತು ಅವನ ಕುಟುಂಬದ ಸುತ್ತ ಸುತ್ತುವ ಇತರ ಕುಟುಂಬದ ಚಿತ್ರಣದೊಂದಿಗೆ. ಈ ಕಡೆಯು ನಡೆಯುವುದು ಶಿವಳ್ಳಿ ಮತ್ತು ಕಲ್ಬುರ್ಗಿ ಪ್ರಾದೇಶಿಕತೆಯ ಸುತ್ತ. ಇಲ್ಲಿ ಹಲವಾರು ಜಾತಿಯ ಜನರು ವಾಸವಾಗಿದ್ದು, ಮುಖ್ಯವಾಗಿ ಮೂರು ವರ್ಗಗಳು ಕಂಡು ಬರುತ್ತವೆ. ಮೇಲುವರ್ಗದಲ್ಲಿ ಗೌಡ, ಕುಲಕರ್ಣಿ, ಜಮೀನ್ದಾರ, ರೆಡ್ಡಿ, ಸುಬೇದಾರ, ನಾಯಕರು ಕಂಡು ಬಂದು, ತಮ್ಮ ತಮ್ಮ ಗುಂಪಿಗೆ ನಾಯಕರಾಗಿ ಗುರುತಿಸಿಕೊಳ್ಳುತ್ತಾರೆ. ಇಡೀ ಗ್ರಾಮದ ನಿಯಂತ್ರಣ ಇವರ ಕೈಯಲ್ಲಿದ್ದು, ಊರಿನ ಆಗು ಹೋಗುಗಳಲ್ಲಿ ಮುಖ್ಯಪಾತ್ರವನ್ನು ವಹಿಸುತ್ತಿದ್ದರು. ಇವರು ಶಾಸ್ತ್ರ ಸಂಪ್ರದಾಯದಡಿಯಲ್ಲಿ ಜೋಗತಿ ಬಿಡುವ ಸಂಪ್ರದಾಯದ ಪೋಷಕರು ಆಗಿದ್ದರು. ಇವರ ಮನೋಧೋರಣೆಯ ಹಿಂದೆ ಲೈಂಗಿಕ ತೃಷೆಯನ್ನು ಈಡೇರಿಸಿಕೊಳ್ಳುವ ಸಂಕಲ್ಪ ಇವರಲ್ಲಿತ್ತು. ಹಾಗಾಗಿ ಜೋಗತಿಯರಾಗಿರುವವರು ಮೇಲ್ಜಾತಿಯ ಹೆಣ್ಣುಮಕ್ಕಳಾಗಿರದೆ ಅವರೆಲ್ಲ ಕೆಳಜಾತಿಯ ಹೆಣ್ಣುಮಕ್ಕಳೆ ಆಗಿರುವುದು ಒಂದು ವಿಶೇಷ. ಹಾಗಾಗಿ ದೇವರ ಹೆಸರಿನಲ್ಲಿ ಮೇಲ್ವರ್ಗದವರು ನಡೆಸುವ ಹೀನ ಕೃತ್ಯಗಳು ಸ್ತುತ್ಯಾರ್ಹ ಹಾಗೂ ಇವರಲ್ಲಿ ಕೆಳವರ್ಗದವರ ಶೋಷಣೆಯ ವಿವಿಧ ಮುಖಗಳು ಇವರ ಪಾತ್ರಗಳ ಮುಖೇನ ಕಾದಂಬರಿಯಲ್ಲಿ ವ್ಯಕ್ತವಾಗುತ್ತದೆ.

ಈ ನಾಯಕರು ಕೆಳವರ್ಗದವರ ಅಸಾಯಕತೆಯನ್ನು ದುರುಪಯೋಗಪಡಿಸಿಕೊಂಡು ಅಲ್ಲಿನ ಹೆಂಗಸರನ್ನು ಬಲವಂತವಾಗಿ ಲೈಂಗಿಕತೆಗೆ ಬಳಸಿಕೊಳ್ಳುವುದು, ಇವರ ಹೀನ ವರ್ತನೆಯು ಗೊತ್ತಿದ್ದು ಏನೂ ಮಾಡಲಾಗದ ಅಸಹಾಯಕರಾಗಿರುವ ಕೆಳವರ್ಗದ ಗಂಡಸರ ಮನೋವೇದನೆ, ಈ ಕಾದಂಬರಿಯಲ್ಲಿ ಅನಾವರಣಗೊಳ್ಳುತ್ತದೆ.

ಕಾದಂಬರಿಯಲ್ಲಿ ಕಂಡು ಬರುವ ಕೆಳವರ್ಗದವರೆಂದರೆ ಕಬ್ಬೇಲುಗಾರರು, ಕುರುಬರು, ಗೊಲ್ಲರು, ಪಿಂಚಾರರು, ಬುಡಬುಡಿಕೆಯವರು. ಇಲ್ಲಿ ಎಲ್ಲಾ ಜಾತಿಯ ಜನಾಂಗದವರು ಕಂಡು ಬಂದರೂ ಕಾದಂಬರಿಯಲ್ಲಿ ಕಬ್ಬೇಲುಗಾರರನ್ನು ಹೊರತು ಪಡಿಸಿ ಉಳಿದೆಲ್ಲಾ ಜನಾಂಗದ ಪಾತ್ರ ಚಿತ್ರಣ ಗೌಣವಾಗುತ್ತದೆ. ಕುಬ್ಬೇಲುಗಾರರಲ್ಲಿ ಪ್ರಮುಖವಾದ ವ್ಯಕ್ತಿ ಮಲ್ಲಪ್ಪ ಜಮಾದಾರ.

ಕಾದಂಬರಿಯ ಕೇಂದ್ರ ಬಿಂದು ಜಮಾದಾರ ಮಲ್ಲಪ್ಪನ ಕುಟುಂಬ. ಈ ಜಮಾದಾರನಿಗೆ ಹಿರಿಯವರು ಮಾಡುತ್ತಿದ್ದ ಜಮಾದಾರಿಕೆ ಬಂದಿತ್ತು. ಇವನಿಗೆ ಸರ್ಕಾರದ ಇನಾಮು ಜಮನಿತ್ತು. ಇದು ಬಂದದ್ದು ನಿಜಾಮರ ಆಳ್ವಿಕೆ ಕಾಲದಲ್ಲಿ ಕೆಳಗೇರಿಯಲ್ಲಿ ಶಾಬಾದಿ ಪರಿಸಿ ಚಾವಣಿ ಹಾಕಿದ ಎರಡು ದೊಡ್ಡ ದೊಡ್ಡ ಖೋಲ್ಲಿಗಳು, ಅಡಗಿ ಮನೆ,

ದೇವರ ಮನೆ ಅದರ ಅಜೂಬಾಜೂ ಒಂದು ದೊಡ್ಡ ಮಣ್ಣಿನ ಮುದ್ದಿ ಹೇರಕಿ ಮಾಡಿರೋ ಸಾದಾ ಖೋಲ್ಲಿಗಳು, ಒಕ್ಕಲುತನದ ಬಾರ್ದಾನಿ ಸಾಮಾನು ತುಂಬಲ್ಲಿಕ್ಕೆ, ಮೀನು ಹಿಡಿಯೋ ಬಲೆಗಳು, ಹಗ್ಗಾ ಕಣ್ಣಿ ನುಲಕಿ ಪೆಂಡಿ, ಇತ್ಯಾದಿ ನೂರೆಂಟು ಚಿಲ್ಲರೆ ಸಾಮಾನು ಇಡುತ್ತಿದ್ದರು. ಅವುದರ ನಡುವೆಯೆ ಉದ್ದನೆಯ ಪಡಸಾಲೆ, ಅದಕ್ಕೆ ಹತ್ತಿಕೊಂಡಿದ್ದ ನಾಲ್ಕೆ ನಾಲ್ಕು ಮೆಟ್ಟಿಲು ಇಳಿದರೆ ಮುಂದೆ ಬಲುದೊಡ್ಡ ಅಂಗಳ, ಅಂಗಳದ ಮೂಲೆಯಲ್ಲಿ ನಾಲ್ಕಂಕದ ಧನಗಳ ಕೊಟ್ಟಿಗೆ, ಅಂಗಳದ ತುಂಬ ನೆಲದುದ್ದ ಬೂದು ಬಣ್ಣದ ಬಂಡೆಗಲ್ಲುಗಳ ಹಾಸಿಗೆ ಇತ್ತು.

ಮಲ್ಲಪ್ಪ ಜಮಾದಾರ ಒಬ್ಬನೆ ಮಗ. ಮಲ್ಲಪ್ಪನ ಅಪ್ಪ ತೀರಿಕೊಂಡ ಮೇಲೆ ಮಲ್ಲಪ್ಪನ ಜಬರದಸ್ತು ಶುರುವಾಯಿತು. ಈತನಿಗೆ ಮಲ್ಲವ್ವನನ್ನು ತಂದು ಮದುವೆ ಮಾಡಿದರು. ಹರೆಯದಲ್ಲಿ ತುಂಬಾ ಕಾಮುಕನಾಗಿದ್ದ ಮಲ್ಲಪ್ಪ ಜೋಗತಿಯರ ಶೋಕಿಯನ್ನು ಇಟ್ಟುಕೊಂಡಿದ್ದ. ಈತ ಬೇಟೆಯಾಡುವುದರಲ್ಲಿ ಜಬರದಸ್ತನಾಗಿದ್ದ. ಬೆಳಂದಿಗಳ ರಾತ್ರಿಯಲ್ಲಿ ಬಂದೂಕು ಹಿಡಿದು ಬೇಟೆಗೆ ಹೋದರೆ ಬರಿಗೈಯಲ್ಲಿ ಬರುತ್ತಿರಲಿಲ್ಲ. ಮೊಲ, ಚಿಗರಿ, ಕೋಳಿ, ಕುರಿ, ಪಾರಿವಾಳ, ಕ್ರೌಂಚ ಇವುಗಳ ಖಂಡದ ಅಡುಗೆ ದಿನವು ಒಲೆಯ ಮೇಲೆ ಕುದಿಯುತ್ತಿತ್ತು. ದಿನವೂ ಸೇಂದಿ ಕುಡಿಯುವುದು ಇವರ ಅಭ್ಯಾಸ. ಖಾರದಲ್ಲಿ ಕರಿದ ಶೇಂಗದ ಬೀಜ, ಮಾಂಸದ ತುಂಡನ್ನು ಜೊತೆಗಿಟ್ಟುಕೊಂಡು ಹೆಂಡತಿ ಮಕ್ಕಳೊಂದಿಗೆ ಕುಡಿಯುತ್ತಿದ್ದನು. ಈತನಿಗೆ ೩ ಜನ ಮಕ್ಕಳು, ಶಾಣಮ್ಮ, ಕಾಶಮ್ಮ, ಕಲ್ಯಾಣಿ ಇವರ ಜೊತೆಗೆ ಪರದೇಶಿ ಮಗನಾದ ಫತರೂ, ಇವನನ್ನು ಸ್ವಂತ ಮಗನಂತೆಯೇ ನೋಡಿಕೊಂಡನು. ವ್ಯವಸಾಯ ಮಾಡುವುದರಲ್ಲಿ ಈತ ಯಾರಿಗೇನೂ ಕಮ್ಮಿ ಇರಲಿಲ್ಲ. ಜೋಳ, ಕಡಲೆ, ತೊಗರಿ, ಭತ್ತ ಮುಂತಾದ ಬೆಳೆ ಬೆಳೆಯುತ್ತಿದ್ದ, ಒಕ್ಕಣೆ ಸಂದರ್ಭದಲ್ಲಿ ಎಲ್ಲಾ ಆಳುಗಳಿಗೆ ಊಟ ತಿಂಡಿಯಲ್ಲೇ ಆಗಲಿ ದವಸ ಧಾನ್ಯ ನೀಡುವುದರಲ್ಲೇ ಆಗಲಿ, ಕೈ ಬಿಗಿ ಮಾಡಿಕೊಳ್ಳದೆ ಧಾರಳತನದಿಂದ ನೀಡುತ್ತಿದ್ದನು. ತನ್ನ ತೋಟದ ಮನೆಯಾಳು ಗುರುವಪ್ಪನನ್ನು ಯಾವುದೇ ಭೇದವಿಲ್ಲದೆ ಸರಿಸಮಾನವಾಗಿ ನೋಡಿಕೊಳ್ಳುತ್ತಿದ್ದನು. ತನ್ನ ಮನೆಯ ತೋಟದಾಳುಗಳಿಗೆ ಹಬ್ಬ ಹರಿದಿನಗಳಲ್ಲೇ ಆಗಲೀ ಬಿಡುವಿನ ದಿನಗಳಲ್ಲೇ ಆಗಲಿ, ಮೇಲ್ಜಾತಿಯವರಂತೆ ಈಗ ಬೇರೆ ಬೇರೆ ಅಡುಗೆ ಮಾಡಿಸದೆ ತಾವು ಏನು ಮಾಡಿಕೊಂಡು ತಿನ್ನುತ್ತಿದ್ದರೊ ಅದನ್ನೇ ಎಲ್ಲರಿಗೂ ಹಾಕಿಸುತ್ತಿದ್ದನು. ಎಲ್ಲರ ಜೊತೆ ಮಧ್ಯ ಕುಳಿತು ಈತನು ತಿನ್ನುತ್ತಿದ್ದನು. ಇವನ ಹೆಂಡತಿ ಮಲ್ಲವ್ವ ಸ್ವಭಾವತಃ ರೊಕ್ಕ, ರೂಪಾಯಿ ಕೊಡುವುದರಲ್ಲಿ ಜಿಪುಣಿಯಾದರೂ ಇಕ್ಕೊದೂ, ಬಡಿಸುವುದರಲ್ಲಿ ಧಾರಳತನವಿತ್ತು.

ಕೆಳಗೇರಿಯಲ್ಲಿ ಮತ್ತು ಹೊಲಗೇರಿಯಲ್ಲಿ ಯಾರಾದರೂ ಸತ್ತರೆ ಕೆಟ್ಟರೆ ಮಲ್ಲಪ್ಪ ಜಮಾದಾರ ಅಲ್ಲಿಗೆ ಹೋಗಿ ಅವರ ಕಷ್ಟದಲ್ಲಿ ಭಾಗಿಯಾಗಿ ಸಂತೈಸಿ ರೊಕ್ಕ ರೂಪಾಯಿ ನೀಡುತ್ತಿದ್ದನು. ಹೀಗೆ ಮಲ್ಲಪ್ಪ ಎಲ್ಲರಿಗೂ ಬೇಕಾದ ವ್ಯಕ್ತಿಯಾಗಿದ್ದನು. ಆದರೆ ಇಂತಹ ಮನೆತನದ ಮೇಲೆಯಾವ ಕೆಟ್ಟ ಕಣ್ಣು ಬಿದ್ದಿತೋ ಹುಲಿಯಂತಿದ್ದ ಮಲ್ಲಪ್ಪ ಇಲಿಯಂತಾದ.

ಕಾರಣ ತನ್ನ ೨ನೇ ಮಗಳು ಕಾಶಮ್ಮ ಮೇಲ್ಜಾತಿ ಸಾಹುಕಾರ ಮಗನನ್ನು ಪ್ರೀತಿಸಿದ್ದು, ಇವರನ್ನು ದೂರಮಾಡಿ ಬೇರೆ ಬೇರೆ ಮದುವೆ ಮಾಡಿದರೂ ೩ ವರ್ಷ ಬಿಟ್ಟು ಹಬ್ಬಕ್ಕೆಂದು ಬಂದ ಕಾಶಮ್ಮ ಸಾಹುಕಾರನ ಮಗ ಲಿಂಗರಾಜುವನ್ನು ಬೇಟಿಯಾಗಿ ಸೊಲ್ಲಾಪುರಕ್ಕೆ ಮರಳಿದಳು. ಕೆಲವು ದಿನಗಳಲ್ಲಿ ಲಿಂಗರಾಜು ಸೊಲ್ಲಾಪುರಕ್ಕೆ ಹೋಗಿ ಕಾಶಿಯ ಗಂಡ ಮಾರ್ತಾಂಡನಿಗೆ ತಮ್ಮ ಪ್ರೀತಿಯ ವಿಷಯವನ್ನು ತಿಳಿಸಿ ಕರೆದುಕೊಂಡು ಬಂದು ತನ್ನ ತೋಟದ ಮನೆಯಲ್ಲಿ ಸಂಸಾರ ಹೂಡಿದನು. ಇದರಿಂದ ಅವಮಾನಿತನಾದ ಮಲ್ಲಪ್ಪ ಕುಡಿದ ನಿಶೆಯಲ್ಲಿ ಕೆರೆಗೆ ಹಾರಿ ಜೀವ ತೆತ್ತನು. ಇದೆ ಕೊರಗಿನಲ್ಲಿ ಮಲ್ಲವ್ವ ಹಾಸಿಗೆ ಹಿಡಿದಳು. ಈ ಸಂದರ್ಭದಲ್ಲಿ ಕಲ್ಯಾಣಿಗೆ ತನ್ನ ಅಕ್ಕನ ಮಗಳಾದ ಬೆಳ್ಳಿಯನ್ನು ಕೊಟ್ಟು ಮಾಡಲಾಗಿತ್ತು. ಆ ಸಂದರ್ಭದಲ್ಲಿ ಬೆಳ್ಳಿ ಚೊಚ್ಚಲ ಗರ್ಭಿಣಿಯಾಗಿದ್ದಳು. ಆದರೆ ಮಲ್ಲಪ್ಪನ ಸಾವು ಇಡೀ ಮನೆಯನ್ನು ಆವರಿಸಿದ್ದರಿಂದ ಸುಖ, ಸಂತೋಷ ತುಂಬಿದ ಮನೆಯಲ್ಲಿ ದುಃಖ ತುಂಬಿತು. ಆಗ ಗರ್ಭಿಣಿಗೆ ಮಾಡಬೇಕಾದ ಸೀಮಂತ ಮಾಡಲಿಲ್ಲ. ಚೊಚ್ಚಲ ಹೆರಿಗೆಗೆ ತಾಯಿ ಮನೆಗೆ ಹೋಗಬೇಕಾದ ಬೆಳ್ಳಿ, ಮಲ್ಲವ್ವ ಹಾಸಿಗೆ ಹಿಡಿದಿದ್ದರಿಂದ ಶಾಣಮ್ಮನೇ ಬಂದು ಬಾಣಂತನ ಮಾಡಿದಳು. ಬೆಳ್ಳಿ ಒಂದು ಗಂಡುವಿಗೆ ಜನ್ಮ ನೀಡಿದಳು. ಗಂಡು ಮಗು ಹುಟ್ಟಿದ್ದರಿಂದ ಮಲ್ಲಪ್ಪನೇ ಮೊಮ್ಮಗನ ರೂಪದಲ್ಲಿ ಜನಿಸಿದನೆಂದು ಮಲ್ಲವ್ವ ಚೇತರಿಸಿಕೊಳ್ಳತೊಡಗಿದಳು. ಅವನಿಗೆ 'ಸಣ್ಣಮಲ್ಲು' ಎಂದು ಹೆಸರಿಟ್ಟರು.

ಕಲ್ಯಾಣಿ ಅಪ್ಪನಿಂದ ಬಂದ ಜಮಾದಾರಿಕೆಯನ್ನು ಬಿಟ್ಟು ಬಿಡಲು ಸರ್ಕಾರದ ಕಛೇರಿಗೆ ಹೋಗಿ ರಾಜಿನಾಮೆ ನೀಡಿದ್ದರಿಂದ ಅವನಿಗೆ ಬಂದಿದ್ದ ಇನಾಮಿ ಜಮೀನನ್ನು ವಾಪಸ್ಸು ಪಡೆಯಿತು. ಉಳಿದ ಜಮೀನಿನಲ್ಲಿ ಕಲ್ಯಾಣಿ ಒಕ್ಕಲುತನ ಮಾಡುತ್ತಿದ್ದನು. ಗುರುವಪ್ಪನನ್ನು ಕೆಲಸದಿಂದ ಬಿಡಿಸಿ ಕಲ್ಯಾಣಿ ಮತ್ತು ಫತರು ಬೇಸಾಯ ಮಾಡಲು ಮುಂದಾದರು. ಇವರಿಬ್ಬರಿಗೆ ಹೆಗಲಾಗಿ ಬೆಳ್ಳಿಯು ತೋಟದ ಕೆಲಸದಲ್ಲಿ ಸಹಾಯ ಮಾಡುತ್ತಿದ್ದಳು.

ಕಲ್ಯಾಣಿ ಒಂದು ದಿನ ಸ್ನೇಹಿತರೊಂದಿಗೆ ಸೇಂದಿ ಅಂಗಡಿಗೆ ಕುಡಿಯಲು ಹೋದಾಗ ಮಲ್ಲಪ್ಪನ ಬಗ್ಗೆ ಕಾಶಮ್ಮನ ವಿಷಯವಾಗಿ ಕೆಟ್ಟ ಮಾತನ್ನು ಮುಕಡಪ್ಪ ಮತ್ತು ಅವನ ಸಂಗಡಿಗರು ಆಡುವ ರೀತಿಯನ್ನು ನೋಡಬಹುದು.

"ಹಂತಾ ಹೆಂಗಸರಿಗೆ ಗಂಡಾವಾ ತನ್ನ ಹದ್ದುಬಸ್ತಿನ್ಯಾಗಿ ಇಟ್ಕೋಬೇಕು. ಇಲ್ಲಂದ್ರೆ ಕಡ್ಡು ಬುಟ್ಟಿ ತುಂಬಿ ಊರ ಮುಂದಿನ ಹೊಳೀಗಿ ಹಾಕ್ಬೇಕು ಇವನವ್ವನಾ. ನೀ ಅದೇನು ಮಾಡಲಿಲ್ಲ ಬಿಡು... ಪಾಪ, ಆ ಮಲ್ಲಪ್ಪ ಜಮಾದಾರ ಮರ್ಯಾದಿಗೆ ಅಂಜಿ ತನ್ನ ಜೀವಾನೇ ಕೊಟ್ಟನಂತಪ್ಪ... ಹೊಳಿ ಬಿದ್ದು ಸತ್ತನು".

"ಏಯ್ ಬಿಡೋ... ಏನ್ಹೇಳ್ತೀ... ಅಂವಗೊಬ್ಬ ಹರ್‍ಯಾದ ಮಗಾ ಹಾನಂತಲ್ಲ. ಈಟಿಲ್ಲಾ ಅಗಾ ತನಕಾ ಅಂವಾಯೇನು ಉದ್ದು ಹುರೀತಿದ್ದನೇನು? ನೆನಗೆಲ್ಲಾ ಗೊತ್ತದಾ

ಬಿಡು........ ಎಲ್ಲೋರೂ ಭಾಡಾ ತಿಲ್ಲಕ್ಕ ಬಿದ್ದಿರ್ತಾರ ಮಕ್ಕಳೂ ......" ಎಂದು ತಿರಸ್ಕಾರದಿಂದ ಆಡುತ್ತಿದ್ದರು. ಇದರಿಂದ ಕೋಪಗೊಂಡ ಕಲ್ಯಾಣಿ ಕೋಪವನ್ನು ಸಹಿಸಲಾರದೆ ಮುಕುಡಪ್ಪನಿಗೆ ಜಾಡಿಸಿ ಒದ್ದಾಗ, ಕುಡಿದ ನಿಶೆಯಲ್ಲಿದ್ದ ಮುಕುಡಪ್ಪ ಕೆಳಗೆ ಬಿದ್ದು ತಲೆಗೆ ಕಲ್ಲು ತಾಗಿ ಸಾಯುತ್ತಾನೆ. ಇದರಿಂದ ಕಲ್ಯಾಣಿ ಜೈಲು ಸೇರುತ್ತಾನೆ. ಇಲ್ಲಿಯವರೆಗೆ ಸುಮಾರಾಗಿ ನಡೆಯುತ್ತಿದ್ದ ಇವರ ಸಂಸಾರ ಪೂರಾ ಬೀದಿಗೆ ಬೀಳುತ್ತದೆ. ಕಲ್ಯಾಣಿಗೆ ೧೪ ವರ್ಷ ಜೈಲುಶಿಕ್ಷೆ ಆಗುತ್ತದೆ. ಈ ಸಂದರ್ಭದಲ್ಲಿ ಕಲ್ಯಾಣಿಯನ್ನು ಬಿಡಿಸಲು ಬೆಳ್ಳಿ ದುಡ್ಡಿಗಾಗಿ ಹೊಲ ಮಾರುತ್ತಾಳೆ. ಆದರೂ ಪ್ರಯೋಜನವಾಗುವುದಿಲ್ಲ. ಮತ್ತೇ ತೋಟ ಮಾರಲು ನಿರ್ಧರಿಸಿದ ಬೆಳ್ಳಿಗೆ ಕಾಶಮ್ಮ ಮಾರಲು ಬಿಡದೆ ದುಡ್ಡು ಕೊಡುತ್ತಾಳೆ.

ಕಲ್ಯಾಣಿ ಜೈಲಿಗೆ ಹೋದ ಸಂದರ್ಭದಲ್ಲಿ ಬೆಳ್ಳಿ ಗರ್ಭಿಣಿಯಾಗಿರುತ್ತಾಳೆ. ಹೆಣ್ಣು ಮಗು ಜನಿಸುತ್ತದೆ. ಅದಕ್ಕೆ 'ಸುಕದೇವಿ' ಎಂದು ನಾಮಕರಣ ಮಾಡುತ್ತಾರೆ. ಒಂಟಿಯಾದ ಬೆಳ್ಳಿಯ ಮೇಲೆ ಮೇಲ್ವರ್ಗದ ಕಾಮುಕರ ಕಣ್ಣು ಬೀಳುತ್ತದೆ. ಇದಕ್ಕೆಲ್ಲ ಬಗ್ಗದೆ ಕೂಲಿ ನಾಲಿ ಮಾಡಿ ಸಂಸಾರ ಸಾಗಿಸುತ್ತಾಳೆ. ಕಲ್ಯಾಣಿ ಬಿಡುಗಡೆಯಾದ ಮೇಲೆ ಮೊದಲಿದ್ದ ಹರೆಯವಾಗಲಿ, ಕೆಲಸದಲ್ಲಿ ಆಸಕ್ತಿಯಾಗಲಿ ಇರುವುದಿಲ್ಲ. ಬೆಳ್ಳಿಯ ತಾಯಿ ಶಾಣಮ್ಮನ ಮನೆಯಲ್ಲಿ ಸಣ್ಣಮಲ್ಲು ಓದುತ್ತಿರುತ್ತಾನೆ. ಅಪ್ಪ ಜೈಲಿಗೆ ಹೋಗಿ ಬಂದನೆಂದು ತಿರಸ್ಕಾರದಿಂದ ನೋಡುತ್ತಾನೆ. ನಂತರ ಸಣ್ಣಮಲ್ಲು ಮರಾಠಿ ಹುಡುಗಿಯನ್ನು ಮದುವೆಯಾಗುತ್ತಾನೆ. ಇತ್ತ ಸುಖದೇವಿಯನ್ನು ತನ್ನ ಜಾತಿಯವನೇ ಆದ ಫಕೀರಪ್ಪನ ಮಗನೊಂದಿಗೆ ಮದುವೆ ಮಾಡುತ್ತಾರೆ. ಇತ್ತ ಸಂಸ್ಕಾರದ ಜಂಜಾಟವನ್ನು ನೋಡಿ ಬೇಸತ್ತ ಶಾಣಮ್ಮನ ಮಗ ಶಿವು ಸನ್ಯಾಸಿಯಾಗುತ್ತಾನೆ. ಕೊನೆಗೆ ಬೆಳ್ಳಿ ಕಲ್ಯಾಣಿಯರು ತೀರ್ಥಯಾತ್ರೆಗೆ ಹೋಗಿ ಬಸ್ ಅಪಘಾತದಲ್ಲಿ ಸಾಯುತ್ತಾರೆ.

ಹೀಗೆ ತುಂಬು ಸಂಸಾರಕ್ಕೆ ಜೀವನದಲ್ಲಿ ಅಚಾನಕ್ಕಾಗಿ ಬಂದೆರಗಿದ ಕೆಲವು ಅಹಿತಕರ ಘಟನೆಗಳು ಮಲ್ಲಪ್ಪನ ಕುಟುಂಬದ ಅವಸಾನಕ್ಕೆ ಕಾರಣವಾಗುತ್ತವೆ. ಕಾದಂಬರಿಯು ಈ ಕುಟುಂಬದ ಸುತ್ತಲೇ ತನ್ನ ಪಾತ್ರಗಳನ್ನು ಸುತ್ತಿಕೊಳ್ಳುವುದರಿಂದ ಹಳ್ಳಿಯ ಪ್ರತಿಯೊಂದು ಆಗುಹೋಗುಗಳು ಈ ಕುಟುಂಬದೊಂದಿಗೆ ತಳುಕು ಹಾಕಿಕೊಂಡಿವೆ.

ಇದು ಕೇವಲ ಮಲ್ಲಪ್ಪನ ಮನೆಯ ಸಂಸಾರದ ಕಥೆಯಷ್ಟು ಅಲ್ಲ ಪ್ರಸ್ತುತ ಸಮಾಜದಲ್ಲಿ ಇಂತಹ ಘಟನೆಗಳು ನಡೆಯುತ್ತಿರುತ್ತವೆ. ಒಂಟಿ ಹೆಣ್ಣು ಬದುಕಲು ಸಮಾಜದ ಕಾಮುಕ ಕಣ್ಣುಗಳು ಬಿಡುವುದಿಲ್ಲ ಎಂಬುದು ಇಂದಿಗೂ ಸತ್ಯ.

ಕಾದಂಬರಿಯಲ್ಲಿ ಕಂಡು ಬರುವ ಇನ್ನೊಂದು ವರ್ಗವೆಂದರೆ ಅಲಕ್ಷಿತ ಸಮುದಾಯವಾದ ಹೊಲೆಯರು, ಮಾದಿಗರು. ಇವರ ಜೀವನ ಸ್ಥಿತಿ ಶೋಚನೀಯವಾಗಿದ್ದು, ತಿನ್ನುವ ತುತ್ತು ಅನ್ನಕ್ಕೂ ಪರದಾಟ ನಡೆಸುತ್ತಿದ್ದರು. ಮೈಮೇಲೆ ಸರಿಯಾದ ಬಟ್ಟೆಯಿಲ್ಲದೆ ಇರಲು ಸರಿಯಾದ ಸೂರು ಇಲ್ಲದೆ, ಕಷ್ಟಕರ ಜೀವನ ಇವರದಾಗಿತ್ತು. ಇವರಲ್ಲಿ ಅತಿಯಾದ

ಕಾಮುಕತನ ಇವರ ಬಡತನವನ್ನು ಮತ್ತಷ್ಟು ಪೋಷಿಸುತ್ತಿತ್ತು. ಪರಿಣಾಮವಾಗಿ ಮನೆತುಂಬ ಮಕ್ಕಳು ಅವರಿಗೆ ಸರಿಯಾದ ಪೌಷ್ಠಿಕ ಆಹಾರವಿಲ್ಲದೆ ಬಡಕಲು ದೇಹದಾರಿಗಳಾಗಿ, ಅನ್ನಕ್ಕಾಗಿ ಪರದಾಟದ ಅಲೆದಾಟ ಇವರದಾಗಿತ್ತು.

ಈ ಸಮುದಾಯದ ಜನರು ಮಾಂಸದ ಆಸೆಗಾಗಿ ಹಾಗೂ ಕುಡಿಯುವ ಸೇಂದಿಗಾಗಿ ತಮ್ಮ ಹೆಂಡತಿಯರನ್ನೇ ಮೇಲ್ವರ್ಗದವರಿಗೆ ತಲೆ ಹಿಡಿಯುವ ನೀಚತನ ಇವರಲ್ಲಿ ಕಂಡು ಬರುತ್ತದೆ.

ಲೇಖಕಿ ಹೇಳುವಂತೆ "ಒಂದೆಡ್ಡು ಮಗಿ ಸಿಂದೀಗಿ, ಒಂದೀಸು ರೊಕ್ಕಾ ರುಪೈಗಿ, ಒಂದು ಜೋಡ ಹಳಿ ಧೋತರ, ಅಂಗಿಗೋಳಿಗಿ ಆಸಿಬಿದ್ದು ಊರ ಸವ್ಕಾರ, ಗೋಡ, ಕುಕ್ಕಣ್ಣಿಗೋಳ ಮಗ್ಗಲ ಬಿಸಿ ಮಾಡ್ಲಕ್ಕ ತಮ್ಮ ಹರ್‍ಯಾದ ಹೆಂಡ್ರೀಗಿ ಕರ್‍ಕೊಂಡೊಯ್ದು..."[೩] ಎಂದು ಕೆಳವರ್ಗದವರ ನೀಚತನದ ಕೃತ್ಯವನ್ನು ವಿವರಿಸಿದ್ದಾರೆ. ಇವರಲ್ಲಿ ಹಸಿವಿನ ತೀವ್ರತೆ, ಕಳ್ಳರಾಗಿ, ಸುಳ್ಳರಾಗಿ ಹಾದರವನ್ನು ಮಾಡುವಂತೆ ಮಾಡುವಲ್ಲಿ ಪ್ರಮುಖವಾದ ಕಾರಣವಾಗಿತ್ತು.

ಕಾದಂಬರಿಯಲ್ಲಿ ಊಟೋಪಚಾರಗಳ ವಿಚಾರದಲ್ಲಿ ಮೇಲ್ವರ್ಗ ಮತ್ತು ಕೆಳವರ್ಗದವರಲ್ಲಿ ಭಿನ್ನತೆಯಿದೆ. ಮೇಲ್ಜಾತಿಯವರ ಊಟೋಪಚಾರಕ್ಕಿಂತ ಕೆಳಜಾತಿಯವರ ಊಟೋಪಚಾರದಲ್ಲಿ ಭಿನ್ನತೆಯಿತ್ತು. ಜಮಾದಾರ ಮಲ್ಲಪ್ಪನ ಮನೆಯಲ್ಲಿ ಕಂಡು ಬರುವ ಆಹಾರ ಪದ್ಧತಿಗಳೆಂದರೆ ಪುಡಿಪಲ್ಯ, ಹುಣಚಿಕಾಯಿ ಕಾರ ಕೆನೆಮೊಸರು, ಜೋಳದರೊಟ್ಟಿ, ಉಳಭಾನ, ಗೋಧಿ, ಚಪಾತಿ, ಗಟ್ಟಿ ಪಲ್ಯ, ತಳಸಿದ ಕಡ್ಲಿಪಲ್ಯ, ಅಕ್ಕಿಬಾನ ಹೋಳಿಗೆ, ಸಜ್ಜೆರೊಟ್ಟಿ, ಸಜ್ಜಕ್ಕಿ, ಉಪ್ಪಿಟ್ಟು, ಮಂಡಕ್ಕಿ ಸಂಡ್ಲಿಗೆ, ಇವು ಸಸ್ಯಾಹರಗಳು, ಕೋಳಿ ಪಲ್ಯ ಕುರಿಖಂಡದ ಪಲ್ಯ, ಮೀನು, ಟಗರು, ಉಡ, ಮೊಲ, ಪಾರಿವಾಳದಂತಹ ಪ್ರಾಣಿಗಳು ಮಾಂಸಹಾರದಲ್ಲಿ ಬಳಸಲಾಗುತ್ತಿತ್ತು. ಇವರು ಸಸ್ಯಾಹಾರಿ ಮಾಂಸಹಾರಿಗಳೆನ್ನದೆ ಒಟ್ಟಿಗೆ ಕೂತು ತಿನ್ನುವ ಪದ್ಧತಿ ಇವರಲ್ಲಿ ಕಾಣಬಹುದು. ಹೀಗೆ ಇವರು ತಮಗೆ ಇಷ್ಟವಾದ ಬಗೆಯ ಬಗೆ ಆಹಾರವನ್ನು ತಿನ್ನುತ್ತಿದ್ದರು.

ಆದರೆ ಹೊಲೆಯರು ಮತ್ತು ಮಾದಿಗರಲ್ಲಿ ಸಜ್ಜೆ ನುಚ್ಚು, ತಂಗಳ ನುಚ್ಚು, ಮಜ್ಜಿಗೆ, ಸಜ್ಜಿ ಕಡಬು ತಿಳಿನುಚ್ಚು, ಉಪ್ಪು ಖಾರ ಹಾಕಿ ಗಂಜಿ ಕಾಯಿಸಿ ಕುಡಿಯುತ್ತಿದ್ದರು. ಹೀಗೆ ಊಟೋಪಚಾರದಲ್ಲಿ ಗೀತನಾಗಭೂಷಣರವರು ಅವರ ಆಹಾರ ಕ್ರಮವನ್ನು ಸವಿಸ್ತಾರವಾಗಿ ವಿವರಿಸಿದ್ದಾರೆ.

ಕಾದಂಬರಿಯಲ್ಲಿ ವಿವಿಧ ವರ್ಗದವರ ನಡುವೆ ಇರುವ ಭಿನ್ನತೆಯನ್ನು ಉಡುಗೆ ತೊಡುಗೆಗಳಲ್ಲಿಯು ಗುರುತಿಸಬಹುದು. ಮೇಲ್ವರ್ಗದ ಮನೆಯವರು ಕರಿಚಂದ್ರಕಾಳಿ ಸೀರೆ. ಇಳಕಲ್ ಸೀದರೆ, ಜರಿಯಂಚಿನ ಸೀರೆ ಖಾದಿಗೆ ಗಪ್ಪಿನ ಸೀರೆ ಜರತಾತಿ ಸೀರೆ, ದಾಡಿ ಸೀರೆ ಟೋಪಾಸೆರಗಿನ ಸೀರೆ, ರೇಷ್ಮೆ ಸೀರೆ, ಸಾಂಪುರಿ ಸೀರೆ, ಕಾಟನ್ ಸೀರೆ ಇವುಗಳ ಜೊತೆಗೆ ಗುಳೇದಗುಡ್ಡ, ಸೂರ್ಯನ ಮತ್ತು ತೇರಿನ ಚಾಪಿವಿರುವ ಕುಪ್ಪುಸಗಳ ವರ್ಣನೆಯನ್ನು

ನೀಡಿದ್ದಾರೆ. ಪುರುಷರ ತೊಡುಗೆಗಳೆಂದರೆ ದೂತರ, ರುಮಾಲು, ಶಲ್ಯ, ಮನೆಗಳಲ್ಲಿ ಹಾಸಲು ಮತ್ತು ಹೊದಿಯಲು ಬಟ್ಟೆಗಿರಣಿಗಳಲ್ಲಿ ನೇಯ್ದಂತಹ ಕೌದಿಗೆಗಳನ್ನು ಬಳಸಾಗುತ್ತಿತ್ತು. ಕೆಳವರ್ಗದ ಅಂದರೆ ಹೊಲೆಯರು ಮತ್ತು ಮಾದಿಗರ ಮನೆಯಲ್ಲಿ ಉಡಲು ಒಳ್ಳೆ ಬಟ್ಟೆಗಳಿಲ್ಲದೆ ತೇಪೆಹಾಕಿರುವಂತ, ಹರಿದು ಹೋಗಿರುವಂತ ಉಡುಗೆ ತೊಡುಗೆಗಳು ಕಾಣಬರುತ್ತವೆ. ಹೊದೆಯಲು ಮತ್ತು ಹಾಸಲು ಅರಕಲು ಮತ್ತು ತೂತು ಬಿದ್ದ ಕಂಬಳಿಗಳು ಕೆಳವರ್ಗದವರ ಮನೆಯಲ್ಲಿ ಕಂಡುಬರುತ್ತದೆ. ನಾಗರೀಕತೆಯ ನವೀನ ಬಗೆಯ ಉಡುಗೆ ತೊಡಗೆಗಳು ಚಲಾವಣೆಯಲ್ಲಿದ್ದರೂ ಕೂಡ ಅಂದಿನ ಬಟ್ಟೆ ಬರೆಗಳ ವ್ಯಾಮೋಹದಿಂದ ಅಲ್ಲಿಯ ಜನ ಹೊರಬಂದಂತೆ ಕಂಡುಬರುವುದಿಲ್ಲ.

ಸಾಮಾಜಿಕ ಸಂಸ್ಕೃತಿಯಡಿಯಲ್ಲಿ ಬರುವ ಹಬ್ಬಗಳು ಕೂಡ ವಿಶಿಷ್ಟವಾದ ಮಹತ್ವವನ್ನು ಪಡೆದಿವೆ. ಇಲ್ಲಿ ಆಚರಿಸುವ ಪ್ರಮುಖ ಹಬ್ಬಗಳೆಂದರೆ ಹೋಳಿ ಹುಣ್ಣಿಮೆ, ಸೀಗೆ ಹುಣ್ಣಿಮೆ, ಶಿವರಾತ್ರಿ, ಕಾರುಣ್ಣಿಮೆ, ಮೊಹರಂ, ಯುಗಾದಿ, ಎಳ್ಳಮವಾಸ್ಯೆ, ನಾಗರ ಪಂಚಮಿ, ಕಾಮದಹನ, ಶರಣ-ಬಸಪ್ಪನ ತೇರು, ಮಾಪುರ ದೇವಿಯ ಜಾತ್ರೆ ಇಲ್ಲಿ ಆಚರಿಸಲ್ಪಡುವ ಹಬ್ಬಗಳು. ಕೇಳಗೇರಿಯವರ ಮರಗಮ್ಮ, ಅಣ್ಣಮ್ಮಪ್ಪ, ತಾಯಿ ಲಕ್ಷ್ಮಿಗೋಳ್ಳದ ಲಕ್ಕವ್ವ, ನಾಗಾವಿ ಎಲ್ಲಮ್ಮ ಗುಡ್ಡಾದ ಮಲ್ಲಯ್ಯ, ಖಾಜಾ ಬಂದೇ, ನವಾಜ್, ಮೋಹರಂ, ಇತ್ಯಾದಿ ಹಿಂದೂ ಮುಸ್ಲಿಂ ದೇವರ ಹಬ್ಬಗಳು ಇಲ್ಲಿ ಆಚರಿಸಲ್ಪಡುತ್ತಿದ್ದವು. ಮತ್ತೆ ಕೆಲವೊಂದು ವೇಳೆ ಮೇಲ್ಜಾತಿಯವರೆ ಬೇರೆ ದೇವರಗಳ ಪೂಜೆ ಮಾಡಿದರೆ, ತೀರ ಕೇಳಗೇರಿಯವರುಗಳೇ ಬೇರೆ ಬೇರೆ ದೇವರುಗಳ ಪೂಜೆಯನ್ನು ಮಾಡುತ್ತಿದ್ದರು.

ಹಿಂದೂ ಮುಸ್ಲಿಂ ಎಂಬ ಭೇದವಿಲ್ಲದೆ, ಮೇಲ್ವರ್ಗ ಮತ್ತು ಕೆಳವರ್ಗ ಎಂಬ ತಾರತಮ್ಯವಿಲ್ಲದೆ, ಸಾಮರಸ್ಯ ಮನೋಭಾವದಿಂದ ಹಬ್ಬಗಳನ್ನು ಆಚರಿಸುವ ಸಹಕಾರ ಮನೋಧರ್ಮ ಈ ಜನರ ವಿಶೇಷ ಗುಣವಾಗಿತ್ತು.

ಇಲ್ಲಿನ ಬೇಸಾಯ ಪದ್ಧತಿಯೂ ಕೂಡಾ ಪ್ರಾದೇಶಿಕ ಭಿನ್ನತೆಯಿಂದ ಕೂಡಿದೆ. ಮಳೆಯನ್ನೇ ಆಶ್ರಯಿಸಿ ಬೇಸಾಯ ಮಾಡುವ ಇಲ್ಲಿನ ಜನಾಂಗ, ಗೋಧಿ, ಜೋಳ, ಸಜ್ಜೆ, ನವಣೆ, ಕಡಲೆ, ತೊಗರಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದರು. ಒಕ್ಕಣೆ ಮಾಡುವ ಸಂದರ್ಭದಲ್ಲಿ ಸಾಂಪ್ರದಾಯಿಕವಾಗಿ ಪೂಜೆ ಪುನಸ್ಕಾರ ಮಾಡುವ, ದವಸ ಧ್ಯಾನ್ಯಗಳನ್ನು ನಿರ್ಗತಿಕರಿಗೆ ದಾನಮಾಡುವ ಪದ್ಧತಿ ಕಂಡು ಬರುತ್ತದೆ.

ಧಾರ್ಮಿಕ ಪರಿಕಲ್ಪನೆಯಡಿಯಲ್ಲಿ ಪರಂಪರಾಗತವಾಗಿ ಬಂದಂತಹ ರೂಢಿ ಸಂಪ್ರದಾಯಗಳಿಗೆ ಜೋತುಬಿದ್ದು, ವಿವೇಚನಾ ರಹಿತವಾದ ಆಚರಣೆಗಳು ಕಂಡು ಬರುವ ಪ್ರಮುಖ ಅಂಶಗಳು. ಅವುಗಳಲ್ಲಿ ಈ ಭಾಗದ ಪ್ರಸಿದ್ಧ ದೇವತೆ ಎಲ್ಲಮ್ಮ. ಈ ದೇವಿಯ ಹೆಸರಿನಲ್ಲಿ 'ಜೋಗತಿ' ಅಥವಾ 'ದೇವದಾಸಿ' ಬಿಡುವ ಅನಿಷ್ಟ ಸಂಪ್ರದಾಯವೂ ಒಂದು.

ಇದರ ದುರುಪಯೋಗಪಡಿಸಿಕೊಂಡು ಮೇಲ್ವರ್ಗದವರು ತಮ್ಮ ಲೈಂಗಿಕ ತೃಷೆಗಾಗಿ

ಜೋಗತಿಯನ್ನು ಬಳಸಿಕೊಳ್ಳುವ ಕೆಟ್ಟ ಸಂಪ್ರದಾಯವು ಧರ್ಮದ ಅಡಿಯಲ್ಲಿ ನಡೆಯುವ ಅಮಾನವೀಯ ಆಚರಣೆಯಾಗಿದೆ.

ಹಾಗೆಯೇ ಮಾಪುರದೇವಿಯ ಜಾತ್ರೆಯಲ್ಲಿ ಆಚರಿಸುವ ಬೆತ್ತಲೆ ಪೂಜೆ ಇದೊಂದು ಕೆಳವರ್ಗದವರಲ್ಲಿ ಕಂಡುಬರುವ ಹರಕೆ ರೂಪದ ಆಚರಣೆ. ಈ ಆಚರಣೆ ಮೇಲ್ವರ್ಗದಲ್ಲಿ ಕಂಡು ಬರದೆ ಕೇವಲ ಕೆಳವರ್ಗದವರಲ್ಲೇ ಕಂಡು ಬರುವುದು. ಅವರ ಅನಕ್ಷರತೆ ಮತ್ತು ಅಜ್ಞಾನದ ಕೊರತೆ ಆಗಿರುವುದು ಕಟು ಸತ್ಯ. ಇಂತಹ ದುಷ್ಟ ಆಚರಣೆಗಳಿಗೆ ಮೇಲ್ವರ್ಗದವರ ಸಹಕಾರ ಮತ್ತು ಪೋಷಣೆ ಇರುವುದು ದುರದೃಷ್ಟಕರ.

ಕಾದಂಬರಿಯಲ್ಲಿ ಕಲ್ಬುರ್ಗಿ ನಗರ ಜಿವನ ಶೈಲಿಯನ್ನು ಒಳಗೊಂಡ ಪಟ್ಟಣ. ಇಲ್ಲಿಯ ಜನರು ಬೇರೆ ಬೇರೆ ಹಳ್ಳಿಗಳಿಂದ ಬಂದು ನೆಲೆಸಿದ್ದು ವಿವಿಧ ಕಾಯಕವೃತ್ತಿಯನ್ನು ಮಾಡುತ್ತಿದ್ದರು. ಇಲ್ಲಿ ವಿವಿಧ ಜಾತಿ, ಧರ್ಮ, ಭಾಷೆಯ ಜನರು ವಾಸವಾಗಿದ್ದರು. ಆದರೂ ಇವರಲ್ಲಿ ಸಹಕಾರ ಮನೋಭಾವವಿತ್ತು. ಹಳ್ಳಿಗಳಂತೆಯೇ ಇವರಲ್ಲಿ ಆಚಾರ ವಿಚಾರಗಳಲ್ಲಿ ಮೌಢ್ಯತೆಯಿತ್ತು. ಹಬ್ಬ ಹರಿದಿನಗಳು, ಜಾತ್ರೆಗಳೂ ಇಲ್ಲಿಯೂ ಸಹ ನಡೆಯುತ್ತಿದ್ದವು. ಆಧುನಿಕ ಮದ್ಯಪಾನಗಳಾದ ಬ್ರಾಂದಿ, ವಿಸ್ಕಿ ಸೇವನೆ ಸಾಮಾನ್ಯವಾಗಿತ್ತು. ಕೊಲೆ, ದರೋಡೆ, ಸುಲಿಗೆಯಂತಹ ಅಹಿತಕರ ಚಟುವಟಿಕೆಗಳು ಕೂಡ ಆಗಾಗ್ಗೆ ನಡೆಯುತ್ತಿದ್ದವು. ಅಧಿಕಾರವುಳ್ಳಂತಹ ಜನರು ಬಡವರ ಮೇಲೆ ತಮ್ಮ ದರ್ಪವನ್ನು ತೋರ್ಪಡಿಸುತ್ತಿದ್ದರು.

ಹೀಗೆ ಲೇಖಕಿ ಕಾದಂಬರಿಯಲ್ಲಿ ಕಂಡು ಬರುವ ಎಲ್ಲಾ ಜಾತಿ, ಜನಾಂಗದ, ಧರ್ಮದ ಜೀವನ ಪರಿಕಲ್ಪನೆಯನ್ನು ಕಟ್ಟಿ ಕೊಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಇದು ಕೇವಲ ಉತ್ತರ ಕರ್ನಾಟಕದ ಕಡೆ ಮಾತ್ರವಲ್ಲ ಎಲ್ಲಾ ಪ್ರದೇಶಗಳಲ್ಲಿ ಅವರದೇ ಆದ ಜೀವನ ಪರಿಕಲ್ಪನೆಗಳು ಇರುವುದು ಕಂಡು ಬರುತ್ತದೆ.

ಅಡಿ ಟಿಪ್ಪಣಿ :

೧. ಬದುಕು – ಗೀತಾ ನಾಗಭೂಷಣ, ಲೋಹಿಯಾ ಪ್ರಕಾಶನ, ಬಳ್ಳಾರಿ, ಪುಟ ಸಂ. ೩೭೫

೨. ಅದೇ ಪು. .... ಪುಟ ಸಂ. ೪೭೫.

೩. ಅದೇ ಪು. .... ಪುಟ ಸಂ. ೨೮೯.

ಅಧ್ಯಾಯ–೪

ಬದುಕು ಕಾದಂಬರಿಯಲ್ಲಿ ಬರುವ ಸಾಂಸ್ಕೃತಿಕ ವಿವರಗಳು

ಕಾದಂಬರಿಯಲ್ಲಿ ಬರುವ ಜನ ಸಮುದಾಯವು ಸಾಂಸ್ಕೃತಿಕವಾಗಿ ವೈವಿಧ್ಯತೆಯನ್ನು ಹೊಂದಿದವರಾಗಿದ್ದರು. ಇವರ ಉಡುಗೆ–ತೊಡುಗೆಗಳು, ಆಹಾರ ಪದ್ಧತಿ, ಆಚಾರ–ವಿಚಾರಗಳು ರೂಢಿ–ಸಂಪ್ರದಾಯಗಳು, ಹಬ್ಬ–ಹರಿದಿನಗಳು ಇವರ ವೈವಾಹಿಕ ಸಂಬಂಧಗಳು ಮುಂತಾದವುಗಳಲ್ಲಿ ಸಾಂಸ್ಕೃತಿಕ ಅಂಶಗಳು ಕಂಡು ಬರುತ್ತವೆ.

ಹಬ್ಬ ಹರಿದಿನಗಳು ಮತ್ತು ರೂಢಿ ಸಂಪ್ರದಾಯಗಳು

ಇವರು ವಿವಿಧ ರೀತಿಯ ಹಬ್ಬಗಳನ್ನು ಆಚರಿಸುತ್ತಿದ್ದರು. ಅದರಲ್ಲಿ ಮಾಪುರ ತಾಯಿಯ ಜಾತ್ರೆಯು ಸಾಂಸ್ಕೃತಿಕ ಅಂಶಗಳಿಂದ ಕೂಡಿರುವಂತಹದ್ದು. ಇಲ್ಲಿನ ಜನರ ಹಬ್ಬದ ಪೂರ್ವ ತಯಾರಿಯಾಗಿ ಬಟ್ಟೆ ಬರೆಗಳನ್ನು ಒಗೆಯುವುದು, ಕೆಲವು ಮನೆಗಳಲ್ಲಿ ಗೋಡೆ, ನೆಲಕ್ಕೆಲ್ಲ ಮಣ್ಣು ಹೆಂಡಿ ಕೂಡಿಸಿ ರಾಡಿ ಮಾಡಿ ಸಾರಿಸುತ್ತಿದ್ದರು. ಮ್ಯಾಗೇರಿಯಲ್ಲಿರುವ ಕೆಲವು ಮನೆಗಳಿಗೆ ಸುಣ್ಣ ಬಳಿಯುತ್ತಿದ್ದರು, ಉಳ್ಳವರ ಮನೆಗಳ ಗೋಡೆಗಳಿಗೆ ಬಣ್ಣವನ್ನು ಬಳಿಯುತ್ತಿದ್ದರು. ಹೀಗೆ ಜಾತ್ರೆ ಬಂದರೆ ಸಾಕು, ವಾರಕ್ಕೆ ಮೊದಲೇ ಶಿವಳ್ಳಿಯಷ್ಟೆ ಅಲ್ಲದೆ ಸುತ್ತಮುತ್ತಿನ ಹತ್ತು ಹರದಾರಿಯವರೆಗಿನ ಹಳ್ಳಿಗಳಲ್ಲಿಯ ಮ್ಯಾಗೇರಿ, ಕೆಳಗೇರಿಗಳೆಲ್ಲ ಶುಚಿಯಾಗುತ್ತಿದ್ದವು. ಹೊಲೆಯರು, ಮಾದಿಗರು, ಕಾಟಕರು, ಕಬ್ಬಲಿಗರ, ಕುರುಬ, ತಳವಾರ, ಬ್ಯಾಡಗೊಲ್ಲರಂತೇಳಿ ಹಲವು ಹದಿನೆಂಟು ತರದ ಶೂದ್ರರ ಗುಡಿಸಲುಗಳಲ್ಲಿ ಹೆಂಡಿರಾಡಿಯಿಂದ ಮೈಸಾರಿಸಿಕೊಂಡು ನೆಲವನ್ನು ನುಣ್ಣಗೆ ಮಾಡುತ್ತಿದ್ದರು. ಹೀಗೆ ಮಡಿಯಾದ ಮೇಲೆ ಮುಟ್ಟಾದ ಹೆಂಗಸರು ಮನೆಯೊಳಗೆ ಬರುವ ಹಾಂಗಿಲ್ಲ. ಗಂಡ–ಹೆಂಡತಿ ಒಂದೇ ಹಾಸಿಗೆಯಲ್ಲಿ ಮಲಗೋ ಹಾಗಿರಲಿಲ್ಲ. ಚುಂಚೂರು ಶಿವಳ್ಳಿಯಿಂದ ಹರಿದಾರಿಯಷ್ಟು ಚುಂಚುರು ಮಾಪುರ ತಾಯಿ ದೇವಿ ಅಂದರೆ ಭಾಳ ಪ್ರಸಿದ್ಧ ದೇವತೆ ಇಲ್ಲಿ ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಇಲ್ಲಿಗೆ ಎತ್ತಿನ ಗಾಡಿಯ ಮೂಲಕ ಹೆಂಗಸರು ಮತ್ತು ಮಕ್ಕಳು ಕುಳಿತುಕೊಂಡು, ಗಂಡಸರು ನಡೆದುಕೊಂಡು ಬರುತ್ತಿದ್ದರು. ಈ ಜಾತ್ರೆಗೆ ವಾರಕ್ಕೆ ಮೊದಲೆ ಸುತ್ತಮುತ್ತಲ ಹಳ್ಳಿಯವರು ಸಿದ್ಧತೆ ಮಾಡಿಕೊಂಡು ಬರುತ್ತಿದ್ದರು. ಮಲ್ಲಪ್ಪ ಜಮಾದಾರನ ಮನೆಯ ಹೆಣ್ಣು ದೇವತೆಗಳಲ್ಲಿ ತುಳಜಾಪುರ ಅಂಭಾಬಾವನಿ, ಗೊಳ್ಯಾದ ಲಕ್ಕವ್ವ, ನಾಗಾಯಿ ಎಲ್ಲವ್ವ ಮೊದಲಾದವುಗಳಲ್ಲಿ ಚುಂಚುರು ಮಾಪುರ ತಾಯಿಯು ಬಂದು. ದೇವಿಯ ನೆನೆದ ಬನ್ನಿ ಗಿಡಕ್ಕೆ ಮೊದಲ ಪೂಜೆ ಆರಂಭವಾಗುವ ಮೂಲಕ ಜಾತ್ರೆ ಸುರುವಾಗುತ್ತದೆ. ಏಕೆಂದರೆ ಆ ಗಿಡವನ್ನು ಒಳಗೆ ಮಾಡಿಕೊಂಡೇ ಸುತ್ತಮುತ್ತ ಗುಡಿ ಕಟ್ಟಿದ್ದಾರೆ. ಬನ್ನಿ ಗಿಡದ ಬೊಡ್ಡೆಗೆ ಆತು ಕುಂತಿರುವ ಕಟ್ಟಿಗೆಯ ದೊಡ್ಡ ಗುಬ್ಬಿಯೇ ಮಾಪುರ ದೇವಿ, ಅವಳ ಮುಂದೆ ಕುಂತಿರುವ ಐದು ಸಣ್ಣ ಸಣ್ಣ ಗುಬ್ಬಿಗಳು ಅವಳ ಮಕ್ಕಳು. ಈ ದೇವಿಯ ಪೂಜಾರಿಯು ಹೊಲೆಯ ಜನಾಂಗಕ್ಕೆ ಸೇರಿದವನು. ಈ ದೇವಿ ಹೊಲೆ ಮಾದಿಗರ ಹಕ್ಕಿನ

ದೇವತೆಯಾಗಿ ಕಂಡು ಬರುತ್ತಾಳೆ. ಉಚ್ಚ ಕುಲದವರು ಈ ದೇವಿಗೆ ಪೂಜೆ ಮಾಡುತ್ತಾರಾದರೂ ಕೆಳವರ್ಗದವರಲ್ಲಿರುವ ಬೆತ್ತಲೆ ಪೂಜೆ, ತಲೆ ಮೇಲೆ ತಂಬಿಟ್ಟಿನಾರತಿ ಹೋರುವುದು. ಜೋಗಣಿ ಬಿಡುವುದು ಇಂಥ ಅಮಾನವೀಯ, ಅನಾಗರೀಕ ಪೂಜಾ ರೀತಿ-ರಿವಾಜುಗಳು ಮೇಲ್ಜಾತಿ ಮಂದಿಯಲಿಲ್ಲ. ಆದರೂ ಸಹ ಊರಗೌಡನ ಮನೆಯಿಂದಲೆ ಮೊದಲ ಕುಂಬದ ನೈವೇದ್ಯ ಬರುತ್ತಿದೆ. ಅವನ ಹರಿಕೆಯ ಕುರಿಯೇ ಮೊದಲು ಬಲಿಯಾಗುತ್ತದೆ. ನಂತರ ಮಲ್ಲಪ್ಪ ಜಮಾದಾರನ ಮನೆಯಿಂದ ಹೋತದ ನೈವೇದ್ಯ ಪ್ರತಿವರ್ಷ ಸಲ್ಲುತ್ತದೆ. ಅದಕ್ಕೆಂದೆ ಮಾಪುರದೇವಿ, ಮೋಹರಂ ಮತ್ತು ಮನೆಲಕ್ಷ್ಮಿ ಕುರಿ ಎಂದು ಹೆಸರೇಳಿ ಹರಕೆ ಬಿಡುತ್ತಿದ್ದನು. ಹಬ್ಬವು ಆಗತಾದಿ ಅಮಾವಾಸ್ಯೆಯ ದಿನ ಪ್ರಾರಂಭವಾಗಿ ಬಾದಾಮಿ ಅಮಾವಾಸ್ಯೆ ತನಕ ಒಂದು ತಿಂಗಳ ತನಕ ನಡೆಯುತ್ತದೆ. ಆ ತಿಂಗಳ ಪ್ರತಿ ಶುಕ್ರವಾರ ಭರ್ಜರಿ ಜಾತ್ರೆ ನಡೆಯುತ್ತದೆ. ಮಲ್ಲಪ್ಪ ಜಮಾದಾರ ಮನೆಯಲ್ಲಿ ಜಾತ್ರೆಯ ಹೊರಡುವ ಮುನ್ನ ಅಂಗಳದಲ್ಲಿ ನಾಲ್ಕು ಒಲೆಗಳನ್ನು ಹಾಕಿ ಹಂಚಿಟ್ಟು ನೆರೆಹೋರೆಯವರಾದ ಮಾಳವ್ವ, ಕುರುಬರ ನಿಂಗವ್ವ, ತಳವಾರ ಅಂಬವ್ವ, ಸಾಬವ್ವ, ಸಂಜೆಯವರೆಗೂ ರೊಟ್ಟಿಯನ್ನು ತಟ್ಟಿ ತಟ್ಟಿ ಕೊಟ್ಟಿಗೆಯಲ್ಲಿ ಚಾಪೆಯನ್ನು ಹಾಸಿ ಅವುಗಳ ಮೇಲೆ ಹರಹುತ್ತಿದ್ದರು. ಅವು ಆರಿದ ನಂತರ ಗಂಡಸರು ಬಂದು ಜೋಡಿಸಿ, ಅವುಗಳನ್ನು ತಡಗಿನ ಬ್ಯಾರೆಲ್ನಲ್ಲಿ ಜೋಡಿಸಿಟ್ಟು ಮುಬ್ಬೆ, ಮುಚ್ಚಣಿಕೆಯನ್ನು ಬಿಗಿದು ಕಟ್ಟಿ ಇಡುತ್ತಿದ್ದರು. ಅಂಗಳದ ಮೂಲೆಯಲ್ಲಿ ಹುಳಿಬಾನದ ಎರಡು ದೊಡ್ಡ ಅರಿವೆಗಳ ತಯಾರಾಗಿ ಆರಲು ಕುಂತಿದ್ದವು. ಅವರ ತೋಟದವೇ ಆದ ಮೆಣಸಿನ ಕಾಯಿ, ಬೆಳ್ಳುಳ್ಳಿ, ಅವುಗಳನ್ನೆಲ್ಲಾ ಸುಲಿದು ಕುಟ್ಟಿ ಸಿಲ್ವಾರದ ಡಬ್ಬಿಗೆ ಹಾಕಿ ಮುಚ್ಚಿಟ್ಟು ಮೇಲೊಂದು ಬುಟ್ಟಿಯಲ್ಲಿ ಕಟ್ಟಿದ್ದರು. ಆ ರಾತ್ರಿಯಲ್ಲಿ ಕೇರಿಯ ಗಂಡಸರು ಬಂದು ಎತ್ತಿನ ಬಂಡಿಯಲ್ಲಿ ಸಾಮಾನುಗಳ ತುಂಬಿದರು. ಕೇರಿಯ ನಾಲ್ಕಾರು ಮನೆಯಲ್ಲಿ ಹರಕೆಯ ಕುರಿ-ಕೋಳಿಗಳಿದ್ದು, ಜೊತೆಗೆ ಜಮಾದಾರ ಮಲ್ಲಪ್ಪನ ಕುರಿಯು ಇತ್ತು. ಜಮಾದಾರ ಮಲ್ಲಪ್ಪನ ಸಂಬಂಧಿಕರು ಬಂಧುಗಳು, ನೆರೆಯವರು ಎಲ್ಲರೂ ಸೇರಿ ಹತ್ತು ಬಂಡಿಗಳಲ್ಲಿ ಹೊರಡಲು ಸಿದ್ಧತೆ ಮಾಡಿಕೊಂಡಿದ್ದರು. ಹೆಂಗಸರು ಬಂಡಿಯಲ್ಲಿ ಕುಳಿತರೆ ಗಂಡಸರು ಬೆಳಂದಿಗಳು ರಾತ್ರಿಯಲ್ಲಿ ನಡೆದು ಚುಂಚುರು ತಲುಪಿದರು.

ಅಲ್ಲಿ ಬೇವಿನ ಮರದಡಿ ಬಿಡಾರ ಹೂಡಿ ಎತ್ತುಗಳನ್ನು ಮರಕ್ಕೆ ಕಟ್ಟಿ ಸಾಮಾನುಗಳನ್ನು ಕೆಳಗಿಳಿಸಿದರು. ಅಲ್ಲಿಯೇ ದೊಡ್ಡ ಒಲೆಗಳನ್ನು ಹಾಕಿ ಪೂಜೆ ಮಾಡಿ, ಆ ಒಲೆಯ ಮೇಲೆ ದೊಡ್ಡ ಹಂಡೆಯನ್ನಿಟ್ಟು ಹೆಸರಿಟ್ಟರು. ಹರೆಕೆಯ ಬಲಿಗೆಂದು ತಂದಿದ್ದ ಕುರಿಕೋಳಿಗಳನ್ನು ಹಿಡಿದುಕೊಂಡು ದೇವಸ್ಥಾನದ ಹತ್ತಿರ ಹೋಗಿ, ಅವುಗಳ ಕುತ್ತಿಗೆಗೆ ಹೂಮಾಲೆ ಹಾಕಿ, ಹಣೆಗೆ ಅರಿಸಿನ ಕುಂಕುಮ ಹಚ್ಚಿ ಪೂಜಾರಿ ಆರತಿ ಎತ್ತಿ ಅದರ ಮೈಗೆ ನೀರು ಚುಮುಕಿಸಿದನು. ಮೈಮೇಲೆ ನೀರು ಬಿದ್ದ ಕೂಡಲೆ ಹೋತ ಮೈ ಅಲ್ಲಾಡಿಸಿತು.

"ದೇವಿ ಅಪ್ಪಣೆ ಕೊಟ್ಟಾಳೋ ಮಲ್ಲಪ್ಪ... ಹೂಂ" ಅಂದನು ಪೂಜಾರಿ. ಅಲ್ಲಿಯೇ ನಿಂತಿದ್ದ ಹೊಲೆಯರಿಬ್ಬರು ಹೋತವನ್ನು ಹಿಡಿದುಕೊಂಡು ತಲೆಯನ್ನು ಕತ್ತರಿಸಿದರು. ಆ

ಕುರಿಯಲ್ಲಿ ಬಂದ ರಕ್ತದಿಂದ ಪೂಜಾರಿಯು ಮಲ್ಲಪ್ಪ ಜಮಾದಾರನ ಹಣೆಗೆ ಹಚ್ಚಿದನು. ಇದೇ ತರ ಬಲಿಯು ನಡೆಯುತ್ತಿತ್ತು.

ಹೀಗೆ ಹಲಗೆ ಬಾಜಿನ ಡೊಳ್ಳಗಳೊಂದಿಗೆ ಭಕ್ತರು ಊರೋರುಗಳಿಂದ ಬಂದು ದೇವಿಯ ಗುಡಿಯ ಸಿಡಿಗಟ್ಟಿಗೆ (ಬಲಿ ಕೊಡುವ ಕಲ್ಲು) ತಮ್ಮ ತಮ್ಮ ಹರಕೆಯ ಕುರಿ ಕೋಳಿಗಳನ್ನು ಬಲಿಕೊಡುತ್ತಿದ್ದರು. ಆ ಬಲಿ ಕೊಟ್ಟ ನಂತರ ಬಿಡಾರದ ಸ್ಥಳದಲ್ಲಿ ಚರ್ಮ ಸುಲಿದು, ಕುಯ್ದು ಕತ್ತರಿಸಿ, ಎಲ್ಲಾವನ್ನು ಹಾಕದೆ, ತೊಡೆ, ಕಾಲು ಚಪ್ಪೆಯನ್ನು ತಾಯಿಯ ಪ್ರಸಾದವೆಂದು ಮನೆಗೆ ಒಯ್ಯುತ್ತಿದ್ದರು. ಉಳಿದದನ್ನು ತುಂಡು ಮಾಡಿ ಕತ್ತರಿಸುತ್ತಿದ್ದರು. ಅದರಲ್ಲಿ ಕರಿಕಾಳಜ್ಜ ಮತ್ತು ಬಿಳಿಕಾಳಜ್ಜವನ್ನು ದೇವರ ನೈವೇದ್ಯಕ್ಕೆ ಇಡುತ್ತಿದ್ದರು. ಉಳಿದುದನ್ನು ದೊಡ್ಡ ಸಿಲ್ವಾರದ ಡಬ್ಬಿಯಲ್ಲಿ ಖಂಡ ಕುದಿಯಲು ಇಡುತ್ತಿದರು. ದೇವರಿಗೆಂದೆ ಎತ್ತಿಟ್ಟಾ ಕರಿಕಾಳಜ್ಜ ಮತ್ತು ಬಿಳಿಕಾಳಜ್ಜಗಳನ್ನು ಮುತ್ತೈದೆಯರು ಬಂದು ಮೀಸಲು ಅಡಿಗೆಯೆಂದು ತಯಾರು ಮಾಡುತ್ತಿದ್ದರು. ಇದಲ್ಲದೆ ಎಣ್ಣೆ ಹೋಳಿಗೆ ತಯಾರಿ, ಅನ್ನದ ತಯಾರಿ, ಒಂದು ಕಡೆಯಾದರೆ, ಇನ್ನೊಂದು ಕಡೆ ತಂದಿದ್ದ ಸೇಂದಿಗೆ ಹೂವು ಹಣ್ಣು ಪೂಜೆ ಸಲ್ಲಿಸಿ ದೇವರಿಗೆ ಅರ್ಪಣೆ ಮಾಡಿ ಮೊದಲು ಐದು ಜನ ಮುತ್ತೈದೆಯರಿಗೆ ಕುಡಿಯಲು ನೀಡಿ ಆನಂತರ ಉಳಿದವರು ಕುಡಿಯುತ್ತಿದ್ದರು. ಇದೇ ರೀತಿ ಗುಡಿಯ ಬಯಲಿನುದ್ದಕ್ಕೂ ಒಲೆಗಳನ್ನಿಟ್ಟು ಅಡುಗೆ ತಯಾರಿ ನಡೆಸಲಾಗುತ್ತಿತ್ತು. ಅಡಿಗೆಯಾದ ನಂತರ ಮಾಡಿದ ಅಡುಗೆಯನ್ನು ದೇವರಿಗೆ ನೈವೇದ್ಯ ನೀಡಿ, ಅನಂತರ ಉಳಿದ ಮಂದಿಗೆಲ್ಲಾ ಪ್ರಸಾದ ವಿನಿಯೋಗ ನಡೆಯುತ್ತಿತ್ತು. ಪ್ರಸಾದ ನೈವೇದ್ಯಕ್ಕೆ ಎಣ್ಣೆ ಹೋಳಿಗೆ, ಅಕ್ಕಿ ಭಾನ, ಗರ್ಭಗುಡಿಯ ಮಾಪುರ ತಾಯಿಗೆ, ಮತ್ತೆ ಕುರಿ ಖಂಡದ ಕಳ್ಳು, ಕಳಚು ತುಂಡುಗಳು, ಭಾನದ ನೈವಿಧ್ಯೆ ಅದೆ ದೇವಿಯ ಸಿಡಿತಲೆಗೆ ಅರ್ಪಿಸುತ್ತಿದ್ದರು. ದೇವಿಗೆ ತಂದಿದ್ದ ಕೆಂಪು ಸೀರೆ, ಕುಪ್ಪಸ, ಉಂಡಕ್ಕಿ, ದಂಡೆ, ಅಕ್ಕಿ ಕೊಬ್ಬರಿ ಬಟ್ಟಲು ಅಡಕೆಗಳನ್ನು ಮುತ್ತೈದೆಯರು ಮತ್ತೊಂದು ಕಡೆ ಎಡೆಹಿಡಲು ಹೊತ್ತೊಯ್ಯುತ್ತಿದ್ದರು. ಕೆಲವರು ಅಲ್ಲಿಯೇ ಇದ್ದ ಬಾವಿಯಲ್ಲಿ ಮಿಂದು ಹಸಿಯುಡಿಗೆಯಲ್ಲಿ ತಾವು ಉಳಿದುಕೊಂಡ ಸ್ಥಳದಿಂದ ದೇವಿಯ ಗುಡಿಯ ತನಕ ದಿಂಡ ನಮಸ್ಕಾರ ಹಾಕುತ್ತಿದ್ದರು.

ಮತ್ತೊಂದು ಕಡೆ ಕೆಳವರ್ಗದ ಗಂಡಸರು ಮತ್ತು ಹೆಂಗಸು ಬೆತ್ತಲೆಯಾಗಿ, ಮೈಗೆ ಬೇವಿನ ಸೊಪ್ಪನ್ನು ಕಟ್ಟಿಕೊಂಡು ನೆತ್ತಿಯ ಮೇಲೆ ಉರಿಯುವ ತಣ್ಣಾರಾತಿ ಹೊತ್ತು ಬಾಯಲ್ಲಿ ಬೇವಿನ ಎಲೆಕಚ್ಚಿ ಹಿಡಿದು ಹಲಗೆ ಬಾಜೀನ ಡೋಳ್ಳಿನ ಸಮೇತ ಮೆರವಣಿಗೆ ಬಂದು ದೇವಿಯ ಗುಡಿಯನ್ನು ಸುತ್ತುತ್ತಿದ್ದರು. ಅವರ ಹಿಂದೆ ಬಂಧುಗಳು ಗಟ್ಟಿಯಾಗಿ ಊಧೋ ಊಧೋ ಎಂದು ದೇವಿಗೆ ಜೈಕಾರ ಹಾಕಿ ಸೇವೆ ಸಲ್ಲಿಸುತ್ತಿದ್ದರು.

ಈ ಜಾತ್ರೆಯ ಮತ್ತೊಂದು ವಿಶೇಷವೆಂದರೆ ಜೋಗುಣಿ ಬಿಡುವುದು. ಜನರು ಕಷ್ಟ ಕಾರ್ಪಣ್ಯ ಬಂದಾಗ ದೇವರ ಬಳಿಹೋಗಿ ಹಲವಾರು ಬಗೆಯ ಹರಕೆ ಹೋರುವುದು ಸಹಜ. ಆದರೆ ಈ ಭಾಗದಲ್ಲಿ ತಮ್ಮ ಕಷ್ಟ ನಿವಾರಣೆಯಾದರೆ ಚೊಚ್ಚಲ ಹೆಣ್ಣು ಮಗಳು

ಮೈ ನೆರೆದರೆ ದೇವಿಯ ಸೇವಿಗೆ ಬೀಡುತ್ತವೆಎಂದು ಹರಕೆ ಹೋರುತ್ತಾರೆ. ಅದೇ ರೀತಿಯಂತೆ ಮೈನೆರೆದಾಗ ಆ ಹೆಣ್ಣುಮಗುವನ್ನು ಈ ಜಾತ್ರೆಯಲ್ಲಿ 'ಜೋಗಣಿ' ಎಂಬ ಹೆಸರಿನಲ್ಲಿ ದೇವರ ಸೇವೆಗೆ ಬೀಡುತ್ತಾರೆ.

ಜೋಗಣಿ ಎಂದರೆ ಮಾಪುರ ತಾಯಿಯ ಸೇವೆಗೆ ಪೂರ್ತಿಯಾಗಿ ಮೀಸಲಾದ ಹೆಣ್ಣು ಅವಳು ಸಾಯುವವರೆಗೂ ಮದುವೆಯಾಗುವಂತಿಲ್ಲ. ಇವಳನ್ನು ಪಟ್ಟಕ್ಕೆ ಹಾಕಿಕೊಂಡ ಗೌಡನೋ ಕುಲಕರ್ಣಿಯೋ, ಸಾಹುಕಾರನೋ ಅವಳಿಗೆ ಪಟ್ಟದ ಖರ್ಚನ್ನು ನೋಡಿಕೊಳ್ಳುತ್ತಾರೆ. ಪಟ್ಟ ಎಂದರೆ ದೊಡ್ಡ ರೇಷ್ಮೆ ಸೀರೆ. ಕುಪ್ಪಸ ಬಂಗಾರದ ಒಡವೆ ವಸ್ತ್ರ. ತಾಳಿ ಸಾಮಾನು ಕಾಲುಂಗರ ಮೊದಲಾದ ಸಾಮಾನುಗಳನ್ನು ತಂದು ಅವಳಿಗೆ ಸುರಿಸುತ್ತಿಗೆ ಮೀಸಿ ಅವಳ ಎಡಕ್ಕೆ ಒಂದು ತಲವಾರ ಇಟ್ಟು ಅದನ್ನು ಗಂಡನೆಂದು ಸಿಂಗರಿಸಿ ಅದರೊಂದಿಗೆ ಅವಳಿಗೆ ಮದುವೆಯ ಶಾಸ್ತ್ರಗಳೆಲ್ಲವನ್ನು ಮಾಡಿ ತಾಳಿಕಟ್ಟುವುದು. ಅದರೊಂದಿಗೆ ತಲೆಯ ಮೇಲೆ ಬುಟ್ಟಿಯಂತಹ ಪರಡಿ ಹೋರಿಸಿ ಬಗಲಲ್ಲಿ ಚೌಡಿಕೆ ಕೊಟ್ಟರೆ ಮುಗಿಯಿತು. ಅಂದಿನಿಂದ ಅವಳು ಮಾಪುರ ತಾಯಿಯ ಜೋಗಣಿಯಾಗುತ್ತಾಳೆ. ಅಂದು ರಾತ್ರಿ ಪಟ್ಟಾಕ್ಕೆ ಹಾಕಿಕೊಂಡವನು ಅವಳ ಮೈಮೀಸಲು ಮುರಿದು, ಕನ್ಯತ್ವವನ್ನು ಕಳೆದು ಹೆಣ್ಣು ಮಾಡುತ್ತಾನೆ. ಅಷ್ಟೇ ಮುಂದೆಲ್ಲಾ ಅವಳು ದೇವಿಯ ಹೆಸರಿನ ಮೇಲೆ ಬಂದ ಗಂಡಸರಿಗೆಲ್ಲ ಸರಗು ಹಾಸುತ್ತ, ಮಗ್ಗಲು ಬಿಸಿ ಮಾಡುತ್ತಾ ಅವರ ಕಾಮದ ತಿಂಡಿಗೆ ಬಲಿಯಾಗುತ್ತಾ, ದಿನ ಕಳೆಯಬೇಕು. ಅವಳ ಹುಟ್ಟುವ ಮಕ್ಕಳಿಗೆ ತಂದೆಯ ಹೆಸರಿಲ್ಲ ತಾಯಿಯದೆ ಹೆಸರು. ಅವಳು ಅಧಿಕೃತವಾಗಿ ಸೂಳೆಯಾಗುತ್ತಾಳೆ. ಆದರೆ ದಂಧೆ ಅದೇ. ಹೆಸರು ಮಾತ್ರ ಸೂಳೆಯಲ್ಲ ಜೋಗಣಿ. ಈ ಪದ್ಧತಿಯು ಸಾಂಸ್ಕೃತಿಕವಾಗಿ ಆ ಪ್ರದೇಶದ ಪಾರಂಪರಿಕ ಪದ್ಧತಿಗಳ ಅಡಿಯಲ್ಲಿ ಆಚರಿಸುತ್ತ ಬಂದಿರುವುದು ವಿಶೇಷವೆನಿಸುತ್ತದೆ.

ಸಾಂಸ್ಕೃತಿಕ ಪರಿಧಿಯಲ್ಲಿ ಬರುವ ಮತ್ತೊಂದು ಕ್ರಿಯಾಚರಣೆ ಕಾರುಣ್ಣಿಮೆ ಹಬ್ಬ ಉತ್ತರ ಕರ್ನಾಟಕದ ಎಲ್ಲಾ ಹಳ್ಳಿಗಳಂತೆ ಶಿವಳ್ಳಿಯಲ್ಲಿಯೂ ಹಬ್ಬಕ್ಕೆ ಎಲ್ಲಿಲ್ಲದ ಉತ್ಸಾಹ, ಎಳ್ಳಮವಾಸ್ಯೆ ಕಾರುಣ್ಣಿಮೆ, ಬಸವಣ್ಣನ ಜಯಂತಿ, ಸಂಕ್ರಾಂತಿ, ಹೋಳಿ ಹುಣ್ಣಿಮೆ ಹಬ್ಬಗಳೆಂದರೆ ಎಲ್ಲಿಲ್ಲದ ಹಿಗ್ಗು, ಈ ಹಬ್ಬದಲ್ಲಿ ಊರಿಗೆ ದೊಡ್ಡ ಎತ್ತುಗಳ ಮೆರವಣಿಗೆ ತೆಗೆಸೋದು ಗೌಡರ ಮನೆತನದ ಹಕ್ಕು, ಇವರು ಕಲ್ಬುರ್ಗಿಗೆ ಹೋಗಿ ಬಣ್ಣದ ಡಬ್ಬಿ ವಾರ್ನೀಸು, ಬ್ಯಾಗಂಡಿ ಬಾಸಿಂಗಗಳನ್ನು ಎತ್ತುಗಳ ಸಿಂಗಾರಕ್ಕೆಂಧು ಖರೀದಿಸಿ ತರುತ್ತಿದ್ದರು. ನಾರುಗಳನ್ನು ಬಣ್ಣದಲ್ಲಿ ಅದ್ದಿ, ಅಗ್ಗ ಹೊಸೆದು ತಯಾರಿಸಿ ದನಗಳಿಗೆ ಕಟ್ಟುತ್ತಿದ್ದರು. ತಮ್ಮ ಜನುಮದಲ್ಲಿಯೇ ಎಂದೂ ಕಾಣದ ಬೆಳ್ಳಿ ಬಂಗಾರದ ಕೊಂಬು ಚೇರುಗಳನ್ನ, ಮಿರಿ ಮಿರಿ ಮಿಂಚುವ ಹಿತ್ತಾಳೆಯ ಗಂಟೆ ಸರಗಳನ್ನು, ಗೊಂಡೆ ಕಟ್ಟಿದ ಜರತಾರಿಯ ಜೋಲಗಳನ್ನು ಎತ್ತುಗಳಿಗೆ ತೊಡಿಸಿ ಮೆರವಣಿಗೆ ಮಾಡುತ್ತಿದ್ದರು. ಈ ಎತ್ತುಗಳ ಮೆರವಣಿಗೆಯ ಮುಂಚೂಣಿಯಲ್ಲಿ ಗೌಡರ ಎತ್ತುಗಳು ಅನಂತರ ಕುಲಕರ್ಣಿ, ಮಾಲಿ, ಪಟೇಲ, ಸಾಹುಕಾರ ಮತ್ತು ಕಟ್ಟಕಡೆಗೆ ರೈತರ ಎತ್ತುಗಳು ಸಾಗಬೇಕಿತ್ತು. ಈ ರೀತಿಯ ಮೆರವಣಿಗೆ ನೋಡಲು ಊರಿಗೆ ಊರೇ

ಚಾವಡಿಯ ಮುಂದಿನ ಬಂಡಿದಾರಿಯ ಇಕ್ಕಲೆಗಳಲ್ಲಿ ನಿಂತು ನೋಡುತ್ತಿದ್ದರು.

ಮೆರವಣಿಗೆ ವೈಭೋಗ ಮುಗಿದ ಮೇಲೆ ಕರಿ (ಎತ್ತುಗಳ ಓಡುವ್ ಸ್ಪರ್ಧೆ) ಹಾಯುವ ಸರಧಿ ಉದ್ಗಾರದ ದನಿಗಳಿಗೆ, ಚಾವಟಿಯ ಏಟಿಗೆ ಎತ್ತುಗಳು ಜೀವದ ಹಂಗು ತೊರೆದು ಓಡುತ್ತಿದ್ದವು. ಅವುಗಳ ಗೊರಸಿನಿಂದ ಎದ್ದ ಧೂಳಿನ ಮುಸುಕಿನಲ್ಲಿ ಮೊಬ್ಬು ಕತ್ತಲು ಆವರಿಸಿರುವ ಆ ಹೊತ್ತಿನಲ್ಲಿ ಅವನ್ನು ನೋಡುವುದೆ, ಅಸಾಧ್ಯವಾದಂತಿತ್ತು. ಕೇಕೆಯ ಧ್ವನಿ, ಹೊದರಾಟ, ಚೀರಾಟ, ನಗುವಿನ ಅಬ್ಬರ ಹಾಗೆ ಇತ್ತು. ಅಗಸೆಯ ಬಾಗಿಲಿಗೆ ಬಿಗಿದು ಕಟ್ಟಿದ್ದ ಬೇವಿನ ಗೊಲ್ಲೆಯ ಅಗ್ಗದ ಹುರಿಯನ್ನು ಹರಿದು ಎತ್ತುಗಳು ಹೊರ ನುಗ್ಗಿದ್ದವು. ಸುತ್ತ ನಿಂತಿದ್ದ ಮಂದಿ ಮೈಯಲ್ಲಾ ಕಣ್ಣಾಗಿ ನೋಡುತ್ತಿದ್ದರು. ದೂರದಿಂದ ನಿಂತು ನೋಡುತ್ತಿದ್ದವರಿಗೆ ಧೂಳಿನ ಹೊರತು ಬೇರೇನೂ ಕಾಣುತ್ತಿರಲಿಲ್ಲ. ಈ ಕರಿ ಹರಿಯುವ ಸರಧಿಯಲ್ಲಿ ಪ್ರತಿ ವರ್ಷದಂಗೆ ಈ ವರ್ಷವೂ ಗೌಡರ ಎತ್ತುಗಳೇ ಕರಿ ಹಾಯ್ದವು.

ಈ ವರ್ಷ ಕಾರಹುಣ್ಣಿಮೆ ಕರಿಯು ಮುಗಿದ ಮರುದಿನವೇ ಮೊಹರಂ ಹಬ್ಬದ ಚಂದ್ರ ಕಾಣಿಸಿದನೆಂಬ ಸುದ್ದಿ ಕಲ್ಬುರ್ಗಿಯಿಂದ ಶಿವಳ್ಳಿವರೆಗೆ ಹಬ್ಬಿತು. ಜನರು ಮೊಹರಂ ಹಬ್ಬದ ತಯಾರಿಗೆ ತೊಡಗಿದರು. ಪೀರರ ಪಂಜಿಗಳನ್ನು ಕೂಡಿಸುವ ಮಸೂತಿ ಕಟ್ಟೆಯ ವಿಶಾಲ ಬಯಲಿನ ಮೂಲೆಯ, ಅದರ ವಿಶಿಷ್ಟ ಜಾಗದಲ್ಲಿ ಅಲಾಯಿ ಕುಣಿ (ಗುಂಡಿ) ತೋಡಲು ಗುದ್ದಲಿ ಬಿದ್ದವು. ಪೆಟ್ಟಿಗೆಯಲ್ಲಿ ಅಲಾಯಿ ಪೀಠದ ಮೂರು ಪಂಜಿಗಳೂ ಹೊರಬಂದವು. ಬಿದಿರಿನ ಗಳಕ್ಕೆ ಕಟ್ಟಿ ಕೊಬ್ಬರಿ ಸರಹಾಕಿ ಬಟ್ಟೆ ಸುತ್ತಿ, ದಟ್ಟಿ ಉಡಿಸಿ ಮಸೂತಿ ಮುಂದಿನ ಒಳಗೋಡೆಯ ಪರದೆಗಾನಿಸಿ ನಿಲ್ಲಿಸಲಾಯಿತು. ಅದರಲ್ಲಿ ದೊಡ್ಡ ಪಂಜಿ ಖತಲ್ ಸಾಹೇಬ್ ಪೀರನದು. ಉಳಿದೆರಡು ಹುಸೇನ್ ಸಾಬ್ ಮತ್ತು ನಿಂಬಾಜಿ ಫೀರರದ್ದು, ಬಾಜು ಚೌಕಾಕಾರದ ದೊಡ್ಡ ಪಳಿಯ ಮೇಲೆ ಹಸಿರು ಬಟ್ಟೆ ಕಟ್ಟಿ ಖ್ಯಾನ್ ವಾಸನಂತೆ ಮಾಡಿ ನಿಲ್ಲಿಸಿದ ದಟ್ಟ ಪೀರನ ಪಂಜಿ ಹಸಿರು ಖ್ಯಾನ್ ವಾಸನಂತ ಬಟ್ಟೆಯ ಸಣ್ಣ ಸಣ್ಣ ಪಂಜುಗಳನ್ನು ಜೋಡಿಸಿದರು. ನಡುವೆ ಇರುವ ದಟ್ಟ ಪೀರನ ಅಂಗೈ ಅಂಗಲದ ಬಂಗಾರದ ಪಂಜಿಯದ್ದೆ ವಿಶೇಷ ಮತ್ತು ವಿಶಿಷ್ಠ ವೈಭವ.

ಹೀಗೆ ಶೃಂಗಾರಗೊಂಡ ಮಜಲು ನೋಡಲು ಸುತ್ತಮುತ್ತಲ ಹಳ್ಳಿಯ ಜನರೆಲ್ಲ ಬಂದು ಸೇರುತ್ತಿದ್ದರು. ಹಿಂದೂ ಮುಸ್ಲಿಂ ಭೇದವಿಲ್ಲದೆ ಎಲ್ಲರೂ ಒಟ್ಟಿಗೆ ಸೇರಿ ಆಚರಿಸುವ ಪದ್ಧತಿ. ಈ ಜನರ ವಿಶೇಷ. ಈ ಖತಲ್ ಸಾಬ್‌ರು ಮುಸ್ಲಿಂ ದೇವರು. ಖತಲ್ ಸಾಬ್‌ದೇವರ ಸವಾರಿ ಬರುವುದು ಮಲ್ಲಪ್ಪ ಜಮಾದಾರನ ಸಂಬಂಧಿತನಾಗಿದ್ದ ನಾನಪ್ಪನ ಮೈಯಲ್ಲಿ. ಈ ಹಬ್ಬದಲ್ಲಿ ದೇವರಿಗೆ ಎಲ್ಲಾ ಕಡೆ ನೈವೇದ್ಯ ಬರುತ್ತದೆ. ಪ್ರತಿವರ್ಷ ಮಲ್ಲಪ್ಪನ ಮನೆಯಿಂದಲೇ ಖತಲ್ ಸಾಬ್‌ರ್ ದೇವರಿಗೆ ಒಂದು ಹೋತದ 'ಕಂದೂರಿ' ನೈವೇದ್ಯ ಹರಕೆಯ ರೂಪದಲ್ಲಿ ಬರುತ್ತದೆ. ಫತರುನೇ ಅಳ್ಳಿಬಿಶಾ ಹಾಗೆ ಹುಲಿವೇಷವನ್ನು ತೊಟ್ಟು ಸೊಂಟಕ್ಕೆ ಗೆಜ್ಜೆ ಸರ ಬಿಗಿದುಕೊಂಡು ಕೈಯಲ್ಲಿಯ ಚಾಬೂಕಿನಿಂದ ಮಂದಿಯನ್ನು ಬಾಜು ಮಾಡುತ್ತಾ ಕುಣಿಯುತ್ತಾ

ದಾರಿಬಿಡಿಸಿಕೊಂಡು ಓಡಾಡುತ್ತಿದ್ದರೆ, ಹಿಂದೆ ದೇವರ ಪಂಜುಗಳು ಕುಣಿಯುತಾ ಓಡುತ್ತಾ ಬರುತ್ತಿದ್ದವು.

ಅಂದು ಬೆಳಿಗ್ಗೆ ಮಲ್ಲಪ್ಪನ ಮನೆಯಂಗಳಕ್ಕೆ ಮಸೀದಿಯಿಂದ ಮುಲ್ಲಾ ಬಂದು ಹರಕೆ ಹೊತ್ತ ಹೋತಕ್ಕೆ ಮಂತ್ರ ಪಠಿಸಿ ಚೂರಿ ಹಾಕಿದನು. ಆದಾದ ನಂತರ ಕೆಳಗೇರಿಯ ರುಕ್ಮಣ್ಣ, ತಿಪ್ಪಣ್ಣ, ಬಾಬು ಬಂದು ಅದರ ಚರ್ಮ ಸುಲಿದು, ಮಾಂಸ ಕತ್ತರಿಸಿದರು, ಹಿತ್ತಲಲ್ಲಿ ಒಲೆ ಹೋಡಿ ದೊಡ್ಡ ದೊಡ್ಡ ಡಚ್ಚೆಯಲ್ಲಿ ಬಿರಿಯಾನಿ ಅಡುಗೆ ಮಾಡಿದರು. ಶಾಣಮ್ಮ ದೇವರ ನೈವೇದ್ಯಕೆಂದು ಚೊಂಗ್ಯ ಚಪಾತಿ ಮಾಡಿದಳು. ಆ ನೈವೇದ್ಯವನ್ನು ಮಸೀದಿಗೆ ಕೊಂಡೊಯ್ಯಲಾಗುತ್ತದೆ. ಇದರ ಜೊತೆಗೆ ಶರಬತ್ತಿನ ಪಾನಕವನ್ನು ಮಾಡಿ ನೆರೆದ ಜನರಿಗೆಲ್ಲಾ ಹಂಚುತ್ತಿದ್ದರು.

ಅಂದು ರಾತ್ರಿ ಮಸೀದಿಯ ಮುಂದೆ ಊರಿನ ಪಡ್ಡೆ ಪೋರರ, ನವಯುವಕರ ಗದ್ದಲ, ಅಟ್ಟಹಾಸ, ನಗು, ಕೇಕೆ ಕುಣಿತಗಳ ಸಂಭ್ರಮವಿತ್ತು. ಮುಲ್ಲಾಗಳು ಮಸೀದಿಯಲ್ಲಿ ನೈವೇದ್ಯ ಸ್ವೀಕರಿಸಿದ ನಂತರ ಪಂಜಗಳಿಗೆ ಹರಕೆಯ ಮಂದಿ ತಂದಿದ್ದ ದಟ್ಟಿಗಳನ್ನು ಒಂದರ ಮೇಲೊಂದು ಸುತ್ತಿ ಕೊಬ್ಬರಿ ಸರ, ರೂಪಾಯಿ ಬಂಧಗಳ ಸರ, ಹೂವಿನ ಹಾರಕಟ್ಟಿ, ಸಿಂಗರಿಸಿದರು. ಈ ಸಿಂಗಾರವು ಬೆಳಕಿನ ನಸುಕಿನಲ್ಲಿ ಸವಾರಿ ಹೋಗುವುದು ಇಲ್ಲಿಯವರ ವಾಡಿಕೆಯಾಗಿತ್ತು. ಅಲ್ಲಿಯ ತನಕ ಯುವಕರು ಆಡುತ್ತಾ ಕುಣಿಯುತ್ತಿದ್ದರು. ಇದನ್ನು ನೋಡಲು ಊರ ಹೆಂಗಸರು ಬಂದು ಎಲ್ಲಾ ಕಡೆ ನೆರೆದಿದ್ದರು. ಜೊತೆಗೆ ಗೌಡ, ಕುಲಕರ್ಣಿ ಇತ್ಯಾದಿ ಮುಖಂಡರು ಬಂದು ಸೇರುತ್ತಿದ್ದರು. ಶಿವಳ್ಳಿಯ ತರುಣ ಮೊಹರಂ ಕುಣಿತವೆಂದರೆ ಸುತ್ತಮುತ್ತ ಹಳ್ಳಿಗೆಲ್ಲ ಪ್ರಸಿದ್ಧಿಯಾಗಿತ್ತು. ಹಾಗಾಗಿ ಅದನ್ನು ನೋಡಲು ಎಲ್ಲಾ ಕಡೆಯಿಂದಲೂ ಬಂದಿದ್ದರು. ಮೊಹರಂ ದಿನ ಕುಣಿತ ಕುಣಿಯುವ ಎಲ್ಲಾ ಹಿಂದು-ಮುಸ್ಲಿಂ ಹುಡುಗರಿಗೂ ಒಂದೇ ವಿಧದ ಬಟ್ಟೆ ಧರಿಸುತ್ತಿದ್ದರು. ಅವರ ಉಡುಗೆಗಳೆಂದರೆ ಹಸಿರಂಚಿನ ಬಿಳಿ ಮಸರಜ್ಜ ದೋತರ ಉಟ್ಟು, ತಲೆಗೆ ಹಳದಿ ರೂಮಾಲು, ಅವರ ಎಡಗೈಯಲ್ಲಿ ದೋತರದ ಚೆಂಗು ಬಲಗೈಯಲ್ಲಿ ನಿಂಬೆಹಣ್ಣು ಚುಚ್ಚಿದ ತಲವಾರು ಜಂಬೆ ಚಾಕು ಮೊದಲಾದ ಪೂಜಾ ಆಯುಧಗಳನ್ನು ಹಿಡಿದುಕೊಂಡು. ತಿರುಗಿಸುತ್ತಾ ಆಲಾಯಿ ಕುಣಿಸುತ್ತಾ ಯಾ ಅಲ್ಲಾ, ದುಲ್ಲಾ ದುಲ್ಲಾ ಎಂದು ಚೀರುತ್ತಾ ಕುಣಿಯ ತೊಡಗಿದರು.

ಅಲ್ಲಿ ನೆರೆದ ಜನಗಳು ಕಣ್ಣು ಮಿಟುಕಿಸಿದ ಗೊಂಬೆಗಳಂತೆ ನೋಡುತ್ತಿದ್ದರು. ಹಿಂದೆ ನಿಂತು ಹಲಗೆಯ ಹೊಡೆತಗಳೊಂದಿಗೆ ಹಾಡುತ್ತಾ ಅವರನ್ನು ಹುರಿದುಂಬಿಸುತ್ತಿದ್ದರು. ಕುಣಿಯುವವರ ಉತ್ಸಾಹ ಉಕ್ಕಿಹರಿಯುತ್ತಿತ್ತು. ಅವರ ಗೆಳೆಯರು, ಅವರ ಪ್ರೇಯಸಿಯರ ಕಣ್ಣೆಲ್ಲಾ ಅವರ ಮೇಲೆಯೇ ನೆಟ್ಟಿದ್ದವು ಅಲ್ಲಿಯ ಜನ ಸಿಳ್ಳೆ ಕೇಕೆಗಳನ್ನು ಹಾಕುತ್ತಾ ಸಂಭ್ರಮಿಸುತ್ತಿದ್ದರು. ಮಕ್ಕಳ ಕುಣಿತಗಳನ್ನು ನೋಡಲು ತಾಯಂದಿರು ನುಗ್ಗಿ ನುಗ್ಗಿ ಬರುತ್ತಿದ್ದರು.

ಮಧ್ಯರಾತ್ರಿ (ಸರಿ ರಾತ್ರಿ) ಕಳೆದು ಗಾಳಿ ಬೀಸಿ ಬೆಳಗು ಮೂಡುವ ಹೊತ್ತಿನಲ್ಲಿ

ಪೀರರು ಸವಾರಿಗಳನ್ನು ಕರೆದುಕೊಂಡು, ಹಲಗೆ ಬಾಜಿನ ಸದ್ದು ಮೂಡುತ್ತಾ ಮಸೀದಿಯ ಅಂಗಳಕ್ಕೆ ಬರುತ್ತಾರೆ. ಅನಂತರ ಪ್ರತಿಯೊಬ್ಬರ ಮನೆಯೇ ಮುಂದೆ ಸವಾರಿ ನಡೆದು ಕೊನೆಗೆ ಮಲ್ಲಪ್ಪ ಜಮಾದಾರನ ಮನೆಗೆ ಬರುತ್ತದೆ. ಅಲ್ಲಿಯೇ ಸ್ಥಿರವಾಗಿ ನಿಂತ ಖತಬ್ ದೇವು. 'ಈ ಮನೆಗೆ ಕತ್ತಲೆ ಕವಿಯು ಮುನ್ಸೂಚನೆಯ ದೇವ ನುಡಿಯನ್ನು ನುಡಿಯುತ್ತದೆ'. ಹೀಗೆ ಇಲ್ಲಿಯೂ ಧಾರ್ಮಿಕ ನಂಬಿಕೆಗಳನ್ನು ಜನರ ಮನಸ್ಸನ್ನು ಭೇದಿಸುವ ಪರಿಯನ್ನು ಕಾಣಬಹುದು.

ಈ ಪ್ರಾಂತ್ಯದ ಮತ್ತೊಂದು ವಿಶೇಷವೆಂದರೆ ಕಲ್ಬುರ್ಗಿಯ ಶಾಣಬಸಪ್ಪನ ತೇರಿನ ಜಾತ್ರೆ. ಇದು ವೈಭವಯುತವಾಗಿ ನಡೆಯುತ್ತದೆ. ಹೋಳಿ ಹುಣ್ಣಿಮೆಯ ೫ನೇ ದಿನ ಸಂಜೆ ತೇರು ಎಳೆಯುವ ಮೂಲಕ ಪ್ರಾರಂಭವಾಗುವ ಜಾತ್ರೆ ಯುಗಾದಿ ಹಬ್ಬದವರೆಗೂ ನಡೆಯುತ್ತದೆ. ಕಲ್ಬುರ್ಗಿಯ ಸುತ್ತಮುತ್ತಲ ಜನರು ಸುಗ್ಗಿಯನೆಲ್ಲಾ ಮುಗಿಸಿಕೊಂಡು ಬಂದು ಸೇರುತ್ತಾರೆ. ಹೊಸದಾಗಿ ಮದುವೆಯಾದ ದಂಪತಿಗಳು ಈ ದೇವರ ತೇರನ್ನು ನೋಡುವುದು ಸಂಪ್ರದಾಯ. ಈ ಸಂಪ್ರದಾಯ ಇತರೆಡೆಯು ಕಂಡು ಬರುವುದು ಉಲ್ಲೇಖಾರ್ಹ. ತೇರಿನ ಹಿಂದಿನ ದಿನ ಶರಣ ಬಸಪ್ಪನಿಗೆ ಉಚಾಯಿ ಎಳೆಯಲ್ಪಡುತ್ತದೆ. ಈ ಜಾತ್ರೆಗೆ ಸುತ್ತಮುತ್ತಲ ವರ್ತಕರು ತಮ್ಮ ಅಂಗಡಿ ಮುಂಗಟ್ಟುಗಳನ್ನು ಇಟ್ಟು ದವಸಧಾನ್ಯದಿಂದ ಹಿಡಿದು, ಮಕ್ಕಳ ಆಟಿಕೆ ಸಾಮಾನುಗಳು, ತಿಂಡಿ-ತಿನಿಸುಗಳು ಇತ್ಯಾದಿ ವ್ಯಾಪಾರಗಳು ಜೋರಾಗಿ ನಡೆಯುತ್ತಿತ್ತು. ಅಲ್ಲಿನ ಜನರು ಭಯ ಭಕ್ತಿಯಿಂದ ಶಾಣಬಸಪ್ಪನನ್ನು ಕಲ್ಯಾಣದ ಅವತಾರವೆಂದು ಹರಕೆ ಹೊತ್ತರೇ ಹೀಡೇರಿಸುವ ನಿಜದೈವವೆಂದು ನಂಬಿದರು. ಹಾಗಾಗಿ ಹೈದರಾಬಾದ್, ಕರ್ನಾಟಕ ಪ್ರಾಂತ್ಯದಲ್ಲಿ ಈ ಜಾತ್ರೆ ತುಂಬಾ ಪ್ರಸಿದ್ಧಿಯನ್ನು ಪಡೆದಿತ್ತು. ಈ ಜಾತ್ರೆಯ ಮುಖ್ಯ ಆಕರ್ಷಣೆ ಎಂದರೆ ತೇರು ಎಳೆಯುವುದು. ಜಾತ್ರೆಯಲ್ಲಿ ತೇರು ಎಳೆಯುವ ದಿನ ಆ ತೇರಿಗೆ ಬಣ್ಣ ಬಣ್ಣದ ಬಟ್ಟೆಗಳಿಂದ ಮತ್ತು ಹೂವಿನ ಅಲಂಕಾರದಿಂದ ಶೃಂಗಾರ ಮಾಡ ಮಾಡಿ, ತೇರಿನ ಮಧ್ಯದಲ್ಲಿ ಶರಣಬಸಪ್ಪನ ವಿಗ್ರಹವನ್ನಿಟ್ಟು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಸಿದ್ಧತೆ ಆದ ನಂತರ ತೇರಿಗೆ ಬಿಗಿಯಾದ ಹಗ್ಗವನ್ನು ಎರಡು ಕಡೆ ಕಟ್ಟಿ ಹಗ್ಗವನ್ನು ಹಿಡಿದು ಜನರು ಉದ್ಗಾರದಿಂದ ಕೇಕೆ ಹಾಕುತ್ತಾ ಹಗ್ಗವನ್ನು ಎಳೆಯುತ್ತಿದ್ದರು. ಅದರ ಮುಂದೆ ನಂದಿ ಕೊಲ್ಲನ್ನು ಹೊತ್ತು ಸಾಗುವವರು, ಹಲಗೆ ಬಾಜಿನದ ನಾದಕ್ಕೆ ತಕ್ಕಂತೆ ಕುಣಿಯುತ್ತಾ ಸಾಗುತ್ತಿದ್ದರು. ಹೀಗೆ ತೇರು ಎಳೆಯುವ ಸಮಯದಲ್ಲಿ ಭಕ್ತರು ಆ ತೇರಿನ ಮೇಲೆ ಬಾಳೆಹಣ್ಣು ಜವನ ಎಸೆಯುವ ಮೂಲಕ ಮನದಲ್ಲಿ ಬಯಸಿದ ಬಯಕೆಗಳು ಈಡೇರಲಿ ಎಂದು ಸಂಕಲ್ಪಿಸಿಕೊಳ್ಳುತ್ತಿದ್ದರು. ಆ ತೇರು ಶಾರಣಬಸಪ್ಪನ ಗುಡಿಯ ಸುತ್ತಾ ಬಂದು ಒಂದು ಬಾರಿ ಪ್ರದಕ್ಷಿಣೆ ಹಾಕಿ ನಿಲ್ಲುತ್ತಿತ್ತು. ಹಾಗಾಗಿ ಈ ಜಾತ್ರೆಯ ಮುಖ್ಯ ಕ್ರಿಯಾಚರಣೆಯೇ ಶರಣಬಸಪ್ಪನ ತೇರು ಎಳೆಯುವುದು.

ಈ ಶಿವಳ್ಳಿಯಲ್ಲಿ ನಡೆಯುವ ಮತ್ತೊಂದು ವಿಶೇಷವೆಂದರೆ ನಾಗರ ಪಂಚಮಿ. ಈ ಹಬ್ಬದಂದು ಹೊಸ ಹೊಸ ವಸ್ತ್ರಗಳನ್ನು ತೊಟ್ಟು ಶೃಂಗಾರ ಮಾಡಿ, ಕೈಯಲ್ಲಿ ಜೋಳದ

ದಳ್ಳು, ತಂಬಿಟ್ಟಿನ ಹುಂಡಿ, ಕುದಿಸಿದ ಕಡಬು, ಕೊಬ್ಬರಿ ಬಟ್ಟಲು, ಅಂಗನೂರಿನ ಪರಾತು ಹಿಡಿದುಕೊಂಡು ನಾಗಪ್ಪನ ಗುಡಿಗು ಹತ್ತಿರ ಇರುವ ಹುತ್ತಗಳಿಗೆ ಮತ್ತು ನಾಗರ ಕಲ್ಲುಗಳಿಗೆ ಹೋಗಿ ಹಾಲೆರೆಯುತ್ತಿದ್ದರು. ವಿಶೇಷವಾಗಿ ಊರ ಹೊರಗಿನ ಅಣ್ಣಪ್ಪನ ಗುಡಿಬಾಜು ಇರುವ ನಾಗರ ಕಲ್ಲಿಗೆ ಹಾಲೆರೆಯುವವರೆ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಕೆಳಗೇರಿ ನಡುವಿದ್ದ ಹಿರೋಡ್ಯದ ನೆತ್ತಿಯ ಮೇಲೂ ಹಾಲಿನ ಅಭಿಷೇಕ ನಡೆಯುತ್ತಿತ್ತು. ಇದಲ್ಲದೆ ತಮ್ಮ ತಮ್ಮ ಹೊಲ ತೋಟಗಳಲ್ಲಿ ಕಂಡು ಬರುವ ಹುತ್ತಗಳನ್ನು ಹುಡುಕಿಕೊಂಡು ಹೋಗಿ ಹಾಲೆರೆಯುತ್ತಿದ್ದರು. ಹಾಲೆರೆದು ಅರಿಶಿನದಲ್ಲಿ ನೆನೆದ ಐದು ಎಳೆ ದಾರವನ್ನು ಹುತ್ತದ ಸುತ್ತ ಸುತ್ತುತ್ತಿದ್ದರು ಹಾಗೂ ಆ ಹುತಕ್ಕೆ ಅಳ್ಳು ಚೆಲ್ಲಿ ಕಡುಬಿನ ನವಣೆ ಭಾನದ ನೈವೇದ್ಯ, ಕೊಟ್ಟು ಹುತ್ತದಲ್ಲಿ ಇರೋ ನಾಗಪ್ಪನಿಗೆ ಪೂಜೆ ಸಲ್ಲಿಸುತ್ತಿದ್ದರು. ನಂತರ ಅಂಗನೂಲಿನೆತ್ತಿಕೊಂಡು ತಮ್ಮ ಕೊರಳಿಗೆ ಕಟ್ಟಿಕೊಂಡು, ನಾಗಪ್ಪನಿಗೆ ನೈವೇದ್ಯ ಮಾಡಿ ಉಳಿದ ಪ್ರಸಾದವನ್ನು ಬಟ್ಟಲಿಗೆ ಇಟ್ಟುಕೊಂಡು ಮನೆಗೆ ಬರುತ್ತಿದ್ದರು. ಪ್ರಸ್ತುತದಲ್ಲಿಯೂ ಈ ಭಾಗದಲ್ಲಿ ಮಾತ್ರವಲ್ಲದೆ ಇತರೆಡೆಯಲ್ಲಿಯೂ ನಡೆಯುವ ಕ್ರಿಯಾಚರಣೆಯಾಗಿದೆ. ಈ ಹಬ್ಬದ ನಂಬಿಕೆಯೆಂದರೆ ಹುತ್ತಕ್ಕೆ ತನಿ ಎರೆದರೆ ನಾಗದೋಷ ನಿವಾರಣೆಯಾಗುತ್ತದೆ ಎಂದು ಮತ್ತೆ ಮತ್ತು ಸೋದರರ ಆಯಸ್ಸು ವೃದ್ಧಿಸುತ್ತದೆ ಎಂಬ ನಂಬಿಕೆಯಿದೆ.

ಇದಕ್ಕೆ ಪೂರಕವೆಂಬಂತೆ ನಾಗರಪಂಚಮಿಯ ಹಬ್ಬದ ಮೂರು ದಿನದ ಹಿಂದೆ ಸುಗಲವ್ವನ ಮನೆಯಲ್ಲಿ ಮದ್ಯ ಮನೆಯಲ್ಲಿ ಹುತ್ತ ಬೆಳೆಯುವುದು, ಅದನ್ನು ಪೊರಕೆಯಲ್ಲಿ ಗುಡಿಸದರೂ ಸಹ ಅದು ಮತ್ತೆ ಮತ್ತೆ ಬೆಳೆಯುವುದು, ಈ ಬೆಳವಣಿಗೆಯಿಂದ ಸುಂಗವ್ವ ಚಿಂತ್ರಾಕ್ರಾಂತಳಾಗಿ ಏನು ಕೇಡುಕಾದಿದೆಯೋ ಎಂದು ಚಿಂತಿಸಿ, ಕೊನೆಗೆ ದೈವದ ಮೊರ ಹೋದಾಗ ಪೂಜರಿಯು ಒಳ್ಳೆಯದಾಗುತ್ತದೆ. ಹುತ್ತ ಕೆಡುವ ಪ್ರಯತ್ನ ಮಾಡಬೇಡಿ ಎಂದಾಗ, ಆ ಮನೆಯಲ್ಲಿ ಪ್ರತಿನಿತ್ಯ ಪೂಜೆ ಪುನಸ್ಕಾರ ನಡೆಯುತ್ತಿತ್ತು, ಕೊನೆಗೆ ನಿಜವಾದ ನಾಗರಹಾವು ಕಾಣಿಸಿಕೊಂಡದ್ದು ಮತ್ತಷ್ಟು ನಂಬಿಕೆ ಬಲವಾಯಿತು. ಹೀಗೆ ಮೌಢ್ಯ ಪರಂಪರೆಯ ಹಿನ್ನಲೆಯಲ್ಲಿ ನಾಗರ ಪಂಚಮಿಯು ಒಂದಾಗಿದೆ.

ಈ ಅಂಶಗಳು ಜಾನಪದೀಯ ಆಚರಣೆ ಹಿನ್ನಲೆಯಲ್ಲಿ ಕಾದಂಬರಿಯೊಳಗಡೆ ಮಹತ್ವ ಪಡೆದುಕೊಂಡಿವೆ.

ಇದೇ ರೀತಿಯ ಮತ್ತೊಂದು ಆಚರಣೆಯೆಂದರೆ ಹೋಳಿ ಹುಣ್ಣಿಮೆ ಹಬ್ಬ ಕಲ್ಬುರ್ಗಿ ಮತ್ತು ಶಿವಳ್ಳಿ ಭಾಗದಲೆಲ್ಲ ಪ್ರಸಿದ್ಧವಾದ ಹಬ್ಬವಾಗಿತ್ತು. ಅದರಲ್ಲೂ ಶಿವಳ್ಳಿಯಲ್ಲಿ ಆಚರಿಸುವುದು ವಿಶೇಷವಾಗಿತ್ತು. ಈ ಹಬ್ಬವನ್ನು ಯಾವುದೇ ವರ್ಣ, ವರ್ಗ ತಾರತಮ್ಯವಿಲ್ಲದೆ ಎಲ್ಲರೂ ಆಚರಿಸುತ್ತಿದ್ದರು. ಅಸ್ಪೃಶ್ಯರಾದ ಯುವಕ ತರುಣರು ಹಲಗೆ ಭಾರಿಸುವುದು ಮೋಜಿನದಾಗಿತ್ತು. ಈ ಹಬ್ಬದಲ್ಲಿ ಕಾಮಣ್ಣನ ಮೂರ್ತಿ ವಿನ್ಯಾಸವನ್ನು, ಊರಿನ ಸುತ್ತ ಮೆರವಣಿಗೆ ಮಾಡುತ್ತಾ, ತಮಟೆಯ ವಿಧ ವಿಧದ ನಾದದ ಸದ್ದಿಗೆ ಎಲ್ಲರೂ ಹೆಜ್ಜೆ ಹಾಕುತ್ತಾ ಸಂಭ್ರಮಿಸುತ್ತಿದ್ದರು. ಹೀಗೆ ಮೆರವಣಿಗೆ ಮಾಡುತ್ತಾ ಅವರಿವರ ಮನೆಯಲ್ಲಿ ಕಟ್ಟಿಗೆಯನ್ನು ಸಂಗ್ರಹಿಸುತ್ತಾ

ಕಾಮಣ್ಣನನ್ನು ಸುಡಲು ಅಣಿ ಮಾಡಿಕೊಳ್ಳುತ್ತಿದ್ದರು. ಈ ಹೋಳಿ ಹಬ್ಬವನ್ನು ಪ್ರಾದೇಶಿಕ ಭಿನ್ನತೆಯ ನೆಲೆಯಲ್ಲಿ ವಿಧ ವಿಧದಲ್ಲಿ ಆಚರಿಸುತ್ತಾರೆ. ಕಾಮಣ್ಣನನ್ನು ಪ್ರತಿಷ್ಠಾಪಿಸಿದ ಮೂರುದಿನ, ಆರುದಿನ ಅಥವಾ ಒಂಭತ್ತು ದಿನಗಳ ನಂತರ ಸುಡುವ ಪ್ರಕ್ರಿಯೆಯಿದೆ. ಪ್ರತಿ ರಾತ್ರಿಯೂ ಕಾಮಣ್ಣ ಮೂರ್ತಿಗೆ ಸಿಂಗಾರ ಮಾಡಿ ಪೂಜೆ ಸಲ್ಲಿಸಿ ಒಂಭತ್ತನೇ ದಿನ ಮೆರವಣಿಗೆ ಮಾಡಿ ಸುಡುವ ಪ್ರಕ್ರಿಯೆಯಿದೆ. ಈ ಶಿವಳ್ಳಿಯಲ್ಲಿ ಕಾಮಣ್ಣನನ್ನು ಸುಡುವ ದಿನದಂದು ಇಡೀ ಊರಿಗೆ ಊರೆ ಕಿಕ್ಕಿರಿದು ತುಂಬುತ್ತದೆ. ಸಿಳ್ಳೆ ಕೇಕೇಗಳೊಂದಿಗೆ ಬಣ್ಣದ ನೀರನ್ನು ಎಲ್ಲರಿಗೂ ಎರಚುತ್ತಾ ಸಂಭ್ರಮಿಸುತ್ತಾರೆ. ಕಾಮಣ್ಣನನ್ನು ಉದ್ಗಾರ ಕೇಕೆಗಳಿಂದ ಸುಡುವ ಪ್ರಕ್ರಿಯೆ ನಡೆಯುತ್ತದೆ.

ಅದೇ ದಿನ ರಾತ್ರಿ ಜನರೆಲ್ಲರು ದ್ರೌಪತಿಯ ವಸ್ತ್ರಾಪಹರಣ ನೋಡಿ ಮನರಂಜನೆ ಪಡೆಯುತ್ತಿದ್ದರು. ಮಾರನೆಯ ದಿನ ಉರಿದುಳಿದ ಒಂದೊಂದು ಬೆಂಕಿ ಕೆಂಡವನ್ನು ಅಲ್ಲಿನ ಹೆಂಗಸರು ತಮ್ಮ ಮನೆಗೆ ತೆಗೆದುಕೊಂಡು ಹೋಗಿ ಒಲೆಹಚ್ಚಿ ಉರಿಸಿದರೆ ಇದರಿಂದ ಶುಭವಾಗುತ್ತದೆ ಎನ್ನುವುದು ಅವರ ನಂಬಿಕೆಯಾಗಿತ್ತು. ನಂತರ ಊರಿನ ಎಲ್ಲಾ ಜನರ ಮನೆಯಲ್ಲೂ ಮಾಂಸಹಾರದ ತಯಾರಿ ನಡೆಯುತ್ತದೆ. ಎಂಥ ಕಡು ಬಡವರೂ ಕೂಡ ಸಾಲವಾದರೂ ಮಾಡಿ, ಒಂದು ಪಾಲು ಮಾಂಸ ತಂದು ಅಥವಾ ಮನೆಯಲ್ಲಿ ಇದ್ದ ಒಂದು ಕೋಳಿ ಕುಯ್ದು ಮನೆಯಲ್ಲಿ ಕಂಡದ ಗಡಿಗೆ ಹಿಟ್ಟು ಕುದಿಸುವುದು ಮಾತ್ರ ತಪ್ಪಿಸಂಗಿಲ್ಲ. ಹೀಗೆ ಹಬ್ಬಗಳನ್ನು ಶಿವಳ್ಳಿ ಮತ್ತು ಕಲ್ಬುರ್ಗಿಯಲ್ಲಿ ಮಾತ್ರವಲ್ಲದೆ ಎಲ್ಲಾ ಕಡೆಯಲ್ಲಿಯೂ ಆಚರಿಸುವುದು ರೂಢಿ. ಆದರೆ ಪ್ರಾದೇಶಿಕ ನೆಲೆಗಟ್ಟಿನಲ್ಲಿ ಸಾಂಸ್ಕೃತಿಕವಾಗಿ ವೈವಿಧ್ಯತೆ ಪಡೆದುಕೊಳ್ಳುತ್ತವೆ. ಈ ಹಬ್ಬಗಳು ಮಾತ್ರವಲ್ಲದೆ ಗೌರಿ ಗಣೇಶ ಹಬ್ಬ, ದೀಪಾವಳಿ, ಮಹಾಲಯ ಅಮಾವಾಸೆ ಮುಂತಾದವುಗಳನ್ನು ನೋಡಬಹುದಾಗಿದೆ.

ಮದುವೆ ಆಚರಣೆ

ಮದುವೆಯ ಆಚರಣೆಗಳು ಪ್ರಾದೇಶಿಕ ಭಿನ್ನತೆಯಿಂದ ಕೂಡಿವೆ. ಈ ಭಾಗದಲ್ಲಿಯೂ ಸಹ ಕೆಲವು ವಿಶೇಷ ಅಂಶಗಳಿಂದ ಕೂಡಿದೆ. ಮದುವೆ ಸಂದರ್ಭಗಳು ಹಿಂದಿನ ಕಾಲದಲ್ಲಿ ಅರೇಳು ದಿವಸ ನಡೆಯುವ ಪದ್ಧತಿಯಿತ್ತು. ಅದರಂತೆ ಈ ಭಾಗದಲ್ಲಿಯೂ ಕೂಡ ಆರೇಳು ದಿನದವರೆಗೆ ನಡೆಯುತ್ತಿದ್ದ ಮದುವೆಗಳು ಇಂದು ಒಂದೇ ದಿನದಲ್ಲಿ ನಡೆಯುವ ಸಂಪ್ರದಾಯ ಕಂಡು ಬರುತ್ತದೆ. ಇದರ ಜೊತೆಗೆ ಸಂಪ್ರದಾಯಗಳೇ ಇಲ್ಲದೇ ರಿಜಿಸ್ಟರ್ ಮದುವೆಗಳು ಕೂಡ ನಡೆಯುತ್ತವೆ.

ಕಾದಂಬರಿಯಲ್ಲಿ ಜಮಾದಾರ ಮಲ್ಲಪ್ಪನ ಮಗನಾದ ಕಲ್ಯಾಣಿಗೂ ಮತ್ತು ಅದೇ ಮಲ್ಲಪ್ಪನ ಮಗಳಾದ ಶಾಣಮ್ಮನ ಮಗಳು ಬೆಳ್ಳಿಯನ್ನು ಮದುವೆ ಮಾಡಿಕೊಡುವ ಸಂದರ್ಭದಲ್ಲಿ ಮದುವೆಯ ಕ್ರಿಯಾಚರಣೆಗಳಲ್ಲಿ ವಿಶೇಷ ಅಂಶಗಳು ಕಂಡು ಬರುತ್ತವೆ. ಈ ಭಾಗದಲ್ಲಿ ಮದುವೆಯು ೫ ದಿನಗಳವರೆಗೆ ನಡೆಯುತ್ತದೆ. ಪ್ರತಿಯೊಂದು ದಿನದಲ್ಲೂ

ಒಂದೊಂದು ಶಾಸ್ತ್ರ ಸಂಪ್ರದಾಯಗಳು ನಡೆಯುತ್ತವೆ. ಮದುವೆಯ ಪೂರ್ವತಯಾರಿ ಒಂದು ತಿಂಗಳ ಮುಂಚಿನಿಂದಲೂ ಪ್ರಾರಂಭವಾಗುತ್ತದೆ. ಬಂಧು-ಬಳಗದವರನ್ನು ಆಮಂತ್ರಿಸುವುದು, ಅವರಿಗೆ ಶ್ರೀಮಂತಿಕೆಯ ಪ್ರತೀಕವಾಗಿ ಬಟ್ಟೆ ಬರಿಗಳನ್ನು ಕೊಡಿಸುವುದು. ಹಾಗೂ ವಧು-ವರರ ಬಟ್ಟೆಗಳು ಅಂತಸ್ತಿಗೆ ತಕ್ಕಂತೆ ಖರೀದಿ ಮಾಡುತ್ತಿದ್ದರು. ಈ ಮದುವೆಯಲ್ಲಿ ಗಂಡಿಗೆ ಪ್ಯಾಂಟು, ಕೋಟು, ಕಮೀಜು ಖರೀದಿಸಿ ನಂತರ ಒಂದು ಜೋಡಿ ಬಿದರಕ್ವಾಟಿಯ ಕೆಂಪಂಜಿನ ದೋತರ, ಕೆಸರಿ ಬಣ್ಣದ ಜರತಾರಿ ಚೌಕಳಿಯ ರುಮಾಲು, ನೀಲಿ ಬಣ್ಣದ ಅಂಗಿಯನ್ನು ಖರೀಸಿದ್ದರು.

ಮಲ್ಲವ್ವ ಮದುವೆ ಹೆಣ್ಣಿಗೆಂದು ಹಳೆಯ ೫ ತೋಲ ಬಂಗಾರವನ್ನು ಕರಗಿಸಿ ಚಂದ್ರಹಾರ ಮಾಡಿಸಿದಳು. ನಂತರ ಬೆಳ್ಳಿರೂಳಿ, ಕಡಗ, ಚೈನುಗಳನ್ನು ಖರೀದಿಸಿದರು ಮತ್ತು ಮದುವೆಗೆ ಬೇಕಾದಂತಹ ಶಾಸ್ತ್ರ ಸಂಪ್ರದಾಯದ ಸಾಂದರ್ಭಿಕತೆಗೆ ತಕ್ಕಂತೆ ವಿವಿಧ ಬಣ್ಣಬಣ್ಣದ ಸೀರೆಗಳನ್ನು ಖರೀದಿಸಿದರು. ಎಣ್ಣೆ ಹಚ್ಚುವ ಸೀರೆ, ಮಡಿಲು ತುಂಬುವ ಸೀರೆ, ಸ್ಯಾಸಿ ಸೀರೆ, ಮೆರವಣಿಗೆ ಸೀರೆ, ಧಾರೆ ಸೀರೆಯಂತಹ ಇತ್ಯಾದಿ ಬಗೆಯ ಒಂಬತ್ತು ಸೀರೆಗಳನ್ನು ಖರೀದಿಸಿದಳು. ಅದಲ್ಲದೆ ತನ್ನ ಹೆಣ್ಣು ಮಕ್ಕಳಿಗೆ ಬಟ್ಟೆ ಮತ್ತು ಒಡವೆಗಳನ್ನು ಕೊಡಿಸಿದಳು. ಈ ಭಾಗದ ಮುಖ್ಯ ನಗರವಾದ ಕಲ್ಬುರ್ಗಿಯಲ್ಲಿ ಇವೆಲ್ಲವನ್ನು ಖರೀದಿಸಿದರು. ಹಿಂದಿನಿಂದ ಬಂದಂತಹ ಕೊಳ್ಳು ಕೊಡುಗೆಗಳು ವರದಕ್ಷಿಣೆ ರೂಪದಲ್ಲಿ ಬಳುವಳಿಯಾಗಿ ಬರುವುದು ಸಾಮಾನ್ಯ ಅಂಶ.

ಶಿವಳ್ಳಿಯ ಮಲ್ಲಪ್ಪ ಜಮಾದಾರನ ಮನೆಯಲ್ಲಿ ಮದುವೆಯ ಪೂರ್ವತಯಾರಿಯು ನಡೆಯುತ್ತಿತ್ತು. ಜಮಾದಾರ ಮಗನ ಮದುವೆಯಾದುದರಿಂದ ಎಲ್ಲಾ ವರ್ಗದ ಜನರು ಬಂದು ಕೆಲಸ ಕಾರ್ಯಗಳಲ್ಲಿ ಭಾಗಿಯಾಗುತ್ತಿದ್ದರು. ಇದರಲ್ಲಿ ಹೊಲೆರ ಕಾಳಿ, ದುರ್ಗಿ, ಬ್ಯಾಡರ ಸಾಬವ್ವ ಕುರುಬರ ನಿಂಗವ್ವ, ಬಲಿಗೆರೆ ಸೀತವ್ವ, ನಾಗವ್ವಾಯಿ, ತ್ವಾಟದಾಳು ಗುರುಪ್ಪನ ಹೆಣ್ತಿ, ಕಳಸವ್ವ ಇತ್ಯಾದಿ ಹೆಣ್ಣು ಮಕ್ಕಳು ಮನೆಗೆಲಸದಲ್ಲಿ ಯಾವುದೇ ಜಾತಿ ತಾರತಮ್ಯವಿಲ್ಲದೆ ಬಂದು ಕೆಲಸದಲ್ಲಿ ನಿರತರಾಗಿದ್ದರು.

ಜಮಾದಾರ ಮಲ್ಲಪ್ಪನ ಮಗನ ಮದುವೆಯಾದುದರಿಂದ ಊಟೋಪಚಾರವೂ ವೈಭವಯುತವಾಗಿತ್ತು. ವಿಶೇಷವೆಂದರೆ ಜಮಾದಾರ ಕೆಳವರ್ಗಕ್ಕೆ ಸೇರಿದವನಾದ್ದರಿಂದ ಮೇಲ್ವರ್ಗದವರಿಗೆಂದೆ ಬೇರೆಯವರನ್ನು ಕರೆಸಿ, ಪ್ರತ್ಯೇಕ ಭೋಜನ ತಯಾರಿಸಿ, ಬಂದಂತಹ ಮೇಲ್ವರ್ಗದವರಿಗೆ ಊಟೋಪಾಚಾರ ಮಾಡಿಸಿದನು. ಈ ಮದುವೆಯ ಸಂದರ್ಭದಲ್ಲಿ ಕೆಳಗೇರಿಯ ಹೊಲೆಯರು ಮತ್ತು ಮಾದಿಗರ ಮನೆಯಲ್ಲಿ ಒಲೆ ಹಚ್ಚುವ ಪ್ರಮಯವೇ ಬರುವುದಿಲ್ಲ. ಸುಮಾರು ಐದಾರು ದಿವಸಗಳವರೆಗೆ ಹೊಟ್ಟೆ ತುಂಬಾ ಊಟದ ವ್ಯವಸ್ಥೆಯಾಗುತ್ತಿತ್ತು.

ಮದುವೆಗೆ ಬಂದಂತಹ ಬಂಧುಬಳಗ ಪರಿಚಯಸ್ಥರು ಅಂತಸ್ತಿಗೆ ತಕ್ಕಂತೆ

ಮದುಮಗನಿಗೆ ಮತ್ತು ಮಧುಮಗಳಿಗೆ ಉಡುಗೊರೆ ಕೊಡುವ ಮೂಲಕ ಹರಸಿಹೋದರು. ಮದುವೆಯ ಮರುದಿನವೆ ಸೂಬನದ ಶಾಸ್ತ್ರವನು ಕಾಶಮ್ಮ ನೇತೃತ್ವದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ನಡೆಯುವ ಶಾಸ್ತ್ರ ಸಂಪ್ರದಾಯಗಳು, ಹೆಂಗಸರ ಗೇಲಿ ನುಡಿಗಳು, ಪೂಜೆ ಪುನಸ್ಕಾರಗಳೂ ನಡೆದು ವೈವಾಹಿಕರ ಬಂಧನಕ್ಕೊಂದು ಬೆಸುಗೆಯ ಆಚರಣೆಗಳಾಗಿದ್ದವು.

ಹೀಗೆ ವೈವಾಹಿಕ ಬಾಂದವ್ಯಗಳು ಹಿಂದಿನ ಕಾಲದಿಂದ ಬೆಳೆದು ಬಂದಿದ್ದು, ಕಾಲದಿಂದ ಕಾಲಕ್ಕೆ ತನ್ನ ಶಾಸ್ತ್ರ ಸಂಪ್ರದಾಯಗಳನ್ನು ಮೊಟಕುಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಈ ಕಾದಂಬರಿಯು ಅವುಗಳ ಮೇಲೆ ಬೆಳಕು ಚೆಲ್ಲುತ್ತಿದೆ ಹಿಂದೆ ವೈವಾಹಿಕ ಸಂಬಂಧಗಳನ್ನು ಎರಡು ಕುಟುಂಬಗಳನ್ನು ಬೆಸೆಯುವ ಆರೋಗ್ಯಕರ ವಾತಾವರಣ ಹೊಂದಿದ್ದರೆ, ಇಂದು ಕೇವಲ ಸಾಮಾಜಿಕ ಬಂಧನವಾಗಿ ಬಂದು ಬಾಂಧವ್ಯ ಬಂಧನಗಳು ಅಷ್ಟೇನು ಮಹತ್ವ ಪಡೆಯುತ್ತಿಲ್ಲದಿರುವುದು ಉಲ್ಲೇಖಾರ್ಹ.

ಈ ಕಾದಂಬರಿಯು ವೈವಾಹಿಕ ಸಂಬಂಧದಡಿಯಲ್ಲಿ ಶ್ರೀಮಂತರ ಪ್ರತಿಷ್ಠೆ ಕೆಳವರ್ಗದವರ ಹಸಿವು ನೀಗಿಸುವಲ್ಲಿ ಮತ್ತು ಎಲ್ಲಾ ವರ್ಗದವರು ಸೇರಿ ಅನ್ಯೋನ್ಯ ಬಾಂಧವ್ಯದಿಂದ ಬಂದು ಸಹಕಾರ ಮನೋಭವ ತೋರಿಸುವುದು ಕಂಡು ಬರುವ ಅಂಶ. ಈ ವೈವಾಹಿಕ ಆಚರಣೆಯು ಧಾರ್ಮಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಎಲ್ಲಾ ವಲಯದ ಮೇಲೂ ಪ್ರಭಾವ ಬೀರುವ ಆಚರಣೆಯಾಗಿದೆ. ಕಾದಂಬರಿಯು ಮುಖ್ಯವಾಗಿ ಕೆಳವರ್ಗದವರ ಚಿತ್ರಣವನ್ನು ಚಿತ್ರಿಸುವುದೇ ಮುಖ್ಯವಾದರೂ ಕೆಳವರ್ಗದವರ ಮೇಲೆ ಮೇಲ್ವರ್ಗದವರು ಹೊಂದಿರುವ ಮಡಿ ಮೈಲಿಗೆಯು ಸುಪ್ತವಾಗಿ ಹೊಂದಿರುವುದು ಕಂಡು ಬರುತ್ತದೆ. ಈ ಎಲ್ಲಾ ಅಂಶಗಳು ಸಂಸ್ಕೃತಿಯ ಪರಿಧಿಯಲ್ಲಿ ನಡೆಯುವ ಸಂಪ್ರದಾಯವಾಗಿವೆ.

ಸಾಂಸ್ಕೃತಿಕ ಆಯಾಮದಡಿಯಲ್ಲಿ ಒಸಗೆ ಶಾಸ್ತ್ರವು ಒಂದು. ಇದಕ್ಕೆ ನಿದರ್ಶನವೆಂಬಂತೆ ಜಮದಾರನ ಮೊಮ್ಮಗಳಾದ ಬೆಳ್ಳಿಯು ಮೈನೆರೆದಾಗ ಮಾಡುವ ಶಾಸ್ತ್ರ ವಿಶಿಷ್ಠವಾಗಿತ್ತು. ಮನೆಯಂಗಳದಲ್ಲಿ ಮಂಟಪ ಮಾಡುತ್ತಿದ್ದರು. ಆ ಮಂಟಪವನ್ನು ಹದಿಹರಿಯದ ಹುಡುಗಿಯರು ತರತರವಾದ ಬಣ್ಣದ ಬ್ಯಾಗಂಡಿ ಕಾಗದಗಳಿಂದ ಸಿಂಗರಿಸುತ್ತಿದ್ದರು. ಸಿಂಗರಿಸಿದ ಮಂಟಪದಲ್ಲಿ ಮೈನೆರೆದ ಹೆಣ್ಣನ್ನು ಕೂರಿಸುತ್ತಿದ್ದರು. ಮುತ್ತೈದೆಯೆರೆಲ್ಲರೂ ಸರಿರಾತ್ರಿಯವರೆಗೂ ಸೊಬಾನ ಪದ ಹಾಡುತ್ತಾ ಹರಸುತ್ತಿದ್ದರು. ಮದುವೆಯಾದ ಹೆಣ್ಣಾದರೆ ಗಂಡ ಹೆಂಡತಿ ಇಬ್ಬರನ್ನು ಕೂರಿಸುತ್ತಿದ್ದರು. ಕೊನೆಗೆ ಎಬ್ಬಿಸುವ ದಿನ ಅವರ ಸೊಬನ ಮಾಡುತ್ತಿದ್ದರು. ಈ ಆಚರಣೆ ಹದಿನೈದು ದಿನ, ಅದಕ್ಕಿಂತಲೂ ಹೆಚ್ಚೆಂದರೆ ಶ್ರೀಮಂತರು ಒಂದು ತಿಂಗಳವರೆಗೆ ಮಂಟಪದಲ್ಲಿ ಕೂರಿಸಿ ಈ ಶಾಸ್ತ್ರ ಮಾಡುತ್ತಿದ್ದರು. ಪ್ರತಿ ಸಂಜೆಯು ಕೇರಿಯ ಮಂದಿಗಳನ್ನೆಲ್ಲಾ ಕರೆದು, ಮನರಂಜನೆಯನ್ನು ಏರ್ಪಡಿಸುತ್ತಿದದರು. ಸ್ವಲ್ಪ ಬಡವರಾದ ಮಂದಿ ಮನೆಯಲ್ಲಿ ಆ ಕೇರಿಯ ಹೆಂಗಸರು ಬಂದು ಪ್ರತಿದಿನ ಸಂಜೆಯಲ್ಲಿ ಹಾಡನ್ನು ಹಾಡುತ್ತಿದ್ದರು ಶಾಸ್ತ್ರ ಸಂಪ್ರದಾಯಗಳು ನಡೆಯುತ್ತಿದ್ದವು. ಕಲ್ಬುರ್ಗಿ ನಗರ ಪ್ರದೇಶವಾಗಿದ್ದರೂ, ಹಳ್ಳಿಯ ರೀತಿ–

ರಿವಾಜು, ಮೂಢನಂಬಿಕೆ, ದೇವರು-ದೆವ್ವಗಳ ಬಗ್ಗೆ ಶ್ರದ್ದೆ ನಂಬಿಕೆಗಳ ಬಲವಾಗಿದ್ದವು. ತಮ್ಮ ತಮ್ಮ ಮೂಲ ನೆಲೆಯ ಬೇರುಗಳನ್ನು ಹಳ್ಳಿಯಲ್ಲಿಯೇ ಬಿಟ್ಟು ಬಂದಿದ್ದು, ಈ ಕೊಳಗೇರಿ ನಿವಾಸಿಗಳು ಹೊಟ್ಟೆಪಾಡಿಗಾಗಿ ಇಲ್ಲಿ ಟಿಕಾಣಿ ಹಾಕಿದರು. ಹೀಗೆ ಕಲ್ಬುರ್ಗಿಯಂತಹ ನಗರದಲ್ಲಿಯೂ ಈ ರೀತಿಯ ಒಸಗೆ ಹಾಕುವ ಶಾಸ್ತ್ರ ಸಂಪ್ರದಾಯಗಳು ನಡೆಯುತಿದ್ದವು.

ಒಸಗೆ ಶಾಸ್ತ್ರ ಮಾಡುವಾಗ ತನ್ನ ಬಂಧು-ಬಳಗ, ಊರುಕೇರಿ ಎಲ್ಲರನ್ನು ಕರೆಯುತ್ತಿದ್ದರು. ಬಂದಂತಹ ಅವರು ಹೋಳಿಗೆ, ಕಡುಬು, ಕರಿಗಡಬು ಮೊದಲಾದ ಭಕ್ಷ್ಯಭೋಜನಗಳು ತಂದು, ಅಥವಾ ಆ ಮನೆಯಲ್ಲಿಯೇ ಸಿದ್ಧಪಡಿಸಿ ಊಟಾ ಮಾಡಿಸಿ, ರಾತ್ರಿ ಹೆಣ್ಣು ಹುಡುಗಿಗೆ ಸೀರೆ ತೊಡಿಸಿ ಒಡವೆ ಹಾಕಿ ಮಡಿಲು ತುಂಬಿ, ದಂಡೆ ಕಟ್ಟಿ ಮೊಣಕೈವರೆಗೂ ಗಂಧ ಸವರಿ, ಗೆರೆ ಗೆರೆ ಚಿತ್ತಾರವನ್ನು ಮೂಡಿಸುತ್ತಿದ್ದರು. ಅಂಗೈಗೆ ಮೆಹೆಂದಿ ಚಿತ್ರ ಬರೆದು, ಉಗುರುಗಳಿಗೆ ಕಡುಗೆಂಪಿನ ಬಣ್ಣ ಹಚ್ಚಿ, ತುಟ್ಟಿಗೆ ಬಣ್ಣ, ಕಣ್ಣಿಗೆ ಕಾಡಿಗೆ ಗಲ್ಲದ ಮೇಲೊಂದು ಆಸರೆ (ದೃಷ್ಠಿ) ಆಗದಿದರಲೆಂದು ಕಪ್ಪು ಚುಕ್ಕೆಯನ್ನು ಇಡುತ್ತಿದ್ದರು. ದೆವ್ವ ಭೂತಗಳು ಅವಳ ಬಳಿ ಬಾರದೆಂದು ಅಂಗಾಲಿಗೆ ಕರಿಮಸಿಹಚ್ಚಿ ಟೊಂಕದಲ್ಲಿ ನಿಂಬೆಕಾಯಿ ಮತ್ತು ಸಣ್ಣದೊಂದು ಚಾಕು ಸಿಕ್ಕಿಸುತ್ತಿದ್ದರು. ಹೀಗೆ ಶೃಂಗಾರವಾದ ಹೆಣ್ಣು ಮಗಳು ಮಂಟಪದಲ್ಲಿ ಬಂದು ಕುರ್ಚಿಯ ಮೇಲೆ ಕೂರುತ್ತಿದ್ದಳು. ಕುಳಿತ ಆ ಹೆಣ್ಣು ಮಗಳನ್ನು ನೋಡಿದ ಜನರು ಥೇಟ್ ಲಕ್ಷ್ಮಿಯೇ ಕುಳಿತಂತೆ ಎಂದು ಜನ ಅಂದುಕೊಳ್ಳುತ್ತಿದ್ದರು. ಅವಳು ಕುಳಿತ ಅಕ್ಕ ಪಕ್ಕ ದೀಪ ಅಚ್ಚಡುತ್ತಿದ್ದರು. ಈ ರೀತಿ ಒಸಗೆ ಶಾಸ್ತ್ರ ಪ್ರತಿರಾತ್ರಿ ನಡೆಯುತ್ತಿತ್ತು. ಕೊನೆಯ ದಿನ ಮೈನೆರೆದ ಹುಡುಗಿಯ ಮನೆಯವರು ಶಾಸ್ತ್ರಮಾಡಿ, ಬಗೆ ಬಗೆಯ ಊಟೋಪಚಾರ ಮಾಡಿ ಬಂದಂತಹ ಜನಗಳಿಗೆ ಭೋಜನದ ವ್ಯವಸ್ಥೆ ಮಾಡುತ್ತಿದ್ದರು. ಜೊತೆಗೆ ಕೇರಿ ಮಂದಿಗೆಲ್ಲಾರಿಗೂ ಸಹ ಭೋಜನ ವ್ಯವಸ್ಥೆ ಇರುತ್ತಿತ್ತು. ಈ ರೀತಿ ಸಂಪ್ರದಾಯಗಳು ಅವರ ಅನೂಕೂಲಕ್ಕೆ ತಕ್ಕಂತೆ ನಡೆಯುತ್ತಿದ್ದವು. ಪ್ರಸ್ತುತದಲ್ಲಿ ಈ ಆಚರಣೆಯು ಜಾರಿಯಲ್ಲಿದ್ದರೂ ಸಹ ಕೇವಲ ಒಂದು ದಿನದ ಆಚರಣೆಯಾಗಿದೆ. ಸ್ತ್ರೀಮಂತರು ಊರಿಗೆಲ್ಲ ಊಟ ಹಾಕಿಸಿದರೆ ಬಡವರು ತಮ್ಮ ಸಂಬಂಧಿಕರಿಗೆ ಊಟ ಹಾಕುವ ಪರಿಯನ್ನು ಕಾಣಬಹುದು.

ಬೇಟೆ ಮತ್ತು ವ್ಯವಸಾಯ ಪದ್ಧತಿಗಳು

ಬೇಟೆ ಮತ್ತು ವ್ಯವಸಾಯ ಪದ್ಧತಿಗಳು ಕೂಡ ಸಾಂಸ್ಕೃತಿಕ ಆಯಾಮಗಳನ್ನು ಪಡೆದುಕೊಂಡಿರುವುದನ್ನು ನಾವು ಕಾಣುತ್ತೇವೆ.

ಕೆಳವರ್ಗದವರ ಮನೆಯಲ್ಲಿ ಸದಾಕಾಲ ಮಾಂಸಹಾರದ ಅಡುಗೆ ಬೇಯುತ್ತಿತ್ತು. ಇದಕ್ಕೆ ಕಾರಣ ಅವರು ಬೇಟೆಯಾಡುವ ಪ್ರವೃತ್ತಿ ಇಟ್ಟುಕೊಂಡಿದ್ದರು. ಹೋಳಿಹುಣ್ಣಿಮೆ ಕರಿ, ಸಂಕ್ರಾಂತಿ ಕರಿ ಬಂದರೆ ಸಾಕು, ನಾಟಿಕಾರ ರಾಮಣ್ಣ, ನಾಯಿಕೋಡಿ ಯಮನಪ್ಪ, ಕುರುಬರ ಮಳ್ಯ, ಮಸೂಲರ ಕದೀರನನ್ನು ಕರೆದುಕೊಂಡು ಬಂದೂಕು ಹಿಡಿದು ಅವರ

ಜೊತೆಗೆ ಮಲ್ಲಪ್ಪ ಅಡವಿಗೆ ಹೋಗುತ್ತಿದ್ದರು. ಅಲ್ಲಿ ಮೊಲ, ಚಿಗರಿ, ನರಿ, ಕಾಡುಕೋಳಿಯಂತ ವಿಧ ವಿಧದ ಏನೆಲ್ಲಾ ಪ್ರಾಣಿಯನ್ನು ಬೇಟಿಯಾಡಿ ಸಮಾನವಾಗಿ ಹಂಚಿಕೆ ಮಾಡಿಕೊಳ್ಳುತ್ತಿದ್ದರು. ಇದರ ಜೊತೆಗೆ ಮೀನು ಹಿಡಿಯುವುದು ವಿಶೇಷವಾಗಿತ್ತು. ಮೀನು ಹಿಡಿಯುವುದರಲ್ಲಿ ಇವರು ಚಾಣಾಕ್ಷರಾಗಿದ್ದರು. ಇವರು ಒಂದು ಸಲ ಹೋದರೆ ರಾಶಿ ರಾಶಿ ಮೀನು ಹಿಡಿದು ತರುತ್ತಿದ್ದರು. ಹಾಗೂ ಬೇಟೆಯಾಡುವುದರಲ್ಲಿ ಮಲ್ಲಪ್ಪ ಚಾಣಾಕ್ಷನಾಗಿದ್ದನ್ನು. ಈ ಹೀಗೆ ಬೇಟೆಯಾಡುವ ಪದ್ಧತಿ ಹೆಚ್ಚು ಕಾಡುಗಳುಳ್ಳ ಪ್ರದೇಶಗಳಲ್ಲಿ ನಾವು ಹಿಂದಿಗೂ ಅಪರೂಪಕ್ಕೆ ನೋಡುತ್ತೇವೆ. ಅದರೆ ಹೀಗಿನ ಸಂದರ್ಭದಲ್ಲಿ ಕಾಡಿನ ಪ್ರಾಣಿ, ಪಕ್ಷಿಗಳನ್ನು ಬೇಟೆಯಾಡುವುದು ಅಪರಾದ.

ವ್ಯವಸಾಯ ಪದ್ಧತಿ ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಭಿನ್ನತೆಯಿಂದ ಕೂಡಿದೆ. ಅಲ್ಲಿ ಗೋಧಿ, ಜೋಳ, ತೊಗರಿ, ಮೆಣಸಿನಕಾಯಿ, ಹಲಸಂದೆ, ಉಳ್ಳಗಡ್ಡಿ, ಭತ್ತ ಇತ್ಯಾದಿ ಬಗೆಯ ದವಸ ಧಾನ್ಯಗಳನ್ನು ಬೆಳೆಯುತ್ತಿದ್ದರು. ಒಕ್ಕಣೆ ಸಂದರ್ಭದಲ್ಲಿ ಬೆಳಂದಿಗಳ ರಾತ್ರಿಯಲ್ಲಿ ದವಸ ಧಾನ್ಯಗಳನ್ನು ಹಸನು ಮಾಡುತ್ತಾ ಆಸರಿಕೆ ಬೇಸರಿಕೆಯನ್ನು ಕಳೆಯಲು ಹಾಡು ಹಾಡುತ್ತಿದ್ದರು. ರಾಶಿಯ ಪೂಜೆ ಸಂದರ್ಭದಲ್ಲಿ ಹೋಳಿಗೆ ಊಟ ಮತ್ತು ಮಾಂಸದ ಊಟ ಮಾಡಿಸಿ ಎಲ್ಲರಿಗೂ ಉಣಬಡಿಸುತ್ತಿದ್ದರು. ಕಣದಲ್ಲಿ ದುಡಿದ ಶ್ರಮಿಕರಿಗೆ ಅವರ ಪಾಲುಗಳನ್ನು ಹಂಚುತ್ತಿದ್ದರು. ಅಸಾಯಕರಾದ ನಿರ್ಗತಿಕರಿಗೆ ದವಸ ಧಾನ್ಯವನ್ನು ಧಾನವಾಗಿ ನೀಡುತ್ತಿದ್ದನು, ಪ್ರಸ್ತುತ ಜನಕ್ಕೆ ದಾನಗುಣವಿಲ್ಲ. ಆದರೆ ಈ ರೀತಿಯ ವ್ಯವಸಾಯ ಪದ್ಧತಿ ಉತ್ತರ ಕರ್ನಾಟಕದಲ್ಲಿ ಮಾತ್ರವಲ್ಲದೆ ದಕ್ಷಿಣ ಕರ್ನಾಟಕದ ಕಡೆಯು ನಾವು ನೋಡುತ್ತೇವೆ. ಆದರೆ ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಬೇರೆ ಬೇರೆಯಾಗಿರುತ್ತದೆ.

ಊಟೋಪಚಾರಗಳು

ಲೇಖಕಿ ಊಟೋಪಚಾರಗಳ ವಿಶೇಷತೆಯನ್ನು ಪ್ರಾದೇಶಿಕ ನೆಲೆಗೆ ಅನುಗುಣವಾಗಿ ವಿವರಿಸಿದ್ದಾರೆ, ಊಟೋಪಚಾರಗಳಲ್ಲಿ ಕೆಳವರ್ಗ, ಮೇಲ್ವರ್ಗ ಮತ್ತು ಅಸ್ಪೃಶ್ಯರಲ್ಲಿಯೇ ಭಿನ್ನತೆಯಿತ್ತು. ಮೇಲ್ವರ್ಗದ ಮನೆಯವರು ಭಕ್ಷ ಭೋಜನಗಳನ್ನು ಅಂದರೆ ರೊಟ್ಟಿ ಪಲ್ಯ, ಹೋಳಿಗೆ, ಚಪಾತಿ, ಸಜ್ಜೆಬಾನ, ಉಪ್ಪಿಟ್ಟು ಅನ್ನ ಸವಿಯುತ್ತಿದ್ದರು. ವಿಶೇಷವಾಗಿ ಕೆಳವರ್ಗದವನಾದ ಮಲ್ಲಪ್ಪ ಜಮಾದಾರನ ಮನೆಯಲ್ಲಿ ದಿನವೂ ಮಾಂಸಾಹಾರ ಮತ್ತು ಅವರ ಒಲೆಯ ಮೇಲೆ ಖಂಡದ ತುಂಡು ಕೊತ ಕೊತನೆ ಕುದಿಯುತ್ತಲೇ ಇತ್ತು. ಮಾಂಸ ಇವರಿಗೆ ಪ್ರಿಯವಾಗಿತ್ತು. ಇದಲ್ಲದೆ ಪುಡಿಪಲ್ಯ, ಹುಣಜಿ ಕಾಯಿ ಕಾರ, ಕೆನಮೊಸರು, ಜೋಳದ ರೊಟ್ಟಿ, ಹುಳಿಬಾನ, ಗೋಧಿ ಚಪಾತಿ, ಗಟ್ಟಿಬ್ಯಾಳಿ, ತಳಸಿದ ಕಡ್ಡಿಪಲ್ಯ, ಅಕ್ಕಿಬಾನ, ಹೋಳಿಗೆ ಸಜ್ಜೆರೊಟ್ಟಿ, ಸಜ್ಜಕ್ಕ, ಉಪ್ಪಿಟ್ಟು, ಮಂಡಕ್ಕಿ, ಸಂಡ್ಲಿಗೆ ಇವೆಲ್ಲಾ ಸಸ್ಯಹಾರವಾದರೆ, ಕೋಳಿಪಲ್ಯ, ಕುರಿಖಂಡದ ಪಲ್ಯ, ಮೀನು, ಟಗರು, ಉಡ, ಪರಿವಾಳದಂತಹ ಪ್ರಾಣಿಗಳು ಮಾಂಸಹಾರವಾಗಿ ತಿನ್ನುತ್ತಿದ್ದರು.

ಕೆಳವರ್ಗದಲ್ಲಿ ವಿಶೇಷವಾದ ಚಟವೆಂದರೆ ಸೇಂದಿ ಕುಡಿಯುವುದು. ಪ್ರತಿನಿತ್ಯವು ವಯಸ್ಸಿನ ತಾರತಮ್ಯವಿಲ್ಲದೆ, ಲಿಂಗತಾರತಮ್ಯವಿಲ್ಲದೆ ಎಲ್ಲರೂ ಒಟ್ಟಿಗೆ ಕುಳಿತು ಕುಡಿಯುತ್ತಿದ್ದರು. ಸೇಂದಿ ಕುಡಿತವು ಈ ಜನರ ಅವಿಭಾಜ್ಯ ಅಂಗವಾಗಿತ್ತು. ಸೇಂದಿ ಕುಡಿತವು ಕೇವಲ ಕೆಳವರ್ಗದಲ್ಲಿ ಕಂಡುಬರದೆ ಮೇಲ್ವರ್ಗದವರಲ್ಲಿಯು ಸಹ ಕಂಡುಬರುತ್ತದೆ. ಇವರು ಸೇಂದಿಯ ಜೊತೆ ನೆಂಜಲು ಖಾರದಲ್ಲಿ ಉರಿದ ಶೇಂಗ ಮತ್ತು ಮಾಂಸದ ತುಂಡುಗಳನ್ನು ಹೆಚ್ಚಾಗಿ ಬಳಸುತ್ತಿದ್ದರು. ಅಸ್ಪೃಶ್ಯರಲ್ಲಿ ಸೇಂದಿಯ ಚಟಾ ಎಷ್ಟಿತ್ತೆಂದರೆ ತಮ್ಮ ಹೆಂಡತಿಯರನ್ನೇ ಸೇಂದಿಗಾಗಿ ತಲೆ ಹಿಡಿದು ಕುಡಿಯುವ ಪ್ರವೃತ್ತಿಯನ್ನು ರೂಢಿಸಿಕೊಂಡಿದ್ದರು. ಅಸ್ಪೃಶ್ಯರು ಸಹಜವಾಗಿ ಬಡವರಾಗಿದ್ದರಿಂದ ಅವರಿಗೆ ಹೊಟ್ಟೆ ತುಂಬಾ ಊಟ ಅಪರೂಪವಾಗಿತ್ತು. ಮನೆತುಂಬಾ ಮಕ್ಕಳು ತುಂಬಿದ್ದರಿಂದ ಎಲ್ಲಾರಿಗೂ ಆಹಾರವನ್ನು ಹೊಟ್ಟೆ ತುಂಬ ಉಣಬಡಿಸುವುದು ಕಷ್ಟಕರವಾಗಿತ್ತು. ಹಾಗಾಗಿ ಇವರು ತಂಗಳ ನುಚ್ಚು, ಸಚ್ಚಿರೊಟ್ಟಿ, ಸಜ್ಜೆ ಕಡಬ, ಸಚ್ಚಿ ನುಚ್ಚು ಹಾಗೂ ಗಂಜಿಯನ್ನು ಕುಡಿಯುತ್ತಿದ್ದರು. ಒಮೊಮ್ಮೆ ಗಂಜಿಯು ಇರದೆ ಉಪವಾಸ ಬಿಳುತ್ತಿದ್ದರು. ಇದರಿಂದಾಗಿ ತುತ್ತು ಅನ್ನಕೋಸ್ಕರ ಹಾದರ ಮಾಡುವ ಕಳ್ಳತನ ಮಾಡುವ ಕೆಟ್ಟ ಗುಣಗಳು ಪರಿಸ್ಥಿತಿಯ ಹಿನ್ನೆಲೆಯಲ್ಲಿ ರೂಢಿಯಾಗಿದ್ದವು. ಹೀಗೆ ಕಾದಂಬರಿಯಲ್ಲಿ ಲೇಖಕಿಯ ಕೆಳಜಾತಿ ಜನರ ಊಟೋಪಚಾರಗಳನ್ನು ಸಂಭ್ರಮದಿಂದ ವರ್ಣಿಸುತ್ತಾ ಅವರ ಅಡಿಗೆಯ ಬ್ರಹ್ಮಾಂಡವನ್ನು ನಮಗೆ ಉಣಬಡಿಸುತ್ತಾರೆ. ಜೊತೆಗೆ ಸಿಂದಿ ಬನಗಳು ಮತ್ತು ಕಲ್ಬುರ್ಗಿಯ ಸಿಂದಿ ದುಖಾನೆಗಳನ್ನು ವರ್ಣಿಸುತ್ತಾರೆ.

ಉಡುಗೆ-ತೊಡುಗೆಗಳು

ಈ ಭಾಗದ ಜನರ ಉಡುಗೆ ತೊಡುಗೆಗಳಲ್ಲಿ ಸಾಂಸ್ಕೃತಿಕವಾಗಿ ಮತ್ತು ಮಹತ್ವವನ್ನು ಪಡೆದುಕೊಳ್ಳುತ್ತವೆ. ಪ್ರಾದೇಶಿಕವಾಗಿ ಮೇಲ್ವರ್ಗದವರು ಜರತಾರಿ ವಸ್ತ್ರ, ಪೈಜಾಮ, ರುಮಾಲು, ಪೇಟ, ಜುಬ್ಬ, ಶಲ್ಯ ದೂತರ ಪುರುಷರ ಉಡುಗೆಯಾದರೆ, ಜರತಾರಿ ಸೀರೆ, ಇಳಿಕಲ್ ಸೀರೆ, ಕರಿಚಂದ್ರಕಾಳಿ ಸೀರೆ, ಕೆಂಪು ಜರಿಯಂಚಿನ ಸೀರೆ, ಕಾದಿಗೆಂಪಿನ ಸೀರೆ, ರೇಷ್ಮೆ ಸಿರೆ, ಶ್ಯಾಂಪುರಿ ಸೀರೆ ಮತ್ತು ಕಾಟನ್ ಸೀರೆಗಳನ್ನು ಬಳಸುತ್ತಿದ್ದರು. ಇವರು ಹೊದೆಯಲು ಬಟ್ಟೆ ಗಿರಿಣಿಗಳಲ್ಲಿ ತಯಾರಿಸಿದ ಕೌದಿಗಳನ್ನು ಬಳಸುತ್ತಿದ್ದರು. ಹೊಲೆಯ ಮಾದಿಗರಲ್ಲಿ ಸಾಮಾನ್ಯ ಉಡುಪುಗಳನ್ನು ಧರಿಸುತ್ತಿದ್ದರು. ಜೊತೆಗೆ ಮೇಲ್ವರ್ಗದವರು ಬಳಸಿ ಬಿಸಾಕುತ್ತಿದ್ದ ಬಟ್ಟೆಗಳನ್ನು ಧರಿಸಿಕೊಳ್ಳುತ್ತಿದ್ದರು ಹಾಗೂ ಅರಿದ ಚಾಪೆ, ತೂತು ಬಿದ್ದ ಕಂಬಳಿಗಳನ್ನು ಹಾಸಲು ಮತ್ತು ಹೊದಿಯಲು ಬಳಸುತ್ತಿದ್ದರು. ಸಹಜವಾಗೆ ಮೇಲ್ವರ್ಗದವರು ಚಿನ್ನಾಭರಣಗಳನ್ನು ತೊಡಗುತ್ತಿದ್ದರು. ಹೀಗೆ ಉಡುಗೆ ತೊಡುಗೆಗಳಲ್ಲಿ ಅಂತಸ್ತಿಗೆ ತಕ್ಕಂತೆ ಸಾಂಸ್ಕೃತಿಕ ಅಂಶಗಳು ಎಂದು ಕಾಣುತ್ತವೆ. ಈ ಅಂಶಗಳು ಅವರವರ ಸ್ಥಾನಮಾನಗಳನ್ನು ಶ್ರಿಮಂತಿಕೆಯನ್ನು ಬಿತ್ತರಿಸುತ್ತಿತ್ತು.

ಶವ ಸಂಸ್ಕಾರ

ಈ ಭಾಗದ ಶವ ಸಂಸ್ಕಾರದಲ್ಲೂ ಭಾಗಶಃ ಸಾಮ್ಯತೆಯಿದ್ದು, ಕೆಲವೊಂದು ಭಿನ್ನ ಆಚರಣೆಗಳು ಕಂಡು ಬರುತ್ತವೆ. ಮಲ್ಲಪ್ಪನ ಶವ ಸಂಸ್ಕಾರವ ಹಿನ್ನೆಲೆಯಲ್ಲಿ ಅವಲೋಕಿಸುವುದಾದರೆ ಶವವನ್ನು ಸ್ನಾನ ಮಾಡಿಸಿ, ಶುಚಿಗೊಳಿಸಿ, ಹೊಸಬಟ್ಟೆ ಉಡಿಸಿ, ಮಲ್ಲವನನ್ನು ಆ ಶವದ ಪಕ್ಕದಲ್ಲಿ ಕೂರಿಸಿ, ತವರಿಂದ ತಂದಂತಹ ಸೀರೆಯನ್ನು ಉಡಿಸಿ, ತಲೆತುಂಬಾ ಹೂ ಮುಡಿಸಿ, ಕೈತುಂಬಾ "ಬಳೆತೊಡಿಸಿ, ಹಣೆ ತುಂಬಾ ಅರಿಸಿನ ಕುಂಕುಮವಿಟ್ಟು ಮಡಿಲಕ್ಕಿ ತುಂಬಿ ಆರತಿ ಎತ್ತಿದರು. ಎಲ್ಲರು ಬಂದು ಕಂಚಿ ಕಳಸ ಎತ್ತಿದರು. ಶವವನ್ನು ಚೊಟ್ಟದಲ್ಲಿ ಕೂರಿಸಿ ಸ್ಮಶಾನಕ್ಕೆ ಹಲಗೆ ಬಾಜನಗಳೊಂದಿಗೆ ಮತ್ತು ಹೆಣದ ಮೇಲೆ ರೊಕ್ಕವನ್ನು ಚೆಲುತ್ತ, ಮಾದಿಗರು ಹೆಣದ ಮುಂದೆ ಕುಣಿಯುತ್ತಾ ತೇರು ಎಳೆದಂತೆ, ಮರೆವಣಿಗೆ ರೀತಿಯಲ್ಲಿ ಸ್ಮಶಾನಕ್ಕೆ ಕೊಂಡೊಯ್ದರು. ಸಂಸ್ಕಾರ ಮಾಡಿದ ನಂತರ ಮಲ್ಲಪ್ಪನ ಸಮಾಧಿಯ ಮೇಲೆ ಮಲ್ಲವ್ವನ ಮುತ್ತೈದೆ ಸೌಭಾಗ್ಯವನ್ನು (ಅಂದರೆ ಕೈಬಳೆ ಹೊಡೆದು ಹಣೆಯ ಮೇಲಿನ ಕುಂಕುಮ ಕೆಡಿಸಿ, ಕೊರಳೊಳಗಿನ ಕರಿಮಣಿಯನ್ನು ಕಿತ್ತು ಎದೆಯ ಮೇಲೆ ಚೆಲ್ಲಿದರು. ಬೆಳ್ಳಿ ಕಾಲುಂಗುರವನ್ನು ಬಿಚ್ಚಿದರು) ತೆಗೆದರು. ಮುತ್ತೈದೆಯಾಗಿ ಹೋದ ಮಲ್ಲವ್ವ ಹಿಂದಿರುಗುವಾಗ ಮುಂಡೆಯಾಗಿದ್ದಳು. ಸ್ಮಶಾನದಿಂದ ಹಿಂದಿರುಗುವ ಸಂದರ್ಭದಲ್ಲಿ ಅಲ್ಲಿಂದ ತಂದತಹ ಕಲ್ಲುಹಳ್ಳ ಗರಿಕೆ ಹುಲ್ಲಿಟ್ಟು, ದೀಪಕ್ಕೆ ಕೈ ಮುಗಿದು ಅವರವರ ಮನೆಗೆ ಹಿಂದಿರುಗಿದರು.

ಸತ್ತ ನಂತರದ ಮೂರನೆಯ ದಿನ ಅಂಗಳದ ಮೂಲೆಯಲ್ಲಿ ಮೂರು ಕಲ್ಲಿಟ್ಟು ಒಲೆ ಅಚ್ಚಿದರು. ಒಡಕು ಮಡಿಕೆಯಲ್ಲಿ ಉಪ್ಪಿಲ್ಲದ ಬಾನವನ್ನ ಕುದಿಸಿಕೊಂಡು ನಾಕಾರು ಮಂದಿ 'ಮೂರುಕೂಳು' ತೆಗೆದುಕೊಂಡು ಸುಡುಗಾಡಿಗೆ ನಡೆದರು. ಉಳಿದ ಮಂದಿ ಮನೆಯ ಸ್ವಚ್ಛತೆ ಕಾರ್ಯದಲ್ಲಿ ತೊಡಗಿದರು.

ಸ್ಮಶಾನಕ್ಕೆ ಹೋಗಿದ್ದವರು ಎದೆಯ ಮುಂದೆ ಮೂರು ಕೂಳಿನ ಬೊಕ್ಕೆಯಿಟ್ಟು ಊದೋ ಹಾಕಿ ಸಣ್ಮಾಡಿ ದೂರ ಸರಿದರು ನಂತರ ಕಾಗೆಗಳ ಬರುವಿಕೆಗಾಗಿ ಜನರು ಅಲ್ಲೇ ಕಾದು ಕುಂತರು. ಆದರೆ ಕಾಗೆಗಳು ಹಾರಾಡುತ್ತಿದ್ದರು ಒಂದು ಕಾಗೆಯೂ ಕೂಳು ತಿನ್ನಲಿಲ್ಲ. ಮತ್ತೊಮ್ಮೆ ಮಗನಾದ ಕಲ್ಯಾಣಿಯಿಂದ ಪೂಜೆ ಸಲ್ಲಿಸಿದರು. ನಂತರ ಒಂದು ಕಾಗೆ ಬಂದು ಅನ್ನ ತಿಂದ ಮೇಲೆ ಉಳಿದ ಕಾಗೆಗಳು ಬಿದ್ದವು. ಅನಂತರ ಮನೆಗೆ ಬಂದು ಒಂದುಕೋಣೆಯಲ್ಲಿ ಹೆಡೆಇಟ್ಟರು ಮಲ್ಲಪ್ಪ ಜೀವಿತಾವಧಿಯಲ್ಲಿ ಪ್ರಿಯವಾದಂತಹ ಅಡಿಗೆಗಳನ್ನು ಹೆಡೆಗಿಟ್ಟು ಸೇಂದಿಯನ್ನು ಸಹ ಜೋತೆಗಿಟ್ಟರು. ಎಲ್ಲರೂ ಪೂಜೆ ಮಾಡಿದ ನಂತರ ೫ ಮಂದಿ ಗಂಡಸರು ಮತ್ತು ಮುತ್ತೈದೆಯರು ಹೆಡೆ ಮುಂದೆ ಕುಳಿತು ಊಟ ಮಾಡಿದರು. ಮಲ್ಲವ್ವನನ್ನು ಗಂಡನಿಗೆ ಹೆಡೆ ಇಟ್ಟ ಊಟವನ್ನು ಪ್ರಸಾದವೆಂದು ತಿಂದಳು. ಹೀಗೆ ಇಲ್ಲಿಯ ಜನರ ಶವ ಸಂಸ್ಕಾರವೂ ಕೂಡ ಸಾಂಸ್ಕೃತಿಕವಾಗಿ ಮಹತ್ವ ಪಡೆದುಕೊಂಡಿವೆ. ಉತ್ತರ ಕರ್ನಾಟಕ ವಿಧಿವಿಧಾನಗಳೆ ಬೇರೆ, ದಕ್ಷಿಣ ಕರ್ನಾಟಕ ಕ್ರಿಯಾವಿಧಾನಗಳನ್ನು ಬೇರೆ ಹಾಗೆಯೇ

ಇರುವುದನ್ನು ನಮ್ಮ ಈ ಕಾದಂಬರಿಯ ಮೂಲಕ ಲೇಖಕಿ ತಿಳಿಸಿಕೊಡುತ್ತಾರೆ.

ಗರ್ಭಿಣಿಯಾದ ಹೆಂಗಸಿಗೆ ಸೀಮಂತ ಮಾಡುವುದು ವಿಶೇಷ. ಈ ಸಂದರ್ಭದಲ್ಲಿ ಅಕೆಗೆ ಇಷ್ಟವಾಗುವ ಊಟೋಪಾಚಾರಗಳನ್ನು ಮಾಡಿ ಒಡವೆ ವಸ್ತ್ರ ತೊಡಿಸಿ, ಹಸಿರು ಸೀರೆಯುಡಿಸಿ, ಮಡಿಲು ತುಂಬಿ, ಐದು ಜನ ಅಥವಾ ಒಂಭತ್ತು ಜನ ಮುತ್ತೈದೆಯರು ಆರತಿ ಬೆಳಗುತ್ತಿದ್ದರು. ಈ ಶಾಸ್ತ್ರದಲ್ಲಿ ಬಂಧು ಬಳಗದವರೆಲ್ಲರೂ ಬಂದು ಸೇರುತ್ತಿದ್ದರು. ಅಂತಸ್ತಿನ ಅನುಕೂಲಕ್ಕೆ ತಕ್ಕಂತೆ ಕ್ರಿಯಾಚರಣೆಯು ವೈಭವಪೂರಿತವಾಗಿತ್ತು. ಮಗು ಜನಿಸಿದ ಮೇಲೆ ಆ ಮಗುವಿಗೆ ತೊಟ್ಟಿಲು ಶಾಸ್ತ್ರ ಮಾಡಿ ಹೆಸರು ಕಟ್ಟುತ್ತಿದ್ದರು. ಅಂತಸ್ತಿಗೆ ತಕ್ಕಂತೆ ಹಾಗೂ ಲಿಂಗತಾರತಮ್ಯದ ಹಿನ್ನೆಲೆಯಲ್ಲಿ ಗಂಡು ಮಗು ಜನಿಸಿದ ವೈಭವಯುತವಾದ ಸಮಾರಂಭವೇರ್ಪಡಿಸುತ್ತಿದ್ದರು. ಜನನದ ೧೯ನೇ ದಿನಕ್ಕೆ ತೊಟ್ಟಿಲು ಶಾಸ್ತ್ರ ನಡೆಯುತ್ತಿತ್ತು. ಹೀಗೆ ಗರ್ಭಿಣಿಗೆ ಸೀಮಂತ ಮಾಡಿದಾಗ ಮತ್ತು ಮಗು ಹುಟ್ಟಿದ ಮೇಲೆ ತೊಟ್ಟಿಲು ಶಾಸ್ತ್ರ ಮಾಡುವಾಗ ಅವರ ಅನುಕೂಲಕ್ಕೆ ತಕ್ಕಂತೆ ಊಟೋಪಚಾರಗಳನ್ನು ಮಾಡಿಸಿ ಬಂದ ಜನರಿಗೆಲ್ಲ ಬಡಿಸುತ್ತಿದ್ದರು. ಈ ಸಂಪ್ರದಾಯವು ಪ್ರಸ್ತುತದಲ್ಲಿಯೂ ಆಚರಣೆಯಲ್ಲಿ ಇರುವುದನ್ನು ನಾವು ಕಾಣುತ್ತೇವೆ. ಆದರೆ ಇಂತಹ ಸಾಂಸ್ಕೃತಿಕ ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಯನ್ನು ಪಡೆದುಕೊಂಡಿರುತ್ತವೆ.

ಹೀಗೆ ಸಾಂಸ್ಕೃತಿಕ ಪರಿಧಿಯಲ್ಲಿ ಬರುವ ಹಲವಾರು ಮೌಲ್ಯಗಳು ಆಚಾರ-ವಿಚಾರಗಳು, ನಂಬಿಕೆಗಳು, ರೂಢಿ-ಸಂಪ್ರದಾಯಗಳು ಕ್ರಿಯಾ ವಿಧಿಗಳು ಕಾದಂಬರಿಯಲ್ಲಿ ಕಂಡು ಬಂದು ಕಾದಂಬರಿಯ ಬೆಳವಣಿಗೆಗೆ ಹೊಸ ಹೊಸ ಆಯಾಮಗಳನ್ನು ಒದಗಿಸಿಕೊಡುತ್ತವೆ.

ಅಡಿ ಟಿಪ್ಪಣಿ :

೧. ಬದುಕು – ಗೀತಾ ನಾಗಭೂಷಣ, ಲೋಹಿಯಾ ಪ್ರಕಾಶನ, ಬಳ್ಳಾರಿ, ಪುಟ ಸಂ. ೪೨.

ಅಧ್ಯಾಯ -೫

ಬದುಕು ಕಾದಂಬರಿಯಲ್ಲಿ ಮನುಷ್ಯ ಸಂಬಂಧಗಳ ಸಾಮರಸ್ಯ ಮತ್ತು ವೈರುಧ್ಯ

ಸಮಾಜದಲ್ಲಿ ಒಪ್ಪಿತ ಮೌಲ್ಯಗಳು ಪರಸ್ಪರ ಪೂರಕವಾಗಿ ಸಹಕಾರ ಮನೋಭಾವವಿದ್ದರೆ ಅಂತಹ ವಾತಾವರಣ ಸಾಮರಸ್ಯದಿಂದಿರುತ್ತವೆ. ಇವುಗಳು ವಿರೋಧವಾಗಿದ್ದಾರೆ ಅಥವಾ ಅಸಂಗತವಾಗಿದ್ದರೆ ಅದು ವೈರುಧ್ಯವೆನಿಸುತ್ತದೆ. ಹಾಗಾಗಿ ಸಾಮಾಜಿಕ ನಿಬಂಧನೆಗಳ ಪರಿಧಿಯಲ್ಲಿ ಬದುಕುತ್ತಿರುವ ಮನುಷ್ಯ ಮನುಷ್ಯರ ನಡುವೆ ಸಾಮರಸ್ಯ ಮತ್ತು ವೈರುಧ್ಯಗಳು ಸಹಜವಾದ ಪ್ರಕ್ರಿಯೆಗಳು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಅಂಶಗಳು ಸಾಮರಸ್ಯ ಮತ್ತು ವೈರುಧ್ಯ ನೆಲೆಗಳನ್ನು ಜೊತೆ ಜೊತೆಯಲ್ಲಿಯೇ ನಾವು ಕಾಣಬಹುದು.

ಅಂತೆಯೇ ಬದುಕು ಕಾದಂಬರಿಯಲ್ಲಿ ವಿವಿಧ ವರ್ಗದ ಜನಸಮುದಾಯಗಳು ಕಂಡು ಬಂದು. ಒಂದು ವರ್ಗ ಹಾಗೂ ಮತ್ತೊಂದು ವರ್ಗದ ನಡುವೆ ಸಾಮರಸ್ಯ ಮತ್ತು ವೈರುಧ್ಯಗಳು ಕಂಡು ಬರುತ್ತವೆ. ಕೆಳವರ್ಗದವರ ಸಮುದಾಯ ಮತ್ತು ಮೇಲ್ವರ್ಗದವರ ಸಮುದಾಯಗಳ ನಡುವೆ ಕಾದಂಬರಿಯಲ್ಲಿ ಅಷ್ಟೇನೂ ಸಾಮರಸ್ಯ ಕಂಡು ಬರುವುದಿಲ್ಲ. ಔಪಚಾರಿಕವೆಂಬಂತೆ ಮಲ್ಲಪ್ಪ ಜಮಾದರನ ಕುಟುಂಬದ ಮದುವೆಯಲ್ಲಿ ಪಾಲ್ಗೊಳ್ಳುವುದು ಸಾಮರಸ್ಯವೆನಿಸಿದರೂ, ಅದರ ಒಡಲಲ್ಲೆ ವೈರುಧ್ಯ ತುಂಬಿಕೊಂಡಿತ್ತು. ಅವರಿಗೆ ಬೇರೆಯೇ ಆದ ಅಡುಗೆ ವ್ಯವಸ್ಥೆ ಮಾಡಿಸಿದ್ದು, ಸಮಾಜದಲ್ಲಿ ಮಡಿ ಮೈಲಿಗೆಯ ಮೇಲೆ ಪ್ರಭಾವ ಬೀರುವ ಪ್ರಕ್ರಿಯೆಯಾಗಿವೆ.

ಇದೇ ಮೇಲ್ವರ್ಗದ ಜನ ಕೆಳವರ್ಗದವರನ್ನು ದೂರವೇ ನಿಂತು ನೋಡುವ ದುಡಿಮೆಗಾಗಿ ಬಳಸಿಕೊಳ್ಳುವ ಈ ಮಂದಿ, ಕಾಮದ ವಿಚಾರ ಬಂದಾಗ ಇದಕ್ಕೆ ಪ್ರತಿಯಾಗಿ ವರ್ತಿಸುತ್ತಾರೆ. ಬಡವರ ಅಸಹಾಯಕತೆ ಮತ್ತು ಅವರ ಬಡತನವನ್ನು ಬಂಡವಾಳ ಮಾಡಿಕೊಂಡು, ಅವರಿಗೆ ಹಣದಾಸೆ ತೋರಿಸುವ ಮೂಲಕ ತಮ್ಮ ಲೈಂಗಿಕ ತೃಷೆ ತೀರಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಮಾತ್ರ ಜಾತಿಯ ಮಡಿವಂತಿಕೆ ತೋರುವುದಿಲ್ಲ. ಇದು ತೀರ ಅಸಂಗತವೆನಿಸಿದರೂ ಇದು ವಾಸ್ತವ ಸತ್ಯವೆನಿಸುತ್ತದೆ. ಕೆಳವರ್ಗದ ಹೆಣ್ಣುಮಕ್ಕಳಲ್ಲಿ ಕಂಡು ಬರುವ ಜೋಗತಿ. ಬೆತ್ತಲೆ ಸೇವೆಯಂತಹ ಹರಕೆಗಳಿಗೆ ಪೋಷಕರು ಇವರಾಗಿದ್ದು, ಸಮಾಜದಲ್ಲಿ ಸ್ವಾಸ್ಥ್ಯ ಕೆಡಿಸುವ ನಿಟ್ಟಿನಲ್ಲಿ ಇವರು ಪ್ರಭಾವ ಬೀರಿದ್ದಾರೆ.

ಸಮಾಜದಲ್ಲಿ ಇವರು ಉನ್ನತ ಸ್ತರದ ಶ್ರೀಮಂತಿಕೆ ಇವರಾದಾಗಿತ್ತು. ಹಾಗಾಗಿ ಇವರ ಮನೆಗಳ ವಿಚಾರದಲ್ಲಿಯೇ ಆಗಲಿ, ಊಟೋಪಚಾರದಲ್ಲಿಯೇ ಆಗಲಿ, ಉಡುಗೆ-ತೊಡುಗೆಗಳ ವಿಚಾರದಲ್ಲಿಯೇ ಆಗಲಿ ಇವರ ಮತ್ತು ಕೆಳವರ್ಗದವರ ನಡುವೆ ತೀರ

ಅಸಮಾನತೆ ಇತ್ತು. ಇವರ ಮನೆಗಳು ವೈಭವದ ಪ್ರತಿಬಿಂಬಗಳಾಗಿದ್ದವು. ಸುಣ್ಣ ಬಣ್ಣಗಳಿಂದ ಕಂಗೊಳಿಸಿ, ಶ್ರೀಮಂತಿಕೆಯ ಪ್ರತೀಕಗಳಾಗಿದ್ದವು. ಇದಕ್ಕೆ ತೀರ ವಿರುದ್ಧವೆಂಬಂತೆ ಸಣ್ಣ ಸಣ್ಣ ಗುಡಿಸಲುಗಳು ಬಡತನವನ್ನು ಅಣಕಿಸುತ್ತಿದ್ದವು. ಇವು ತಡಸಿಕಟ್ಟಿ ಹೆಂಡರಾಡಿಲಿಂದ ಸಾರಿಸಿ ಮ್ಯಾಲೇ ಸೀಂದಿ ಬಚೂ ಹೋದಿಸಿ ಮರದ ಜಂತಿಹೇರಿ ಸೀಂದಿ ಪೊರಕೆ ಹೊಚ್ಚಿ ಛಾವಣಿಯಿಂದ ಮಾಡಿದ ಗುಡಿಸಗಲುಗಳಾಗಿದ್ದವು.

ಇವರ ಉಡುಗೆ ತೊಡುಗೆಗಳು ಶ್ರೀಮಂತಿಕೆಯನ್ನು ಬಿಂಬಿಸುವಂತಹ ಜರತಾರಿಜುಬ್ಬ ಪೈಜಾಮ, ತಲೆಗೆ ರುಮಾಲು ರೇಷ್ಮೆಯಂತಹ ಝುರಿ ವಸ್ತ್ರಗಳನ್ನು ತೊಟ್ಟರೆ ಚಿಂದಿ ಬಟ್ಟೆಗೂ ಗತಿಯಿಲ್ಲದ, ಮೇಲ್ವಗದವರು ಬಳಸಿ ಬೀಸಾಡಿದ ಬಟ್ಟೆಗಳನ್ನು ಕೆಳವರ್ಗದವರು ತೊಡುತ್ತಿದ್ದರು. ಇದು ವಾಸ್ತವ ಬದುಕಿನ ನಗ್ನ ಸತ್ಯಾವಾದರೂ ಸಮಾಜದ ವ್ಯವಸ್ಥೆಯ ಅಸಮಾನ ಹಂಚಿಕೆಯನ್ನು ಸಾರುವ ಚಿತ್ರಣ ಕಂಡು ಬರುತ್ತಿತ್ತು.

ಸಮಾಜದ ಕ್ರೋರ ವ್ಯವಸ್ಥೆಯಡಿಯಲ್ಲಿ ಬದುಕುವ ಮನುಷ್ಯ ಒಂದುಕಡೆಯಾದರೇ, ಮೃಷ್ಟಾನ್ನ ಸವಿಯುವ ಜನ ಮತ್ತೊಂದೆಡೆ, ಒಂದು ತುತ್ತು ಅನ್ನಕ್ಕೊ ಪರದಾಡುವ ಇನ್ನೊಂದು ವರ್ಗದ ಜನ ಈ ಸಮಾಜದಲ್ಲಿ ಕಂಡು ಬರುತ್ತಾರೆ. ಅಂತೆಯೇ ಈ ಕಾದಂಬರಿಯಲ್ಲಿ ಉಳ್ಳವರೆನಿಸಿಕೊಂಡ ಮಂದಿಯು ಊಟೋಪಚಾರದಲ್ಲೂ ಸಹ ಬಗೆ ಬಗೆಯಾದ ಹೋಳಿಗೆ, ತುಪ್ಪ, ಚಪಾತಿ, ಅನ್ನ, ಸಜ್ಜೆ, ಅನ್ನ, ಮೊಸರು, ಇತ್ಯಾದಿಯಾದ ಊಟವನ್ನು ಸವಿದರೆ, ಅದೇ ಕೆಳವರ್ಗದ ಜನ ಒಂದು ತುತ್ತಿಗೂ ಪರದಾಡುವ ಘೋರವಾದ ಚಿತ್ರಣ ಕಂಡು ಬರುತ್ತದೆ. ಇವರಿಗೆ ಮೃಷ್ಟಾನ್ನದ ಯೋಗವೆಂದರೆ ಮೇಲ್ವರ್ಗದ ಮನೆಯಲ್ಲಿ ಶುಭ ಸಮಾರಂಭ, ಹಬ್ಬ ಹರಿದಿನಗಳಲ್ಲಿ ಕೆಳವರ್ಗದ ಗಂಡು ಹೆಣ್ಣು ಹಾಗೂ ಮಕ್ಕಳನ್ನದೆ ಊಟಕ್ಕಾಗಿ ಬುಟ್ಟಿಯನ್ನು ತಲೆ ಮೇಲೆ ಹೊತ್ತುಕೊಂಡು ಹೋಗುವ ಚಿತ್ರಣ ಮನಕಲಕುತದೆ. ಈ ಸಂದರ್ಭದಲ್ಲಿ ಕೂಡ ಮೇಲ್ವರ್ಗದವರು ಸಕ್ಕರೆಯಲ್ಲಿ ಮಾಡಿದ ಹೋಳಿಗೆಯನ್ನು ಅವರು ಸವಿದರೆ ಇವರಿಗೆ ಎಂಬಂತೆ ಮಾಡಿದ ಬೆಲ್ಲದ ಹೋಳಿಗೆ, ಹುಣಸೆಹಣ್ಣಿನ ಸಾರನ್ನು ಹಾಕುವ ಮೂಲಕ ಅಮಾನವೀಯ ನೆಲೆಯಲ್ಲಿ ವರ್ತಿಸುತ್ತಿದ್ದರು.

ಇನ್ನು ಕೆಳವರ್ಗದ ಮನೆಯಲ್ಲಿಯೇ ಮಾಡುವ ಅಡುಗೆಗಳೆಂದರೆ ತಂಗಳ ನುಚ್ಚು ಮೇಲ್ವರ್ಗದ ಮನೆಯಿಂದ ತಂದಂಥಹ ಹುಳಿ ಮಜ್ಜಿಗೆ, ಸಜ್ಜೆರೊಟ್ಟಿ, ಜೋಳದ ನುಚ್ಚಿನ ಗಂಜಿಯನ್ನು ಮಕ್ಕಳಿಗೂ ಹಾಕಿ ತಾವು ತಿಂದು ಅರೆಬೆರೆ ಹೊಟ್ಟೆಯಲ್ಲಿ ಬದುಕುವ ಘೋರ ಚಿತ್ರಣ ಈ ಕಾದಂಬರಿಯಲ್ಲಿ ಸಮಾನತೆಯ ವೈರುಧ್ಯವನ್ನು ಎತ್ತಿ ತೋರಿಸುತ್ತಾರೆ.

ಮಡಿ ಮೈಲಿಗೆ ವಿಚಾರದಲ್ಲಿ ಮೇಲ್ವರ್ಗದವರು ಮತ್ತು ಕೆಳವರ್ಗದವರ ನಡುವೆ ತೀರ ಅಸಮಾನತೆ ಇತ್ತು. ಕೆಳವರ್ಗದವರಾದ ಹೊಲೆಯರು, ಮಾದಿಗರು, ಬುಡಬುಡಿಕೆಯವರು, ಪಂಚಾರರು, ಕೊರಮರು, ಅಗಸರು, ಜಾಡಮಾಲಿಗಳು, ಕಬ್ಬಲಗೆಯರು, ಸಮಗಾರು, ಅಜಾಮರು ಫಾಕೀರರು, ಗೊಲ್ಲರು, ಮುಲ್ಲಾಗಳು, ಬ್ಯಾಡರು ಇತ್ಯಾದಿ ಜಾತಿಯ

ನಡುವೆ ಭೇದಭಾವವಿತ್ತು. ಮೇಲ್ವರ್ಗದವರು ಇವರನ್ನು ತಮ್ಮ ಮನೆಯ ಹೊಸ್ತಿಲಿನ ಹತ್ತಿರವೂ ಸಹ ಸೇರಿಸುತ್ತಿರಲಿಲ್ಲ.

ಹಬ್ಬ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಈ ಎಲ್ಲಾ ಜನಾಂಗದವರು ಒಟ್ಟಿಗೆ ಸೇರಿ ಸಾಮರಸ್ಯ ಮನೋಭಾವ ಇದ್ದರೂ, ವ್ಯಕ್ತಿಗತವಾಗಿ ಜಾತಿ, ಮಡಿ, ಮೈಲಿಗೆ ಸಂಪ್ರದಾಯವಿತ್ತು. ಕೆಳಜಾತಿಯ ಜನಾಂಗದವರಲ್ಲಿಯು ಈ ಜಾತಿಯ ಅಸಮಾನ ಕಲ್ಪನೆಯಿತ್ತು. ಸ್ವಲ್ಪ ಉಳ್ಳವರಾದರೆ ಇಲ್ಲದವರನ್ನು ಕೀಳಾಗಿ ಕಾಣುವ ಅಸಮಾನತೆ ಇತ್ತು.

ಹೀಗೆ ಮೇಲ್ವರ್ಗ ಮತ್ತು ಕೆಳವರ್ಗದವರಲ್ಲಿ ಮನೆ, ವಸ್ತ್ರ, ಊಟೋಪಚಾರದಲ್ಲಿ ವೈರುಧ್ಧ ಅಂಶಗಳು ಕಂಡು ಬರುತ್ತವೆ. ಮೇಲ್ವರ್ಗದವರಿಗೆ ಹೊಯ್ ಕಯ್ಯಾಗುವಂತೆ ಸರಿಸಮಾನಾಗಿ ನಿಲ್ಲಬಲ್ಲ ಕೆಳವರ್ಗದ ಜಮಾದಾರನ ಕುಟುಂಬ ಮಾತ್ರ ಇದಕ್ಕೆ ಸರಿಸಮಾನಾಗಿ ನಿಲ್ಲುತ್ತದೆ. ಮಲ್ಲಪ್ಪನ ಮನೆಯು ಮೇಲ್ವರ್ಗದವರ ಮನೆಯು ನಾಚುವಂತಿತ್ತು. ವಸ್ತ್ರದಲ್ಲಿಯೇ ಆಗಲಿ, ಊಟೋಪಚಾರದಲ್ಲಿಯೇ ಆಗಲಿ ಸಮಾನತೆ ಇತ್ತು. ಆದರೆ ಜಾತಿ ಹಾಗೂ ಮಡಿ ಮೈಲಿಗೆ ವಿಚಾರದಲ್ಲಿ ಶ್ರೀಮಂತನಾದ ಕೆಳವರ್ಗದ ಮಲ್ಲಪ್ಪ ದೂರವೇ ನಿಲ್ಲುತ್ತಾನೆ. ತನ್ನ ವೈಭವದಿಂದ ಮಾಡಿದ ಮಗನ ಮದುವೆಯಲ್ಲಿ ಮೇಲ್ವರ್ಗದವರಿಗೆ ಬೇರೆಯೇ ಆದ ಊಟದ ವ್ಯವಸ್ಥೆ ಮಾಡಿಸಿರುತ್ತಾನೆ. ಹಾಗಾಗಿ ಜಾತಿಯ ಮೂಲ ಮನುಷ್ಯರು ಎಷ್ಟೇ ಶ್ರೀಮಂತರಾದರು ಅದು ತನ್ನ ನೆಲೆಯನ್ನು ಸಡಿಲಿಸಲು ಬಿಡುವುದಿಲ್ಲ.

ತೀರ ಕೆಳಸ್ತರದ ಜನ ಸಮುದಾಯವಾದ ಹೊಲೆಯರು, ಮಾದಿಗರು ಮತ್ತು ಬುಡಬುಡಿಕೆ ಇತ್ಯಾದಿ ಕೆಳವರ್ಗದ ಜನರು ಹಸಿವಿನ ತೃಷೆಯನ್ನು ನೀಗಿಸಿಕೊಳ್ಳಲು ತಮ್ಮ ಮೈಮಾರಿಯಾದರೂ ಬಡತನದ ಬೇಗೆಯನ್ನು ನಿವಾರಿಸಿಕೊಳ್ಳುವ ಚಿತ್ರಣ ಸಮಾಜದ ಅಸಮಾನತೆಯನ್ನು ಎತ್ತಿಹಿಡಿಯುತ್ತದೆ. ಇದರಿಂದ ತುತ್ತು ಅನ್ನಕ್ಕಾಗಿ ಕಳ್ಳತನ ಮಾಡುವ, ಮೋಸ ಮಾಡುವ ದಿಸೆಯಲ್ಲಿ ಸಮಾಜ ಘಾತುಕ ಘಟನೆಗಳಿಗೆ ಕಾರಣವಾಗುತ್ತಿದ್ದರು. ತುತ್ತು ಅನ್ನಕ್ಕಾಗಿ ಊರಿಂದ ಊರಿಗೆ ಅಲೆಯುವ ಈ ಮಂದಿ ಅಕ್ಷರ ವಿದ್ಯಾಭ್ಯಾಸದಿಂದ ದೂರವೇ ಉಳಿಯುತಿದ್ದರು. ಬಡತನದ ಬವಣೆ ಇವರನ್ನು ಕಾಡುತ್ತಿತ್ತು. ಅಜ್ಞಾನ ಇವರಲ್ಲಿ ಮನೆಮಾಡಿತ್ತು. ವಿದ್ಯಾಭ್ಯಾಸದ ಅರಿವಿರದ ಈ ಜನ ತಮ್ಮ ಮಕ್ಕಳನ್ನು ವಿದ್ಯೆಯಿಂದ ದೂರವೇ ಉಳಿಸುತ್ತಿದ್ದರು. ಸರ್ಕಾರ ಇವರಿಗಾಗಿ ಅನೇಕ ಸವಲತ್ತುಗಳನ್ನು ನೀಡಿದರು ಅದನ್ನು ಉಪಯೋಗಿಕೊಳ್ಳದೆ ಅನಕ್ಷರಸ್ಥರಾಗಿ ಇವರ ಮಕ್ಕಳು ಉಳಿಯುತ್ತಿರುವುದು ಕಂಡು ಬರುತ್ತದೆ. ಸಮಾಜದ ಮುಖ್ಯವಾಹಿನಿಗೆ ಬರಲು ಪ್ರಯತ್ನಿಸಿದರೂ ಸಹ ಮೇಲ್ವರ್ಗದ ಸಂಚುತನ ಇವರನ್ನು ಬಡವರಾಗಿಯೇ ಉಳಿಯುವಂತೆ ಮಾಡುತ್ತಿತ್ತು ಕೆಳವರ್ಗದ ಅಜ್ಞಾನ ತುಂಬಿದ ಅತಿಯಾದ ಲೈಂಗಿಕ ತೃಷೆ ಬಡತನದ ಬೇಗೆಗೆ ತಳುತ್ತಿತ್ತು. ಇದರಿಂದ ಮನೆ ತುಂಬ ಮಕ್ಕಳ ಹುಟ್ಟಿಗೆ ಕಾರಣವಾಗಿ ಎಷ್ಟೇ ದುಡಿದರೂ ಸಹ ಸಂಸಾರದ ನಿರ್ವಹಣೆಗೆ ಸಾಕಾಗದೆ ಬಡವರು ಬಡವರಾಗಿಯೆ ಇರುತ್ತಿದ್ದರು. ಇವರ ಇನ್ನೊಂದು ಅತಿಯಾದ ದುಶ್ಚಟವೆಂದರೆ ಸೇಂದಿ ಕುಡಿಯುವುದು. ಈ ವರ್ಗದ ಜನ ತಮ್ಮ ಹೆಂಡತಿಯನ್ನಾದರೂ

ತಲೆ ಹಿಡಿದು ಸೇಂದಿ ಕುಡಿಯುವ ಹವ್ಯಾಸವನ್ನು ರೂಢಿಸಿಕೊಂಡಿರುವುದು ಸಮಾಜದ ನೈತಿಕ ನೆಲೆಗಟ್ಟಿನಲ್ಲಿ ವೈರುದ್ಯವೆನಿಸುತ್ತದೆ.

ಧಾರ್ಮಿಕ ವಿಚಾರಗಳಲ್ಲಿ ಸಾಮರಸ್ಯ ಮತ್ತು ವೈರುಧ್ಯಗಳು ಸಮಾಜದಲ್ಲಿ ಜೊತೆಜೊತೆಯೇ ಸಾಗಿಬರುವ ಪ್ರಕ್ರಿಯೆ. ಧಾರ್ಮಿಕತೆಯನ್ನು ದುರುಪಯೋಗಪಡಿಸಿಕೊಂಡ ಮೇಲ್ವರ್ಗದ ಜನರು ತಮ್ಮ ಸ್ವಾರ್ಥಕ್ಕಾಗಿ, ಕೆಳವರ್ಗದ ಜನರನ್ನು ಬಲಿಪಶು ಮಾಡಿಕೊಳ್ಳುವ ಪ್ರಕ್ರಿಯೆ ಈ ಕಾದಂಬರಿಯಲ್ಲಿ ಕಂಡು ಬರುತ್ತದೆ. ಸಮಾಜದ ವಿರೋಧಿ ನೆಲೆಯಲ್ಲಿ 'ಜೋಗತಿ' ಪದ್ಧತಿ ಕಾಂದಬರಿಯಲ್ಲಿ ಬರುವ ಗಮನಾರ್ಹ ಅಂಶ. ಇದು ಧಾರ್ಮಿಕವಾಗಿ ಸಾಮಾಜಿಕವಾಗಿ ನೈತಿಕವಾಗಿ ಮಾನವೀಯ ನೆಲೆಯಲ್ಲಿ ಅಮಾನವೀಯ ಆಚರಣೆಯಾಗಿದೆ. ಮೊದಲ ಬಾರಿಗೆ ಕನ್ನಡ ಸಾಹಿತ್ಯದಲ್ಲಿ ಜೋಗತಿಯರ ಸಮಸ್ಯೆಯನ್ನು ಅತ್ಯಂತ ಸಾಂದ್ರವಾಗಿ ಮತ್ತು ವರ್ಣನಾತ್ಮಕವಾಗಿ ಚಿತ್ರಿಸಿರುವ ಕಾದಂಬರಿ ಇದಾಗಿದೆ. ಈ ಸಮಸ್ಯೆ ಚಿತ್ರಣವು ಕಾದಂಬರಿಯಲ್ಲಿ ಪ್ರಾದೇಶಿಕತೆಯ ಲಕ್ಷಣವಾಗಿದೆ.

ಜೋಗತಿ ಪರಿಕಲ್ಪನೆ ಪ್ರಾದೇಶಿಕ ನೆಲಗಟ್ಟಿನಲ್ಲಿ ಕೂಡಿರುವಂತದ್ದು. ಇದು ಉತ್ತರ ಕರ್ನಾಟಕದ ಎಲ್ಲಮ್ಮ ದೇವಿಯ ಆಚರಣೆಯ ಒಂದು ಭಾಗ. ಕಾದಂಬರಿಯಲ್ಲಿ ಇದಕ್ಕೆ ಸಂಬಂಧಿಸಿದಂತೆ, ಶಿವಳ್ಳಿ ಮತ್ತು ಕಲ್ಬುರ್ಗಿ ಪ್ರದೇಶಗಳ ನಡುವೆ ನಡೆಯುವ ಕಥಾ ವಸ್ತುವಾದ್ದರಿಂದ ಇವರ ಊರುಗಳಲ್ಲಿಯೂ ಜೋಗತಿಯರು ಇದ್ದರು. ಈ ಜೋಗತಿಯರು ಎಲ್ಲಮ್ಮದೇವಿಯ ಸೇವಕಿಯಾಗಿದ್ದು, ಈ ದೇವಿಯ ಆರಾಧಕರಾಗಿದ್ದರು.

ಜೋಗತಿ ಎಂದರೆ ಹದಿಹರೆಯದ ಹೆಣ್ಣುಮಕ್ಕಳನ್ನು ಮದುವೆ ಮಾಡದೆ ದೇವಿಯ ಸೇವೆಗೆಂದು ಮೀಸಲಾದ ಹೆಣ್ಣು. ಈ ರೀತಿಯ ಅನಾಗರೀಕ ಅಮಾನವೀಯ ಪೂಜಾ ರೀತಿ ರಿವಾಜುಗಳು ಮೇಲ್ಜಾತಿಯ ಮಂದಿಯಲ್ಲಿಲ್ಲ. ಕೆಳವರ್ಗದ ಜನರಲ್ಲಿ ಇರುವ ಅತಿಯಾದ ಭಕ್ತಿ ತುಂಬಿದ ಮೌಢ್ಯ ಇದಕ್ಕೆಲ್ಲ ಕಾರಣ. ತಮ್ಮ ಕಷ್ಟ ನಿವಾರಣೆಗೆ ದೇವಿಯ ಮೊರೆ ಹೋದಾಗ ದೇವರ ಏಜೆಂಟುದಾರನಾದ ಪೂಜಾರಿ ಹರಕೆ ರೂಪದಲ್ಲಿ ತಮ್ಮ ಮೊದಲ ಮಗಳನ್ನು ದೇವಿಯ ಸೇವೆಗೆಂದು ಬಿಡುತ್ತೇನೆ ಎಂದು ಮುಡಿಪು ಕಟ್ಟುವಂತೆ ಪ್ರೇರಿಪಿಸುವುದು. ಇದರಿಂದ ಹೆಣ್ಣು ಮಗು ಜನಿಸಿದ್ದೇ ಆದರೆ ಆ ಮಗುವನ್ನು 'ಜೋಗಣಿ' ಬಿಡಬೇಕಾಗಿತ್ತು. ಇದು ಪಾಲಿಸಲೇ ಬೇಕಾದ ಸಂಪ್ರದಾಯ. ಈ ಸಂಪ್ರದಾಯದ ಹುಟ್ಟಿಗೆ ಕಾರಣ ಮೇಲ್ಜಾತಿಯವರ ಶೋಷಣೆಯೆ ಇನ್ನೊಂದು ಮುಖ. ಇದು ಅಮಾನವಿಯ ರೂಪದ ಹರಕೆ.

ಸಂಪ್ರದಾಯದಂತೆ ಈ ಹರಕೆ ತೀರಿಸಲು ಹೆಣ್ಣು ಮಕ್ಕಳು ಮೈನೆರೆದ ಸಂದರ್ಭದಲ್ಲಿ ಪೂಜಾರಿಯ ಮೈ ಮೇಲೆ ದೇವರು ಬಂದು ಜೋಗಣಿ ಬಿಡಲು ದಿನ ನಿರ್ಧಾರ ಮಾಡುತ್ತಾನೆ. ಇದು ನಿರ್ಧಾರವಾಗುವುದು ಸಾಮಾನ್ಯವಾಗಿ ಮಾಪುರದೇವಿಯ ಜಾತ್ರೆಯಲ್ಲಿ. ಇಲ್ಲಿ ನಿರ್ಧರಿಸಿ ಮೈನೆರೆದ ಹೆಣ್ಣನ್ನು ಪಟ್ಟಕ್ಕೆ ಹಾಕಿಕೊಂಡ ಗೌಡನೋ, ಕುಲಕರ್ಣಿಯೋ, ಸಾಹುಕಾರನೋ

ಅವಳಿಗೆ ಪಟ್ಟದ ಖರ್ಚು ದೊಡ್ಡ ಮೊತ್ತದ ಹಣ, ಜರತಾರಿ ರೇಷ್ಮೆ ಸೀರೆ, ಕುಪ್ಪಸ, ಬಂಗಾರದ ಒಡವೆ ವಸ್ತ್ರ, ತಾಳಿ ಸಾಮಾನು, ಹಸುರು ಬಳೆ, ಕಾಲುಂಗುರ ಮೊದಲಾದ ಎಲ್ಲವನ್ನು ಕೊಡಬೇಕು. ಅವಳಿಗೆ ಸುರಗೆ ಸುತ್ತಿ, ಮೀಯಿಸಿ, ಅವಳ ಎಡಕ್ಕೆ ಕತ್ತಿ ಇಟ್ಟು ಅದನ್ನೆ ಗಂಡನೆಂದು ಸಿಂಗರಿಸಿ ಅದರೊಂದಿಗೆ ಮದುವೆ ಶಾಸ್ತ್ರಗಳನ್ನೆಲ್ಲ ಮಾಡಿ ತಾಳಿ ಕಟ್ಟುತ್ತಾರೆ. ತಲೆಯ ಮೇಲೆ ಬಿದಿರ ಬುಟ್ಟಿಯಂತ ಪರಡಿ ಹೊರಸುತ್ತಾರೆ. ಬಗಲಲ್ಲಿ ಚೌಡಿಕೆ ಕೊಡುತ್ತಾರೆ. ಅಂದಿನಿಂದ ಅವಳು ಚುಂಚುರು ಮಾಪುರ ತಾಯಿಯ ಜೋಗಣಿ ಅಂದು ರಾತ್ರಿ ಪಟ್ಟಕ್ಕೆ ಹಾಕಿಕೊಂಡವನು ಅವಳ ಮೈ ಮೀಸಲು ಮುರಿದು ಅವಳ ಕನ್ಯತನ ಕಳೆದು ಅವಳನ್ನು ಹೆಣ್ಣು ಮಾಡುತ್ತಾನಷ್ಟೆ. ಮುಂದೆಲ್ಲಾ ಅವಳು ದೇವಿಯ ಹೆಸರಿನ ಮೇಲೆ ಬಂದ ಗಂಡಸರಿಗೆಲ್ಲಾ ಸೆರಗು ಹಾಸುತ್ತಾ ಅವರ ಮಗ್ಗಲು ಬಿಸಿ ಮಾಡುತ್ತಾ ಅವರ ಕಾಮದ ತಿಂಡಿಗೆ ಬಲಿಯಾಗುತ್ತಾ ದಿನಕಳೆಯಬೇಕು. ಅವಳ ಹುಟ್ಟುವ ಮಕ್ಕಳಿಗೆ ತಂದೆಯ ಹೆಸರಿಲ್ಲ, ತಾಯಿಯದೆ ಹೆಸರು. ಅವಳು ಅಧಿಕೃತವಾಗಿ ಸೂಳೆಯಾಗುತ್ತಾಳೆ. ಇದು ಜೋಗಣೀಯರ ಸ್ವರೂಪ.

ದೈವದ ಹೆಸರಿನಲ್ಲಿ ಕೆಳವರ್ಗದವರ ಹೆಣ್ಣುಮಕ್ಕಳನ್ನು ಲೈಂಗಿಕ ಶೋಷಣೆಗೆ ಬಲಿಯಾಗಿಸಿಕೊಳ್ಳುವ ಬಲಿಷ್ಠ ವ್ಯಕ್ತಿಗಳ ಜಾಣತನ ಮತ್ತು ಮೌಢ್ಯ ಕಂದಾಚಾರಗಳಿಂದ ಹರಕೆ ರೂಪದಲ್ಲಿ ಬಲಿಯಾಗಿ ಬಲಿಷ್ಟ ವ್ಯಕ್ತಿಗಳಿಗೆ ಮೀಸಲಿಡುವ ಕೆಳವರ್ಗದವರ ದಡ್ಡತನವನ್ನು ಇಲ್ಲಿ ಕಾಣಬಹುದು. ಇಂತಹ ಆಚರಣೆಗಳಿಗೆ ಸರ್ಕಾರ ನಿಷೇಧ ಹೇರಿದ್ದರೂ ಈಗಲೂ ಕೂಡ ವಿರಳವಾಗಿ ಉಳಿದುಕೊಂಡಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ.

ಈ ಅನಿಷ್ಠ ಪದ್ಧತಿಯ ಬಗ್ಗೆ ೬೭ನೇ ಶತಮಾನದಲ್ಲಿ ಬರುವ ದಾಸ ಶ್ರೇಷ್ಠರಾದ ಕನಕದಾಸರು ಹೀಗೆ ಹೇಳಿದ್ದಾರೆ.

> **"ಎಕ್ಕನಾತಿ ಎಲ್ಲಮ್ಮ ಮಾರಿದುರ್ಗಿಯ ಚೌಡಿಯ**
>
> **ಅಕ್ಕರಿಂದಲಿ ಪೂಜೆ ಮಾಡಲೇಕೆ**
>
> **ಚಿಗುರೆಲೆ ಬೇವಿನ ಸೊಪ್ಪು ನಾರಸೀರೆ"**[೧]

ಈ ಕೀರ್ತನೆಯಲ್ಲಿ ಚೌಡಿ ಎಲ್ಲಮ್ಮನಂತಹ ಕ್ಷುದ್ರ ದೇವಿಯ ಹೆಸರಿನಲ್ಲಿ ನಡೆಯುವ ಅರ್ಥರಹಿತವಾದ ಆಚರಣೆಯನ್ನು ವಿರೋಧಿಸಿದ್ದಾರೆ. ಆದರೂ ಸಹ ಇಂತಹ ಕೆಟ್ಟ ಪದ್ಧತಿಗಳು ಇಂದಿಗೂ ಈ ಪದ್ಧತಿ ಬೇರೆ ಬೇರೆ ಹೆಸರಿನಲ್ಲಿ ಉತ್ತರ ಕರ್ನಾಟಕದಲ್ಲಿ ಉಳಿದುಕೊಂಡು ಬಂದಿದೆ.

ಇಂತಹ ಸಮಾಜ ವಿರೋಧಿ ನೆಲೆಗೆ ಬಲಿಯಾದವರೆಲ್ಲಿ ದುರ್ಗಿ–ಮರ್ಗಿ, ಈರವ್ವ, ತುಳಜಾ, ನಿಂಬವ್ವ, ನೀಲವ್ವ ಇತ್ಯಾದಿ ಪ್ರಮುಖರು. ಇವರಲ್ಲಿ ಈ ವ್ಯವಸ್ಥೆಗೆ ಸೋತು ಹೊರಬರಲಾಗದೆ ತನ್ನ ಸಾವನ್ನು ಕಂಡವಳು ನೀಲವ್ವ ಇವಳಿಗೆ ಜೋಗಣಿಯಾಗುವುದು

ಸ್ವಲ್ಪವು ಇಷ್ಟವಿರಲಿಲ್ಲ. ಅವಳು ಹೊಲಗೇರಿಯ ತುಕಾರಾಮನನ್ನು ಪ್ರೀತಿಸುತ್ತಿದ್ದಳು. ಮತ್ತು ಅವನನ್ನೇ ಮದುವೆಯಾಗಬೇಕು ಎಂದು ಕೊಂಡಿದ್ದಳು. ಆದರೆ ತಂದೆ-ತಾಯಿಗಳ ಹರಕೆ ಅವಳಿಗೆ ಸಿಡಿಲಿನಂತೆ ಎರಗುತ್ತದೆ. ನೀಲವ್ವ ಮತ್ತು ತುಕರಾಮ ಇಬ್ಬರೂ ದೂರದ ದೇಶಕ್ಕೆ ಹೋಗಿ ಮದುವೆ ಮಾಡಿಕೊಂಡು ಇರುತ್ತೇವೆಂದು ನಿರ್ಧರಿಸಿರುತ್ತಾರೆ. ಆದರೆ ಪೂಜಾರಪ್ಪನ ಜಬ್ಬರದಸ್ತಿನಿಂದ ಅವಳ ತಂದೆಗೆ ಬೇರೆ ದಾರಿ ಕಾಣದೆ ಮಗಳನ್ನು ಜೋಗಣಿಯಾಗಲು ಬಲವಂತ ಮಾಡುತ್ತಾರೆ. ಜೋಗಣಿಯಾದ ಅನಂತರವಾದರೂ ಈ ಕೂಪದಿಂದ ಹೊರಬರಲು ಮನಸ್ಸು ಮಾಡಿದರು 'ತುಕರಾಮ' "ಕೆಟ್ಟ ಹೆಣ್ಣಿಗೆ ನಾನು ಮದಿ ಆಗಂಗಿಲ್ಲ" ಅಂತ ಹೇಳಿದಕ್ಕೆ ಆಕೆ ಬೇರೆ ದಾರಿ ಕಾಣದೆ ಮತ್ತೆ ಜೋಗಣಿಯಾಗಲು ಮನಸ್ಸು ಬಾರದೆ ಕೊನೆಗೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇದು ನೀಲವ್ವನ ದೃಷ್ಟಿಯಲ್ಲಿ ವಿರೋಧಿ ನೆಲೆಯಾದರೂ ಅಲ್ಲಿನ ಜನತೆಯ ಮೌಢ್ಯ ಇದನ್ನು ಪೋಷಿಸುವಂತೆ ಮಾಡಿದೆ. ಮತ್ತು ಅಲ್ಲಿನ ಮಂದಿಯ ದ್ವಂದ್ವ ಸ್ಥಿತಿ ಈ ವ್ಯವಸ್ಥೆಯನ್ನು ಒಪ್ಪಿಕೊಂಡು ಬರುವಂತೆ ಮಾಡಿದೆ. ಈ ಪದ್ಧತಿಯನ್ನು ಲೇಖಕಿ ವೈಚಾರಿಕ ನೆಲೆಯಲ್ಲಿ ಚರ್ಚೆಗೆ ಒಳಪಡಿಸಿದ್ದಾರೆ.

"ಏನ ಹರಕಿನೋ ಏನ ಮಣ್ಣೋ ಯವ್ವಾ ಈ ಮಂದೀದೂ...... ಈ ಅವ್ವಾ ಅಪ್ಪಗೋಳು ಮಕ್ಕಳ ಜಿಂವಕ್ಕ ಧೋಕಾ ಆಗಂತಾ 'ಹರಿಕಿ' ಯಾಕ ಇಟ್ಕೋತಾರಂತೀನೀ... ತಾವು ಬೇಡಿಕೊಂಡದಕ್ಕ ಏನೂ ಅರೀದ ಪಾಪದ ಮಗಳು ಸತ್ತುಹೋಯ್ತಲ್ಲ! ಹಿಂತಾ 'ಹರಿಕಿ' ಹೊತಗೊಂಡು ಹಾಲಾ ಮಗಳ ಜಿಂವಾ ತಗೊಂಡ್ರು- ಈ ಮಾತುಗಳನ್ನು ನೋವಿನಿಂದ ನುಡಿದರೂ, ತಾವಾಡುವ ಮಾತಿಗೂ ಹೆದರುವ ಮುಗ್ಧ ಮಂದಿ ಇವರು..."

"ಹೊಲಗೇರಿ ಹೆಂಗಸರು ಜೋಗಣಿ ಆಗಾದೂ.... ಮ್ಯಾಗೇರಿ ಮಂದಿ ಅಂದರ ಗಂಡಸರು ಅವರಿಗಿ 'ಪಟ್ಟಕ್ಕ' ಹಾಯ್ಕೊಂಡು ಅವರ ಮೈ ಉಂಡು ಬಿಡಾದೂ... ತಮ್ಮ ಮೈ ತಿಂಡಿ ತೀರಿದ ಮ್ಯಾಲ ಆಕಿಗಿ ದೂರು ತಳ್ಳಾದೂ... ಮುಂದಕಿ ಹಾದರಕ್ಕಿಳ್ದು ಹೊಟ್ಟಿ ತುಂಬಸ್ಗೋಳ್ಳಾದು ಅಂದ್ರ... ಹೂಂ... ನಮಗ್ಯಾಕ ಬಿಡು. ಇದು ಹಿಂದಿನ ಹತ್ತೆಂಟು ತೆಲಿಮಾರಿಂದ ನಡ್ಕೋತ ಬಂದಾದ. ನಾವು ಏನಾರೆ ಅಂದು ಆ ಮಾಪುರ ತಾಯಿ ದೇವಿ ಸಿಟ್ಟಿನ ಕಣ್ಣಿಗೆ ಗುರಿಯಾಗದು... ನಮಗ್ಯಾಕ ಬೇಕು ಬಿಡು ಇದೆಲ್ಲಾ.... ತಾಯಿ ನಮ್ಮವ್ವಾ ಮಾಫ ಮಾಡು ನಮಗೆ...."[3] ಎಂದಳು ಮಲ್ಲವ್ವ

ಇಲ್ಲಿ ಲೇಖಕಿಯು ಮಲ್ಲಪ್ಪ ಮಲ್ಲವ್ವನ ಮುಖಾಂತರ ಈ ಪದ್ಧತಿಯನ್ನು ವೈಚಾರಿಕವಾಗಿ ಚಿಂತೆಗೆ ಹಂಚಿದರೂ ಸಮಾಜದ ವಿರೋಧಿಯಾಗಿ ನಡೆಯಲು ಸಾಧ್ಯವಾಗದೆ ಒಪ್ಪಿಕೊಳ್ಳೊದನ್ನು ಕಾಣುತ್ತೇವೆ.

ಈ ಕಾದಂಬರಿಯಲ್ಲಿ ನೀಲವ್ವನ ಮುಖಾಂತರ ಈ ಪದ್ಧತಿಯನು ಖಂಡಿಸಿದರೂ ಸಮಾಜದ ವಿರೋಧಿಯಾಗಿ ನಡೆಯಲು ಸಾಧ್ಯವಾಗದೆ ಒಪ್ಪಿಕೊಳ್ಳಲೂ ಆಗದೆ ಜೀವ ತೆರುವುದನ್ನು ನಾವು ಕಾಣುತ್ತೇವೆ.

ಕಾದಂಬರಿಯ ವಿರೋಧಿ ನೆಲೆಯಲ್ಲಿ ಬರುವ ನೀಲವ್ವನ ದುರಂತ ಕತೆ ಒಂದೆಡೆಯಾದರೆ, ಮತ್ತೊಂದು ಜೋಗತಿ ತುಳಜ ಬದುಕನ್ನು ಎದುರಿಸುವ ರೀತಿಯ ಬೇರೆ ದಿಟ್ಟತನದಿಂದ ಈ ಪದ್ಧತಿಗೆ ಬಲಿಯಾದರೂ, ಅದರಿಂದ ಹೊರಬಂದು ಸಮಾಜವನ್ನು ಎದುರಿಸುವ ನಿಲುವನ್ನು ಹೊಂದಿದವಳಾಗಿದ್ದಳು. ಜಬಂಗಿ ಹಳ್ಳಿಯಲ್ಲಿಯ ಮಾದರ ಕಳಸಪ್ಪನ ಮಗಳು ತುಳಜ. ಜುಂಚೂರು ದೇವಿಗೆ ಹರಕೆಯ ಬಲಿಯಾಗಿ ಜೋಗಣಿಯಾಗಿ ನಿಂತವಳು. ದೇವಿಯ ಸೇವೆಗೆ ನಿಂತು ಬಂದ ಗಂಡಸರ ಕೆಳಗೆ ಬೀಳುವ ಹಲ್ಕಟ್ ಧಂಧೆ ತುಳಜಗೆ ಬೇಕಾಗಿರಲಿಲ್ಲ. ಯಾಕೆಂದರೆ ಕೆಳಗೇರಿಯ ಜೋಗಣಿಯರ ಬದುಕು ನೋಡುತ್ತಾ ಬೆಳೆದ ಹುಡುಗಿ ಹರೆಯ ದಿನಗಳಲ್ಲಿ ಜೋಗಣಿಯ ಬಾಳು ಮೋಜಿನಿಂದ ಕಳೆಯುತ್ತದೆ ನಿಜ, ಆದರೆ ಯಾವಾಗ ಅವಳ ಮೈಯಲ್ಲಿ ಹರೆಯ ಕುಸಿಯತೊಡಗುತ್ತದೆಯೋ ಆಗ ಅವಳ ಗುಡಿಸಲಿಗೆ ಬರುವ ಗಿರಾಕಿಗಳ ಸಂಖ್ಯೆಯು ಕಡಿಮೆಯಾಗುತ್ತದೆ ಎಂಬುದು ಅವಳ ಅನಿಸಿಕೆಯಾಗಿತ್ತು. ಅವಳ ಪಕ್ಕದ ಗುಡಿಸಿನಲ್ಲಿದ್ದ ಜೋಗಣಿ ನಿಂಬೆವ್ವಾಯಿ ತುಳಕಜನ ಹತ್ತಿರ ಕರೆದು ಏನಾದರೂ ಸರಿ ನೀನು ಜೋಗಣಿ ಆಗ್ಬೇಡ ಎಂದು ತಾನು ಅನುಭವಿಸಿದ ನೋವನ್ನು ಹೇಳಿಕೊಂಡಳು. ಜೊತೆ ಇದರಿಂದ ಮುಂದಿನ ಜೀವನ ಹೇಗೆ ಬಲಿಯಾಗುತ್ತದೆ ಎಂದು ತಿಳಿಸಿದಳು. ಹಾಗೆಯೇ ಅವಳ ಮಾತುಗಳಲ್ಲಿ ನಿಂಬಾವ್ವಾಯಿ ಹೇಳುವ ರೀತಿ ಇದು.

"ಚುಂಚೂರು ದೇವತೆ ಅದುನೂ ಹೆಣ್ಣು ದೇವರು. ಹೆಣ್ಣು ದೇವರೇ ಹೆಣ್ಣುಮಕ್ಕಳ ಮರ್ವಾದಿ ಬಿಟ್ಟು ಸೂಳೇರಾಗ್ರಿ ಅಂತ ಯಾ ದೇವರು ಹೇಳಂಗಿಲ್ಲ. ಮದಿ ಮಾಡ್ಕೊಂಡು ಒಬ್ಬ ಗಂಡನ ಹೆಣ್ತ್ಯಾಗಿ, ಗರತಿ ಆಗಿ ಬಾಳ್ಯಾ ಮಾಡ್ರಿ ಅಂತ ಹೇಳ್ತಾವ ಎಲ್ಲಾ ದೇವರುಗೋಳು... ಆ ದೇವರು ಮ್ಯಾಲಿನ ಜಾತಿ ಹೆಂಗಸರಿಗಿ ಮದಿ ಮಾಡ್ಕೊಂಡು ಗರತಿ ಆಗ್ರಿ ಅಂತಾದ. ನಮ್ಮಂತಾ ಕೆಳಗಿನ ಜಾತಿ ಹೆಂಗಸರಿಗೆ ಜೋಗಣಿ ಆಗಿ ಊರ ಸೂಳೇರು ಆಗ್ರಿ ಅಂತಾದೇನು? ಆ ದೇವರು ಅದು ಕಟ್ಟಗಿ ಗೊಂಬಿ ಅದಾ ಪಾಪ. ಎಲ್ಲೆರೆ ಇದು ದೇವರು ಆಡೋ ಮಾತೇನು? ಒಂದು ವ್ಯಾಳೆ ಈ ಚುಂಚೂರು ಮಾಪುರ ತಾಯಿ ದೇವಿಗಿ ಮಾತಾಡಕೆ ಬರ್ತಿತ್ತು ಅಂದ್ರ ಈ ಹಲ್ಕಟ್ ಗಂಡಸರ ಕಚ್ಚಿ ಕಳ್ದು ಕುಂಡಿಮ್ಯಾಲ ಒದ್ದು ಹೇಳಿತ್ತು. ಇದೆಲ್ಲಾ ನನ್ನ ಮಾತುಗೋಳು ಅಲ್ಲೋ ಭಾಡ್ಯಾಗೋಳ್ರ... ಇದೆಲ್ಲಾ ನನ್ನ ಹೆಸರಿನ ಮ್ಯಾಲ ನೀವು ಹಾಕಿದ ಸುಳ್ಳು ಮಾತುಗೋಳು ಅಂತ!..." ನಿಂಬಾವ್ವ ತುಳಜಾಗೆ ಬುದ್ಧಿ ಮಾತುಗಳನ್ನು ಹೇಳಿ ಈ ಜೋಗಣೆ ವ್ಯವಸ್ಥೆಯನ್ನು ಕಂಡಿಸಿದ್ದರು. ಅದನ್ನು ಒಪ್ಪಿಕೊಂಡು ಜೀವಿಸುತ್ತಾಳೆ. ಆದರೆ ತನಗೆ ಬಂದ ಗತಿ ಬೇರೆ ಹೆಣ್ಣುಮಕ್ಕಳಿಗೆ ಬರಬಾರದು ಎಂಬ ಆಸೆ ಅವಳದ್ದಾಗಿತ್ತು.

ಹೀಗೆ ಜೋಗತಿ ನಿಂಬಾವ್ವಾಯಿಯ ಸ್ವಂತ ಅನುಭವದ ಈ ಮಾತುಗಳಿಂದ ತುಳಜಾಗೆ ಜೋಗಣಿಯಾಗಬಾರದೆನಿಸಿದರೂ ತಂದೆಯ ಒತ್ತಾಯದಿಂದ ಅವಳು ಜೋಗಣಿಯಾಗಲೇಬೇಕಾಗುತ್ತದೆ... ಜೋಗಣಿಯಾಗಿ ಆರೆಂಟು ತಿಂಗಳಾದ ಮೇಲೆ ಒಮ್ಮೆ ಕಲ್ಬುರ್ಗಿಯ ಸಂತೆಯಲ್ಲಿ ದೇವಿಯ ಮಹಿಮೆಯ ಹಾಡು ಹಾಡುತ್ತಾ ನರ್ತಿಸುತ್ತಿರುತ್ತಾಳೆ.

ಆಗ ಅವಳ ದನಿಗೆ, ಸೌಂದರ್ಯಕ್ಕೆ ಮಾರು ಹೋದ ಹುಸೇನಪ್ಪ, ಅವಳನ್ನು ಮಾತನಾಡಿಸಿ, ಅವಳಲಿದ್ದ ಮೌಢ್ಯತನದ ಬಗ್ಗೆ ಹುಸೇನಪ್ಪ ಹೇಳುವ ಪರಿ ಹೀಗಿದೆ. 'ಯಾರೋ ದೇವರಿಗೆ ಹೇಳಿಕೊಂಡು ಹರಕೆಗೆ ನಿನ್ನ ಬಾಳ್ಯಾಕೆ ಬಲಿ ಕೊಡ್ತಿಯೇಳು? ನೀ ಊಂ ಅಂದ್ರೆ ನಿನಗೆ ಒಪ್ಪಿಗೆ ಇದ್ದರೆ ನನ್ನ ಜೊತೆ ಬೊಂಬಾಯಿಗೆ ಬಂದು ಬಿಡು ಅಲ್ಲಿ ಕೂಲಿ ಕೆಲಸ ಮಾಡಿಕೊಳ್ಳುತ್ತಾ ನಾನ್ ಜೋಡಿ ಇದ್ಬಿಡು. ಈ ನಿನ್ನ ನೆತ್ತಿ ಮ್ಯಾಲಿನಿ ಪರಡಿ, ಕೋರಳಾಗಿನ ಕವಡಿ ಸರ, ಬದಲಾಗಿನ ಚೌಡಿಕೆ ಎಲ್ಲಾ ಶಾಣ ಬಸಪ್ಪನ ಕೇರೆಯಾಗ ಎಸೆದು ಮನಸ್ಸಿನಲ್ಲಿ ಆ ನಿನ್ನ್ ಮಾಪುರ ತಾಯಿಗೆ ಸೆಣ್ರಮಾಡು "ನನಗೆ ಮಾಫ ಮಾಡು ನನ್ನವ್ವಾ... ನಿನ್ ರೀತಿ ರಿವಾಜು ನಾ ಮುರಿದು ಹೋಂಟೇನಿ"[೫] ಅಂತ ಹೇಳಿ, ಇದೆಲ್ಲದರ ಹಂಗು ಹರಿದು ಬಂದು ಬೀಡು, ಬೇರೆ ಹೆಂಗಸರಂತೆ ಬದುಕಲಿಕ್ಕೆ ನಿನಗೊಂದು ಬಾಳು ಕೊಡ್ತಿನಿ? ಎಂದು ಬುದ್ಧಿ ಹೇಳಿ ಹುಸೇನಪ್ಪ ಮದುವೆಯಾದನು.

ಮುಂಬೈನಲ್ಲಿ ಸಂಸಾರಹೂಡಿದ ತುಳಜ ತಮಗೆ ಹುಟ್ಟಿದ ಮಗುವಿನೊಂದಿಗೆ ೩ ವರ್ಷಗಳ ನಂತರ ತನ್ನ ಹುಟ್ಟಿದೂರಿಗೆ ತಂದೆ ತಾಯಿಯರನ್ನು ನೋಡಲು ಬರುತ್ತಾಳೆ. ಅವಳ ಸ್ಥಿತಿಯನ್ನು ನೋಡಿ ದಂಗಾದ ಊರಿನ ಹಿರಿಯರು, ಪೂಜಾರಪ್ಪ ಅವಳಿಗೆ ಬುದ್ಧಿ ಕಲಿಸಬೇಕು ಎಂದು ಪೂಜಾರಪ್ಪ ಮತ್ತು ಗೌಡರು ಸೇರಿ ಆಡುವ ರೀತಿ ಇದು "ನಮಗ ಬೇಕಾದ ಹೊಲಮಾದರ ಪೋರಿಗೋಳಗಿ ದೇವಿ ಹೆಸರಿನ ಮ್ಯಾಲ ಜೋಗಣಿ ಮಾಡಿ ನಾವೂ ಸಾವ್ಕಾರು ಅಕಿನ ಮೈ ಉಣತೀವಿ ಏನಪಾ... ನಮಗ ಸಾಕಾಗೋಟು ಉಂಡಮ್ಯಾಲ, ಆಮ್ಯಾಲ ಬೇಕಾದ್ರ ಬ್ಯಾರೆ ಮಂದಿ ನಮ್ಮ ಎಂಜಲ ಉಣ್ಣಲಿ ಅಂತ ಬಿಟ್ಟುಬಿಡ್ತೀವಿ. ಇದು ಹಿಂಗೇ ನಡ್ಕೋತ ಬಂದಾದ..."[೬]

ಮುಂದೆ "ಜೋಗಣೆರಲ್ಲಾ ಮದಿ ಮಾಡ್ಕೊಂಡು ಪತಿವರತೇರಾಗಲಕತ್ತರ ಮುಂದ ಯಾವ ಹೆಣ್ಣನೂ ಜೋಗಣಿ ಆಗಲಕ್ಕೆ ತಯಾರಾಗಂಗಿಲ್ಲಂತೀನೀ... ಈಗೇ ನೋಡಪ್ಪ... ನಾವು ಜೋರಾಜಬರಿಲಿಂದ ಅವುಕ್ಕ ದೇವಿಸೇವಾಕ್ಕ ನಿಂದರಸಲಕತ್ತೀವಿ... ಹಿಂಗಾದ್ರ ಹ್ಯಾಂಗ... ದೇವಿ ಅಂಜಕಿನೇ ಇಲ್ಲಂದ್ರ ಹ್ಯಾಂಗ ಗೋಡಾ? ಈ ತುಳಜಿ ಹಂಗ ಎಲ್ಲಾ ಪೋರಿಗೋಳು ದೇವರಿಗಿ ವಿರುದ್ಧ ನಿಂತು ನಮ್ಮ ರೀತಿ ರಿವಾಜುಗೋಳಿಗಿ ಮುರ್ಕೋತ ನಡದರ ಊರಾಗ ನಮ್ಮ ಕಿಮ್ಮತ್ತೇನು ಉಳೀತಾದೋ ಯಪ್ಪಾ? ನಂದು ಬಿಡ್ರಿ ಅಕಾಡಿ... ನಿಮ್ಮಂತಾ ಗೋಡ, ಕುಲಕಣ್ಣಿ, ಸಾವ್ಕಾರಗೋಳ ಮಾತಿಗಿನೂ ಕಾಸಿನ ಕಿಮ್ಮತ್ತ ಉಳೆಂಗಿಲ್ಲ... ಮತ್ತ ನಿಮ್ಮ ಮಗ್ಗಲಕ್ಕ ಅವರೋ ಹರ್ಯಾದ ಹೆಂಗಸರೂ ಸಿಗಂಗಿಲ್ಲ ನೋಡು ಮುಂದ. ದುಂಡುಮೈಯಿಂದ ಮಜಬೂತಾದ ಹೆಂಗಸರು ಅಂದ್ರ ಹೆಚ್ಚಾಗಿ ಈ ಕೆಳಗಿನ ಜಾತಿಯವರೇ. ಇವರೇ ಸಿಗಲಿಲ್ಲಂದ್ರ ಮತ್ತ ನೀವೆಲ್ಲಾರೂ ಮುಂದ ಕಲ್ಬುರ್ಗಿಯಂತಾ ಶಾರಪ್ಪಣಕ್ಕೇ ಹೋಗ್ಬೇಕಾಗ್ತದ ನೋಡ್ರಿ ಪಾತರದವರ ಮನಿ ಹುಡುಕ್ಕೊಂಡು..."[೭] ಎಂದು ಈ ರೀತಿ ಮಾತನಾಡಿಕೊಂಡು ಅವಳ ತಂದೆಯನ್ನು ಕರೆದು ಛೀಮಾರಿ ಹಾಕುತ್ತಾರೆ. ಪಂಚರೆಲ್ಲ ಸೇರಿ ಪಂಚಾಯ್ತಿ ಸಭೆ ಸೇರುತ್ತಾರೆ. ಸಭೆ ಇದ್ದ ದಿನ ಅವಳ ತಂದೆ–ತಾಯಿ ಮನೆಗೆ ಯಾರೋ ಬೆಂಕಿ ಹಚ್ಚಿ ಮನೆ ಸುಡುತ್ತಾರೆ.

ಇದರಿಂದ ತುಳಜ ಅಭಿಮಾನ ಕೆರಳುತ್ತದೆ. ಗಂಡನೊಂದಿಗೆ ಮುಂಬೈಯಲ್ಲಿ ಸಂಸಾರ ಮಾಡಿ ಬಂದಿವಳಿಗೆ ಧೈರ್ಯದ ಕೊರತೆ ಇರುವುದಿಲ್ಲ. ಮೊದಲಿನಂತೆ ಅಂಜುಬುರಕಿ ತುಳಜಾ ಆಗಿ ಉಳಿದಿರಲಿಲ್ಲ. ಪಂಚಾಯ್ತಿಲ್ಲಿ ಸೇರಿದ ಹಿರಿಯರೆಲ್ಲ "ತುಳಜಾನಂಗೇ ಎಲ್ಲಾ ಜೋಗಣೇರು ಅಕಿನ ಹಾದಿ ತುಳಿದಳೆಂದ್ರೆ ನಾಕೆಂಟೊರ್ಸಿನ್ಯಾಗ ಈ ಜೋಗಣಿ ಬಿಡಾ ರಿವಾಜೇ ಮುಗ್ಗಿ ಹೋಗ್ತಾದ" ಎಂಬ ಆತಂಕದಿಂದ ತೀರ್ಮಾನ ತೆಗೆದುಕೊಂಡು, ಅವಳಿಗೆ ಶಿಕ್ಷೆ ಕೊಡುತ್ತಾರೆ. ಆಗ ಸಿಡಿದೇಳುವ ತುಳಜಾ "ನೋಡು ಪೂಜಾರೆಪ್ಪ ಮುತ್ತ್ಯಾ.... ನಿಂದು ಮತ್ತ ನೀ ಮಾಡಾ ಜೋಗಣೇರ ಧರ್ಮಾಕರ್ಮಾ ಯಾವಾದೂ ನನಗ ತಿಳೆಂಗಿಲ್ಲೆಪ್ಪ... ಬ್ಯಾಡ ಬ್ಯಾಡಂತ ಕೈ ಜೋಡ್ಸಿ ಕಾಲಿಗೆ ಬಿದ್ದಿದ್ದ ನಾನು. ನಿನ್ನ ಮುಂದೆ ನಲೆಕ್ಕ ಬಿದ್ದು ಬ್ಯಾಡೋ ಮುತ್ತ್ಯಾ ಅಂತ ಹೊಳ್ಳಾಡದರನೂ ನನಗ ಜಬರದಸ್ತಿಲಿಂದ ಎಳ್ಕೊಂಡೊಯ್ದು ಜೋಗಣಿ ಮಾಡಿ ಹಲ್ಕಟ್ ಧಂಧೆಗೆ ಹಾಕ್ದಂವಾ ನೀನೇ. ಗುಡ್ಯಾಗಿನ ಆ ದೇವತಿ ಏನು ಹೇಳ್ತಾದೋ ಬಿಡ್ತಾದೋ, ಅದರ ನೀ ಮಾತರ ಅಕಿ ಹೇಳಕಿ ಮಾಡ್ತಿ ನೋಡು. ನಿನ್ನ ಮೈಯಾಗ ಆ ದೇವಿ ಬರ್ತಾಳೋ ಇಲ್ಲೋ, ಅಕಿ ಏನು ಹೇಳ್ತಾಳೋ ನೀ ಏನು ಹೇಳ್ತೋ ಒಂದು ನಮಗ ಗೊತ್ತಾಂಗಂಗಿಲ್ಲ. ಗುಡಿ ಕಾರುಬಾರೆಲ್ಲಾ ನಿನ್ನೊಬ್ಬನ ಕೈಯಾಗೇ ಅದಾ ಅಲ್ಲ. ಕೋಳಿ ಕುರೀಗಿ ತಂದು ದೇವರ ಮುಂದ ಬಲಿ ಕೊಟ್ಟಂಗ ನಮ್ಮಂತಾ ಹಸಿಬಿಸಿ ಹರ್‍ಯಾದ ಪೋರಿಗೋಳ ಶೀಲಕ್ಕನೂ ಬಲಿಕುಡ್ತಿ. ಆ ಕುರಿಕೋಳಿ ಗೋಳೇನೋ ನೀವು ಹಾಕೋ ಕೊಡಲಿಯೇಟಿಗಿ ಒಂದೇ ಸರ್ತಿ ಕುಗತಿ ಕತ್ತರಸ್ಕೊಂಡು ಸತ್ತುಬೀಳ್ತಾವ! ಅದರ ನಮ್ಮ ಬಾಳ್ಯಾ ಹಾಂಗಲ್ಲ. ನಮಗ ಈ ಹಲ್ಕಟ್ ಧಂಧಾಕ್ಕೆ ಹಚ್ಚಿ ದಿನಾ ಈಟೀಟು ನೆಳ್ಳೀ ನೆಳ್ಳೀ ಸಾಯಂಗ ಮಾಡಿ ಚಿತ್ರರಹಿಂಸಿ ಕುಡ್ತೀರಿ. ಒಮ್ಮೇ ನಮ್ಮೂ ಕುತಗಿ ಕತ್ತರಿಸಿಬಿಟರ ಒಂದ ರೀತಿಲಿಂದ ಛಲೋ ಆಗ್ತದ.... ಮುತ್ತ್ಯಾ.... ಖರೆ ಹೇಳು ನೀನು... ಆ ಮಾಪುರತಾಯಿ ನಿನ್ನ ಮೈಯಾಗ ಬಂದು ನಮ್ಮ ಕೇರ್‍ಯಾಗಿನ ಹರೇದ, ಚೆಲುವಿನ ಪೋರಿಗೋಳಿಗಿ ಸೂಳೇರು ಆಗಲಿ ಅಂತ ಹೇಳ್ತಾಳೇನು? ನೀ ಖರೇ ಅಕಿನ ಭಕ್ತ ಇದ್ದೆಂದ್ರ ಆ ದೇವಿಮ್ಯಾಲ ಅಣಿ ಮಾಡಿ ಹೇಳು" ಎಂದಳು. ಮತ್ತೆ ಮುಂದುವರೆದು ತುಳಜಾ ಸಿಟ್ಟಿನಿಂದ ಜೋಗಣಿಯರಿಗೆ ಆದ ಅನ್ಯಾಯವನ್ನು ಮತ್ತು ಅವರು ಇಗ ಇರೋ ಸ್ಥಿತಿಗಳನ್ನು ವಿವರಿಸಿದಳು.

"ನೀನು ಮಾಡಿದ ಜೋಗಣೆಯರ ಹಣೆ ಬರಹ ಏನಾಗಿದೆ ಎಂಬುದು ನಿನಗೆ ಗೊತ್ತಿದೆಯಾ ಪೂಜಾರಿ, ಆ ಜೋಗಣಿ ಮಲ್ಲಕವನ ಮೈಯೆಲ್ಲಾ ಉಣ್ಣು ಬಿದ್ದು, ದಿನಾ ಬೆಳಗಾದರೆ ನಿನ್ನ ಮೇಲೆ ಇಡೀ ಶಾಪ ಹಾಕಿ ಬೈಕೊಂಡು ಆಳ್ತಾಳೆ, ಆ ಜೋಗಣೆ ಗೊರವ್ವವ್ವ ಮುದುಕಿಯಾಗಿ ಲಕ್ವ ಹೊಡೆದು ಬಿದ್ಯಾಳೆ. ಆಕೀನ ಯಾರು ನೊಡ್ಕೊಳೋರಿಲ್ಲ ಆಕಿಗೂ ಗಂಡ ಮಕ್ಕಳು ಅಂತಿದ್ರೆ ಆಕೆ ಗತಿ ಹಿಂಗಾಗುತ್ತಿತ್ತೇನೂ? ನಮ್ಮೂರ ಬೂದೇವ್ವಂತೂ ಊರ ಗಂಡಸರೆಲ್ಲಾ ಆಕೀನ ಹಾಸಿಗೆಯಾಗಿ ಬಿಟ್ಟು ಹೋದ ಬ್ಯಾನಿನಯಲ್ಲ ಮೈಗೆ ಹತ್ತಿ ಯಾವ ಡಾಕ್ಟರ್‍ರೂ ಆಕಿನ ಇಲಾಜ (ಉಷಾರು) ಮಾಡ್ಲಿಕ್ಕೆ ಮುಂದೆ ಬಂದಿಲ್ಲ ಎಂಬುದು ನಿನಗೆ ಗೊತ್ತಿಲ್ಲ? ಈ ಎಲ್ಲಾ ಜೋಗಣೆಯರ ಹಣೆ ಬರಹದಾಗ ನೋಡು ಮುದಿ ಜೋಗಣೆಯರೆಲ್ಲ ಈ ಕಡೆ ಗಿರಾಕಿಗಳಲ್ಲದೆ ಆ ಕಡೆ ಭಿಕ್ಷೆ ಬೇಡಿದರೆ ಇಟ್ಟು ಅಕ್ಕಿನೂ

ಸಿಗಲಾರದೆ ಉಪವಾಸ, ವನವಾಸ ಸಾಯಲಿಕ್ಕೆ ಅತ್ಯಾರ, ಕೇಳು ಆ ಜೋಗಣೆಯರಿಗೆ ಅವರ ಕಷ್ಟ ಏನಾಗಿದೆ ಎಂಬುದು ತಿಳಿಯುತ್ತದೆ"[೧೦] ಅಂದಳು.

ಹೀಗೆ ಸಿಟ್ಟಿನಿಂದ ಒದರಾಡಿದ ತುಳಾಜಾಗೆ ಆ ಪಂಚಾಯ್ತಿಯವರು ರೂಪಾಯಿ ದಂಡಕಟ್ಟಿ ತಪ್ಪಾಯ್ತಿ ಅಂತ ಪೂಜಾರಿ ಕಾಲಿಗೆ ಬಿದ್ದು ಮಾಫ ಮಾಡ್ಕೋ ಮತ್ತೆ ನಿನ್ನ ಕೊರಳಾಗಿರುವ ತಾಳಿ ಕಿತ್ತು ಮಾಪೂರ ತಾಯಿಯ ಬಾವಿಗೆ ಹಾಕಿ ಮತ್ತೆ ಹಿಂದಿನಂಗೆ ಜೋಗಣೆ ಆಗಬೇಕು. ಜೊತೆಗೆ ಮನೆಯಲ್ಲಿ ಮಗಳನ್ನಿಟ್ಟುಕೊಂಡಿದ್ದಕ್ಕೆ ಪರಪ್ಪನು ನೂರು ರೂಪಾಯಿ ದಂಡ ಕಟ್ಟಿ ಮಾಫಿ ಕೇಳ್ಬೇಕು ಇಲ್ಲ ಅಂದ್ರೆ ಊರಬಿಟ್ಟು ಹೊಡಿಸ್ತೀವಿ ಎಂದಾಗ ಸಿಟ್ಟಿಗೆದ್ದ ತುಳಜಾ

"ದೈವದವರೇ... ನೀವೂ ಒಂದೀಟು ನನ್ನ ಫೈಸಲಾನೂ ಕೇಳಿ ಹೋಗ್ರೀ... ನೀವು ಕೊಟ್ಟ ತೀರ್ಮಾನ ನಮಗ ಒಪ್ಪಗಿಯಿಲ್ಲ. ಏಕತರಫಾ ನ್ಯಾಯಾ ನಿಮ್ದು. ನಾವೇನೂ ತಪ್ಪು ದಂಡಾ ಕುಡಂಗಿಲ್ಲ. ಹಾಂಗ ಕುಡ್ಲಕ್ಕ ನಾವೇನೂ ತಪ್ಪು ಕೆಲಸಾ ಮಾಡಿಲ್ಲ! ನೀವು ನಮ್ಮಪ್ಪೇಗೇನು ಕುಲದಲಿಂದ, ಕೇರಿಲಿಂದ ಹೊರಗಿಡ್ತೀರಿ? ನಾನೇ ನಮ್ಮಪ್ಪಾ ಅವ್ವಗ ಈ ಊರುಕೇರಿಲಿಂದ ದೂರ ಮಾಡಿ ನನ್ ಜೋಡಿ ಕರ್ಕೊಂಡು ಹೋಗ್ತೀನಿ... ನಿಮಗಾ ನಿಮ್ಮ ನ್ಯಾಯಕ್ಕಾ ದೊಡ್ಡ ನಮಸಗಾರ್ರೀಯಪ್ಪಾ..."[೧೧] ಅಂದವಳೇ ಅವ್ವ ಅಪ್ಪನನ್ನೂ ಕರೆದುಕೊಂಡು ಊರಿನಿಂದ ಹೊರ ನಡೆದಳು.

ಹೀಗೆ ತುಳಜಾ ಇಡೀ ಈ ಸಂಪ್ರದಾಯದ ವಿರೋಧಿ ನೆಲೆಯಾಗಿ ಇಡೀ ವ್ಯವಸ್ಥೆಯನ್ನು ವಿಮರ್ಶೆ ಮಾಡುವ ನೆಲಗಟ್ಟಿನಲ್ಲಿ ಕಂಡು ಬರುತ್ತಾಳೆ. ಈ ಸಂಪ್ರದಾಯದ ಸಾಧಕ ಬಾಧಕಗಳನ್ನು ತಿಳಿಸುತ್ತಾ, ಉಳಿದ ಜೋಗತಿಯರಿಗೆ ಈ ವ್ಯವಸ್ಥೆಯಿಂದ ಹೊರಬರಬೇಕೆಂದು ಅದರ ಕಷ್ಟ ಅನಿಷ್ಟಗಳನ್ನು ತಿಳಿಸುತ್ತಾ ಧಿಕ್ಕರಿಸುತ್ತಾಳೆ. ಹಾಗೂ ಗೀತಾ ಅವರ ಮತ್ತೊಂದು ಕಾದಂಬರಿಯಲ್ಲಿಯೂ ಜೋಗಣೆಯರ ಬಗ್ಗೆ ಮತ್ತು ಅವರ ಹೀನಾ ಸ್ಥಿತಿಯ ಬಗ್ಗೆ ವಿವರಿಸುತ್ತಾರೆ. ಹಾಗೂ ಈ ಕಾದಂಬರಿಯಲ್ಲಿ ಬರುವ ತುಳಜ ಆಗೆ 'ಮಾಪುರ ತಾಯಿಯ ಮಕ್ಕಳು' ಕಾದಂಬರಿಯಲ್ಲಿಯೂ ಜೋಗಣೆಯಾದ ಸಿಂಗಾರಿಯು ಬಗ್ಗೆ ಹೇಳುವಾಗ ಇವರಿಬ್ಬರ ಪಾತ್ರ ಭಿನ್ನವಾಗಿ ಕಂಡರು ಕೊನೆಗೆ ಸಿಂಗಾರಿಯು ಸಹ ತನ್ನ ಅದಾ ಸ್ಥಿತಿ ಬೇರೆ ಹೆಣ್ಣು ಮಕ್ಕಳಿಗೆ ಬರಬಾರದೆಂದು ಈ ವ್ಯವಸ್ಥೆಯಲ್ಲಿ ಸಿಕ್ಕ ಹೆಣ್ಣು ಮಕ್ಕಳನ್ನು ಪಾರು ಮಾಡುತ್ತಾಳೆ.

ಹೀಗೆ ಲೇಖಕಿ ಈ ಅನಿಷ್ಟ ಪದ್ಧತಿಯ ಬಗ್ಗೆ ತುಳಜ ಸಿಂಗಾರಿ ಇತ್ಯಾದಿ ಪಾತ್ರಗಳನ್ನು ತರುವುದುರ ಮೂಲಕ ಸಮಸ್ಯೆಯನ್ನು ಒಡ್ಡಿ ಪರಿಹಾರವನ್ನು ಆ ಪಾತ್ರಗಳೆ ನಿರ್ವಹಿಸುವುದನ್ನು ಕಾಣುತ್ತವೆ.

ಈ ಅನಿಷ್ಟ ಪದ್ಧತಿ ಇನ್ನೂ ಉತ್ತರ ಕರ್ನಾಟಕದ ಕಡೆ ನಡೆಯುತ್ತಿರುವುದು ಕಂಡು ಬರುತ್ತದೆ. ಇಷ್ಟವಿಲ್ಲದಿದ್ದರೂ ತಮ್ಮ ಮಕ್ಕಳನ್ನು ಹೆತ್ತವರೆ ಹರಕೆಯ ಹೆಸರಿನಲ್ಲಿ

ಬಲಿಪಶುಗಳಾಗಿ ಮಾಡುತ್ತಿರುವುದು ಕಂಡು ಬರುತ್ತಿದೆ. ಇದು ಸಮಾಜದ ವಿರೋಧಿ ನೆಲೆಯಲ್ಲಿ ನಿಂತಿದೆ. ಇಂದು ಪ್ರಸ್ತುತದಲ್ಲಿ 'ದೇವದಾಸಿ ಪದ್ಧತಿ', 'ಬಸವಿ' ಬಿಡುವುದು ಮತ್ತು ಮುತ್ತು ಕಟ್ಟೋದು, ಗೆಜ್ಜೆ ಕಟ್ಟೋದು ಈ ರೀತಿಯ ಪದ್ಧತಿಗಳು ಸಹ ಸ್ವಲ್ಪ ಮಟ್ಟಿಗೆ ಜೋಗಣಿ ಪದ್ಧತಿಯನ್ನೆ ಹೊಲುತ್ತವೆ. ಈ ಆಚರಣೆಗಳು ಇಂದಿಗೂ ಕೂಡ ನಮ್ಮ ಜನರು ಪಾಲಿಸುತ್ತಾ ಬಂದಿರುವುದು ಸಮಾಜದ ಅಸಮಾತೋಲನಕ್ಕೆ ಕಾರಣವಾಗಿದೆ.

ಸಮಾಜದ ಅನಿಷ್ಠ ಪದ್ಧತಿಯಲ್ಲಿ ಬೆತ್ತಲೆ ಸೇವೆಯು ಒಂದು. ಇದು ಸಮಾಜದ ಒಪ್ಪಿತ ಮೌಲ್ಯ ಅಲ್ಲದಿದ್ದರೂ ಇಂದಿಗೂ ಸಹ ಚಾಲ್ತಿಯಲ್ಲಿರುವ ಪದ್ಧತಿಯಾಗಿದೆ. ಬೆತ್ತಲೆ ಸೇವೆಯೆಂದರೆ ಬೆತ್ತಲೆ ಮೈಗೆ ಬೇವಿನ್ಸೊಪ್ಪಿಗೆ, ಗಂಧಕದೊಟ್ಟಿಗೆ ಸುತ್ತಿಕೊಂಡು ಹರಕೆ ಹೊತ್ತವರು ದೇವಸ್ಥಾನದ ಸುತ್ತ ಕುಣಿಯುತ್ತ ಬರುತ್ತಿದ್ದರು. ಇದೊಂದು ದೇವಿಯು ಹರಕೆ. ಈ ಬೆತ್ತಲೆ ಸೇವೆಗೆ ಲಿಂಗಭೇದವಿಲ್ಲ, ಹೆಂಗಸರು ಗಂಡಸರೆನ್ನದೆ, ವಯಸ್ಸಿನ ಭೇದವಿಲ್ಲದೆ ಬರಿ ಬೆತ್ತಲೆಯಾಗಿ ನೆತ್ತಿಯ ಮೇಲೆ ಉರಿಯುವ ಸೋಡರಾತಿಯ ತಟ್ಟೆ ಹೊತ್ತು ಬಾಯಲ್ಲಿ ಬೇವಿನ ಎಲೆ ಕಚ್ಚಿಕೊಂಡು ಹರಕೆ ಹೊತ್ತವರು ಬರಿಗಾಲಿನಿಂದ ದೇವಿಯ ಗುಡಿ ಸುತ್ತೋದು ಈ ಹರಕೆಯ ವಿಧಾನ. ಇಂತಹ ಪದ್ಧತಿಗಳು ಸಮಾಜದ ವಿರೋಧಿ ಪದ್ಧತಿಗಳೆಂದೇ ಹೇಳಬಹುದು.

ಈ ಅನಿಷ್ಟ ಪದ್ಧತಿಗಳು ಪ್ರಾದೇಶಿಕ ನೆಲೆಯಲ್ಲಿ ಕಂಡು ಬರುತ್ತಿದೆ. ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ನಡೆಯುವ ಅನಿಷ್ಟ ಪದ್ಧತಿಯನ್ನು ಸರ್ಕಾರ ನಿಷೇಧ ಗೊಳಿಸಿದ್ದರು, ಇಂದಿಗೂ ಕದ್ದುಮುಚ್ಚಿ ನಡೆಯುತ್ತಿರುವುದು ಶೋಚನೀಯವಾದ ಸಂಗತಿಯಾಗಿದೆ. ಈ ಜೋಗಣೆಯರಿಗೆ ಈ ಪದ್ಧತಿಯಿಂದ ಹೊರಬಂದು ನ್ಯಾಯಯುತವಾಗಿ ಜೀವಿಸಲು ಸೂಕ್ತ ಸವಲತ್ತುಗಳನ್ನು ನೀಡಿದರೂ ಈ ಪದ್ಧತಿಯ ಕಪಿಮುಷ್ಠಿಯಿಂದ ಹೊರಬರಲು ಸಾಧ್ಯವಾಗಿಲ್ಲ.

ಕಾದಂಬರಿಯಲ್ಲಿ ಬರುವ ಹಬ್ಬ ಹರಿದಿನಗಳು ಸಾಮರಸ್ಯದ ಸಮಾಗಮವಾಗಿದೆ. ಇಲ್ಲಿ ವಿವಿಧ ಜಾತಿಯ ವಿವಿಧ ವರ್ಗದ ಜನರು ಇದ್ದರು ಕೂಡ ಧಾರ್ಮಿಕ ಚಟುವಟಿಕೆಗಳಲ್ಲಿ ಸಹಭಾಗಿತ್ವ ಇತ್ತು. ಈ ಸಹಭಾಗಿತ್ವದಡಿಯಲ್ಲಿ ಕೆಲವೊಂದು ವೈರುಧ್ಯ ಅಂಶಗಳನ್ನು ಕೂಡ ಕಾಣಬಹುದು. ಉದಾಹರಣೆಗೆ ಮಾಪುರ ತಾಯಿಯ ಜಾತ್ರೆ, ಈ ಜಾತ್ರೆಯಲ್ಲಿ ಎಲ್ಲ ವರ್ಗದ ಜನರೂ ಸೇರಿ ಜಾತ್ರೆ ಮಾಡುತ್ತಾರೆ. ಆದರೆ ಆಚರಣೆಯಲ್ಲಿ ಭಿನ್ನತೆ ಇದೆ. ಇಲ್ಲಿನ ಬೆತ್ತಲೆ ಪೂಜೆ ಕೇವಲ ಕೆಳವರ್ಗದವರಲ್ಲಿ ಕಂಡು ಬಂದರೆ ಮೇಲ್ವರ್ಗದ ಜನರಲ್ಲಿ ಇರಲಿಲ್ಲ. ವಾಸ್ತವವಾಗಿ 'ಮಾಪುರತಾಯಿ' ದೇವಿಯು ಕೇಳವರ್ಗದವರ ದೇವಿಯಾಗಿದ್ದಳು. ಈ ದೇವತೆಯುನ್ನು ಪೂಜಿಸುವ ಪೂಜಾರಿಯು ಹೊಲೆಯ ಜನಾಂಗಕ್ಕೆ ಸೇರಿದ ಕೆಳವರ್ಗದವನಾಗಿದ್ದನು. ಆದರೆ ದೇವಸ್ಥಾನದ ಮೇಲೆ ಅಧಿಕಾರ ಇದ್ದದ್ದು ಮಾತ್ರ ಮೇಲ್ವರ್ಗದ ಜನಗಳಿಗೆ ಮಾತ್ರ ಇಲ್ಲಿ ಜೋಗಣಿ ಬಿಟ್ಟ ಕೇಳವರ್ಗದ ಮೈ ನೆರೆದ ಹೆಣ್ಣನ್ನು ದೇವರ ಹೆಸರಿನಲ್ಲಿ ಭೋಗಿಸುವ ಹಕ್ಕು ಕೂಡ ಇದ್ದದ್ದು ಮೇಲ್ಜಾತಿಯವರಾದ ಗೌಡ, ಕುಲಕರ್ಣಿ ಮುಂತಾದವರಿಗೆ ಮೀಸಲಿತ್ತು. ಆದರೆ ದೇವಸ್ಥಾನದ ಪ್ರವೇಶದ ವಿಷಯದಲ್ಲಿ ಮಾತ್ರ

ಮುಕ್ತ ಸ್ವಾತಂತ್ರ್ಯವಿತ್ತು.

ಇಲ್ಲಿ ಕೆಳಜಾತಿಯವರು ದೇವಿಗೆ ಮಾಡಿಕೊಳ್ಳುವ ಹರಕೆ-ಕೋರಿಕೆಗಳು ಮೇಲ್ಜಾತಿಯವರಲ್ಲಿ ಇರಲಿಲ್ಲ. ಇವರು ಕೇವಲ ಪೂಜೆ-ನೈವೇದ್ಯಗಳನ್ನು ಮಾತ್ರ ಮಾಡಿಸುತ್ತಿದ್ದರು. ಪ್ರಾಣಿಬಲಿ ಕೊಡುವುದು, ಜೋಗತಿ ಬಿಡುವೆನೆಂದು ಹರಸಿಕೊಳ್ಳುವುದು. ಇವೆಲ್ಲಾ ಕೆಳವರ್ಗದವರ ಕೋರಿಕೆಗಳಾಗಿದ್ದವು. ದೇವಿಗೆ ಬಲಿಕೊಟ್ಟ ಪ್ರಾಣಿಗಳ ಮಾಂಸದ ಅಡುಗೆಯನ್ನು ಮಾಡುವ ವರ್ಗ ಒಂದು ವಿಧವಾದರೆ, ಇನ್ನೊಂದು ಕಡೆ ಸಿಹಿ ಅಡುಗೆ ಮಾಡಿ ದೇವಿಗೆ ನೈವೇದ್ಯ ಇಡುವ ಮತ್ತೊಂದು ವರ್ಗ ಇತ್ತು. ಆದ್ದರಿಂದ ಈ ವರ್ಗಗಳಲ್ಲಿಯೇ ಭಿನ್ನತೆಗಳು ಕಂಡು ಬರುತ್ತವೆ. ಇಲ್ಲಿ ದೇವರಿಗೆ ಇಷ್ಟವಾದ ಅಡುಗೆ ಮಾಡಿ ನೈವೇದ್ಯ ನೀಡುತ್ತಿದ್ದರು. ಕೆಲವು ದೇವರಿಗೆ ಸಿಹಿ ನೈವೇದ್ಯ ನೀಡಿದರೆ, ಮತ್ತೆ ಕೆಲವು ದೇವರಿಗೆ ಮಾಂಸದ ನೈವೇದ್ಯ ಇಡುವುದು ಆಯಾ ವರ್ಗಕ್ಕೆ ಸೀಮಿತವಾಗಿತ್ತು.

ಈ ಹಬ್ಬದಲ್ಲಿ ಮಲ್ಲಪ್ಪ ಜಮಾದಾರನ ಮನೆಯ ಕುಟುಂಬದಲ್ಲಿ ಹಬ್ಬದ ವಾತಾವರಣ. ಇವರು ವಿಶೇಷವಾಗಿ ಈ ಜಾತ್ರೆಯನ್ನು ಆಚರಿಸುತ್ತಿದ್ದರು. ಆಮಾದಾರನ ಮನೆಯವರಿಗೆ ಅವರ ಜಾತಿಯವರು ಸಹಭಾಗಿತ್ವದಿಂದ ಸಹಕರಿಸುತ್ತಿದ್ದರು. ಅಡುಗೆ ಮಾಡುವುದು, ಮನೆ ಕೆಲಸ ಮಾಡುವುದು, ಜಾತ್ರೆಗೆ ಹೊರಡಲು ಸಾಮಾನು ತುಂಬುವುದು, ಇತ್ಯಾದಿ ಕೆಲಸಗಳನ್ನು ಮಾಡುತ್ತಾ ಜಮಾದಾರನ ಕುಟುಂಬಕ್ಕೆ ಸಹಕರಿಸುತ್ತಿದ್ದರು. ಜಾತ್ರೆಯಲ್ಲಿ ಮರಿಕುಯ್ದು, ಪಾಲುಮಾಡಿ ಅಡಿಗೆ ಬೇಯಿಸಿ, ಊಟಮಾಡಿ, ಜಾತ್ರೆಗೆ ಬರದಿದ್ದ ಜನಗಳಿಗೆ ಮನೆಯಲ್ಲಿ ಊಟ ಏರ್ಪಡಿಸುವುದು, ಇವೆಲ್ಲಾ ಸಹಕಾರ ಮನೋಧೋರಣೆಯನ್ನು ಬಿಂಬಿಸುವ ಅಂಶಗಳು.

ಕಾರುಣ್ಣಿಮೆ ಮತ್ತು ಮೋಹರಂ ಹಬ್ಬಗಳು ಸಾಮರಸ್ಯದ ಸಂಕೇತಗಳು. ಕಾರುಣ್ಣಿಮೆಯ ಹಬ್ಬವನ್ನು ಶಿವಳ್ಳಿಯಲ್ಲಿ ಎಲ್ಲಾವರ್ಗದ ಜನರು ಆಚರಿಸುತ್ತಿದ್ದರು. ಈ ಹಬ್ಬದ ವಿಶೇಷವೆಂದರೆ ಎತ್ತುಗಳ ಮೆರವಣಿಗೆ. ಈ ಮೆರವಣಿಗೆಯಲ್ಲಿ ಎಲ್ಲ ವರ್ಗದ ಎತ್ತುಗಳು ಇದರಲ್ಲಿ ಭಾಗಿಯಾಗುವ ಮೂಲಕ ಸಹಬಾಳ್ವೆ ಮತ್ತು ಸಹಕಾರದ ಗುಣಗಳು ಕಂಡರೆ, ಇದರಲ್ಲಿಯೇ ವೈರುಧ್ಯ ಗುಣಗಳು ಇವೆ. ಈ ಮೆರವಣಿಗೆಯಲ್ಲಿ ಗೌಡನ ಎತ್ತುಗಳೇ ಜಯಶಾಲಿಯಾಗಬೇಕೆಂಬುದು ಅವನ ಹಂಬಲ. ಆದರೆ ಮಲ್ಲಪ್ಪನ ಮೊದಲು ಕರಿ ಹಾದಾಗ ಸಾವುಕಾರ ಚೆನ್ನಾಗಿ ಪೊಗರುದಸ್ತಾಗಿದ್ದ ಮಲ್ಲಪ್ಪ ಜಮಾದಾರ ಎತ್ತುಗಳನ್ನು ಖರೀದಿಗೆ ಮುಂದಾಗಿದ್ದನು. ಪ್ರತಿಸಲವೂ ಇವನ ಎತ್ತುಗಳೇ ಜಯಶಾಲಿಯಾಗುತ್ತಿದ್ದವು. ಆದರೆ ಹಿಂದಿನ ವರ್ಷ ಮಲ್ಲಪ್ಪನ ಎತ್ತುಗಳ ಜಯದ ಹಿನ್ನೆಲೆಯಲ್ಲಿ ತುಂಬಾ ಸಿಟ್ಟಾಗಿದ್ದನು.

ಈ ಹಬ್ಬದಲ್ಲಿ ಮೇಲ್ವರ್ಗದ ಮನೆಯಲ್ಲಿ ಸಿಹಿಯಾದ ಅಡುಗೆಯನ್ನು ಮಾಡುವ ಮೂಲಕ ಸಸ್ಯಹಾರ ಕಂಡು ಬಂದರೆ, ಕೆಳವರ್ಗದ ಮನೆಯಲ್ಲಿ ಇದು ತಮ್ಮ ಪರಂಪರೆ ಎಂಬಂತೆ ಸಾಲಮಾಡಿಯಾದರೂ ಸರಿಯೇ ಮಾಂಸಹಾರವನ್ನು ಹಬ್ಬದಿನ ಮಾಡಬೇಕು

ಎಂಬುದು ಇವರ ರೂಢಿಯಾಗಿತ್ತು. ಅತಿ ಕೆಳಸ್ತರದ ಸಮುದಾಯವರು ಕೂಡ ಈ ಹಬ್ಬವನ್ನು ಕಡ್ಡಾಯವಾಗಿ ಆಚರಿಸುತ್ತಿದ್ದರು.

ಕಾರುಣ್ಣುಮೆ ಮತ್ತು ಮೋಹರಂ ಹಬ್ಬದ ಆಚರಣೆ ನಡೆಯುತ್ತಿತ್ತು. ಈ ಮೋಹರಂ ಮುಸ್ಲಿಂ ಬಾಂಧವರ ಹಬ್ಬ, ಆದರೂ ಈ ಹಬ್ಬದಲ್ಲಿ ಕೇವಲ ಮುಸ್ಲಿಂರು ಮಾತ್ರವಲ್ಲದೆ ಶಿವಳ್ಳಿ ಮತ್ತು ಕಲ್ಬುರ್ಗಿಯ ಹಿಂದುಗಳು ಸೇರಿ ಈ ಹಬ್ಬದ ಆಚರಣೆ ಮಾಡುವುದು ವಿಶೇಷವಾಗಿತ್ತು. ಇವರಲ್ಲಿ ಧರ್ಮ ತಾರತಮ್ಯ ಇರಲಿಲ್ಲ, ಬದಲಿಗೆ ನಾವೆಲ್ಲ ಒಂದೇ ಎಂಬ ಸಾಮರಸ್ಯವಿತ್ತು. ಕೆಲವು ಕಡೆ ಹಿಂದು–ಮುಸ್ಲಿಂಗಳಿಗೆ ಮನಸ್ತಾಪ ಬಂದಾಗ ಹೊಡೆದಾಟ ಕಿತ್ತಾಟಗಳಾಗಿವೆ. ಇವತ್ತಿಗೂ ಹಿಂದುಗಳು ಆಚರಿಸುವ ಹಬ್ಬವನ್ನು ಮುಸ್ಲಿಂ ಆಚರಿಸುವುದಿಲ್ಲ, ಮುಸ್ಲಿಂ ಆಚರಿಸುವ ಹಬ್ಬಗಳನ್ನು ಹಿಂದುಗಳು ಆಚರಿಸುವುದಿಲ್ಲ. ಆದರೆ ಆ ಪ್ರಾದೇಶಿಕ ಭಾಗದಲ್ಲಿ ಹಿಂದು–ಮುಸ್ಲಿಂ ಇಬ್ಬರೂ ಸಹೋದರರಂತೆ ಒಟ್ಟಿಗೆ ಸೇರಿ ಈ ಹಬ್ಬ ಆಚರಿಸುತ್ತಿದ್ದರು. ಇವರ ಆಚರಣೆಯಲ್ಲಿ ಭಿನ್ನತೆಯನ್ನು ಗುರುತಿಸುತ್ತೇವೆ. ಉದಾಹರಣೆಗೆ ಮುಸ್ಲಿಂ ತೊಡುವ ಬಟ್ಟೆಗಳನ್ನು ಹಿಂದುಗಳ ತೋಡುತ್ತಿರಲಿಲ್ಲ. ಮಸೀದಿಗೆ ಹೋಗುತ್ತಿರಲಿಲ್ಲ. ಹೀಗೆ ವೇಷವನ್ನು ತೊಟ್ಟು ಕುಣಿಯುವುದು ಈ ಹಬ್ಬದ ವಿಶೇಷವಾಗಿತ್ತು. ಕೆಳಸ್ತರದ ಹೊಲೆಯರು ಹಲಗೆ ಬಾಜಿನಗಳಿಂದ ಹೆಜ್ಜೆ ಹಾಕುತ್ತಾ ಸಂಭ್ರಮಿಸುತ್ತಿದ್ದರು.

ಈ ಹಬ್ಬದಲ್ಲಿ ಮುಸ್ಲಿಂ ದೇವರು ಒಂದು ಒಳಿತು–ಕೆಡಕುಗಳ ಬಗ್ಗೆ ಭವಿಷ್ಯ ನುಡಿಯುವುದು ವಾಡಿಕೆ, ಮಲ್ಲಪ್ಪ ಜಮಾದಾರ ಹಿಂದುಗಳಾದರೂ, ಮುಸ್ಲಿಂ ಖತಾಬ್ ದೇವರು ಬಂದು ಜಮಾದಾರನ ಕುಟುಂಬ ಭವಿಷ್ಯದಲ್ಲಿ ವಿನಾಶವಾಗುವುದು ಎಂಬ ನುಡಿಯನ್ನು ನುಡಿಯುತ್ತದೆ. ಹಿಂದುಗಳಿಗೆ ಇಲ್ಲಿ ಮುಸ್ಲಿಂ ದೇವರು ಮೈ ಮೇಲೆ ಒಂದು ಭವಿಷ್ಯ ನುಡಿಯುವುದು ವಿಶೇಷವೆನಿಸಿದೆ, ಇದು ಹಿಂದಿನಿಂದಲೂ ಬಂದ ಸಂಪ್ರದಾಯವಾಗಿತ್ತು.

ಕಲ್ಬುರ್ಗಿ ಈ ಭಾಗದ ನಗರ ಭಾಗ, ಈ ಭಾಗದಲ್ಲಿ ವಿವಿಧ ಹಳ್ಳಿಗಳಿಂದ ಬಂದ ಜನರೇ ಆಗಿದ್ದರು. ವಿವಿಧ ವರ್ಗದ, ವಿವಿಧ ಜಾತಿಯ, ವಿವಿಧ ಧರ್ಮದ, ವಿವಿಧ, ಜನಾಂಗದ ಜನರಿದ್ದರೂ. ಇವರಲ್ಲಿ ಸಾಮರಸ್ಯ ಇತ್ತು. ಇವರೆಲ್ಲರೂ ಶರಣ ಬಸಪ್ಪನ ತೇರಿನ ಸಂದರ್ಭದಲ್ಲಿ ಒಟ್ಟಿಗೆ ಬರೆತು ಈ ಆಚರಣೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಹಾಗಾಗಿ ವೈವಿಧ್ಯತೆಯಲ್ಲಿ ಏಕತೆಯನ್ನು ಸಾರುವ ಮನೋಭಾವವನ್ನು ಲೇಖಕರು ಈ ತೇರಿನ ಹಿನ್ನಲೆಯಲ್ಲಿ ಚಿತ್ರಿಸಿದ್ದಾರೆ.

ಮನುಷ್ಯ ಸಂಬಂಧಗಳಾದ ಹೆಣ್ಣು–ಗಂಡು ಇವರ ನಡುವೆ ಹೊಂದಾಣಿಕೆ ಮತ್ತು ವಿರೋಧಿ ನೆಲೆಗಳನ್ನು ಕಾದಂಬರಿಯು ಉದ್ದಕ್ಕೂ ಕಾಣಬಹುದು. ಈ ಅಂಶ ಮೇಲ್ವರ್ಗದಲ್ಲಿಯೇ ಆಗಿರಬಹುದು, ಅಥವಾ ಕೆಳವರ್ಗದವರಲ್ಲಿಯೇ ಆಗಲಿ ಕಂಡು ಬರುವ ಅಂಶವಾಗಿದೆ. ಕಾದಂಬರಿಯ ಕೇಂದ್ರ ಬಿಂದು ಶಿವಳ್ಳಿಯಲ್ಲಿ ವಿವಿಧ ವರ್ಗದವರು, ವಿವಿಧ ಜಾತಿಯವರು ಇದ್ದರೂ ಇವರಲ್ಲಿ ಸ್ನೇಹ ಮನೋಭಾವವಿತ್ತು. ಕಷ್ಟ–ಸುಖಗಳಲ್ಲಿ,

ಶುಭ ಸಮಾರಂಭದಲಿಯೇ ಆಗಲಿ ನೆರವನ್ನು ಕೊಟ್ಟು ಮಾನವೀಯತೆಯನ್ನು ಮೈಗೂಡಿಸಿಕೊಂಡಿದ್ದರು. ವಿವಿಧ ಜನಾಂಗದ ಸಕ್ಕುಬಾಯಿ, ಕಮಲ, ಮಂಜುಳ ಇವರು ಬೇರೆ ಬೇರೆ ಜನಾಂಗದವರಾಗಿದ್ದರೂ, ಮಲ್ಲಪ್ಪನ ಮಗಳಾದ ಕಾಶಮ್ಮನ ಜೊತೆ ಸ್ನೇಹದ ಭಾವನೆ ಹೊಂದಿರುವುದು ಇದಕ್ಕೆ ನಿದರ್ಶನ. 'ಫತಾರು' ಎಂಬ ಮುಸ್ಲಿಂ ಹುಡುಗ ತಂದೆ-ತಾಯಿ ಕಳೆಕೊಂಡು ಜಮಾದಾರನ ಕುಟುಂಬಕ್ಕೆ ಒಬ್ಬನಂತೆ ಇದ್ದನು. ಮಲ್ಲಪ್ಪನು ತನ್ನ ಸ್ವಂತ ಮಗನಂತೆ ನೋಡಿಕೊಳ್ಳುತ್ತಿದ್ದನು. ಆದರೆ ಇವನ ವಿವಾಹವನ್ನು ಅದೇ ಮುಸ್ಲಿಂ ಜನಾಂಗದ ಹೆಣ್ಣಿನೊಂದಿಗೆ ಮದುವೆ ಮಾಡುವುದು ಸಾಮರಸ್ಯದಲ್ಲಿ ವೈರುಧ್ಯದ ಎಳೆಯನ್ನು ಗುರುತಿಸಬಹುದು.

ಜಮಾದಾರ ಮಲ್ಲಪ್ಪ ಮಾನವೀಯ ಮೌಲ್ಯಗಳ ಅಗರ, ಈತನಲ್ಲಿ ಸ್ನೇಹ ಪರತೆ, ದಾನಗುಣ, ಸಹಕಾರ ಮನೋಭಾವ ಮತ್ತು ಸಹಬಾಳ್ವೆ ಇತ್ಯಾದಿಯಾದ ಸದ್ಗುಣಗಳಿದ್ದವು. ಈತ ತನ್ನ ಮನೆಯ ಕೆಲಸದವರನ್ನು ಕುಟುಂಬದ ಸದಸ್ಯರಂತೆ ನೋಡಿಕೊಳ್ಳುತ್ತಿದ್ದನು. ಸಹಪಂಕ್ತಿ ಭೋಜನ ಮಾಡುತ್ತಿದ್ದನು. ಮಲ್ಲಪ್ಪನ ಈ ಗುಣಸ್ವಾಭವ ಮೇಲ್ವರ್ಗದ ಶ್ರೀಮಂತರಲ್ಲಿ ಇರಲಿಲ್ಲ. ಇವರಲ್ಲಿ ಜಾತಿಪ್ರಶ್ನೆ, ವರ್ಗಪ್ರಶ್ನೆ ಮೊದಲಾಗುತ್ತಿತ್ತು ಯಾವುದೇ ವರ್ಗ ಅದರಲ್ಲೂ ಅಸ್ಪೃಶ್ಯ ವರ್ಗದ ಹೊಲೆಯ, ಮಾದಿಗ ಜನಾಂಗದವರಿಗೆ ಸಾವು ಮುಂತಾದ ಕೃತ್ಯಗಳು ನಡೆದಾಗ ಸಹಾಯ ನೀಡಿ ಸಾಂತ್ವನ ಮಾಡುತ್ತಿದ್ದನು.

ಈತನ ವಿಶೇಷ ಪ್ರವೃತ್ತಿ ಎಂದರೆ ಬೇಟೆಯಾಡುವುದು. ಈತನ ಜೊತೆ ನಾಟಿಕಾರ ರಾಮಣ್ಣ, ಯಮನಪ್ಪ, ನಾಯಿಕೊಡಿ ಯಮನಪ್ಪ, ಕುರುಬರ ಮಾಳ್ಯ, ಮೊಸಲರ ಕದೀರ ಇವರನ್ನು ಕರೆದುಕೊಂಡು ಬೆಳದಿಂಗಳ ರಾತ್ರಿಯಲ್ಲಿ ಬಂದೂಕ ಹಿಡಿದು ಅಡವಿಗೆ ಹೋಗುತ್ತಿದ್ದರು. ಮೊಲ, ನರಿ, ಚಿಗರಿ, ಕಾಡುಕೋಳಿಯಂತ ಏನೆಲ್ಲ ಪ್ರಾಣಿಗಳನ್ನು ಬೇಟೆಯಾಡಿ ಬರುತ್ತಿದ್ದರು. ಊರ ಮುಂದಿನ ಹೊಳೆ ಏರಿ ಬಂದಾಗ, ರಾತ್ರಿಯಲ್ಲಾ ದೀವಟಿಕೆ ಹಚ್ಚಿಕೊಂಡು ಹೊಳೆಗೆ ಹೋಗಿ. ಬಲೆ ಹಾಕಿ ಮೀನು ಹಿಡಿದರೆ ಬೆಳಗಾಗುವುದರಲ್ಲಿ ಬಲೆ ತುಂಬಿ ರಾಶಿಗಟ್ಟಲೆ ಮೀನನ್ನು ಹೊತ್ತು ಮನೆಗೆ ಬರುತ್ತಿದ್ದರು.

ಹೀಗೆ ಬೇಟೆಯಾಡಿದ ಪ್ರಾಣಿಗಳನ್ನು ತಂದು ಸಮನಾಗಿ ಪಾಲು ಮಾಡಿ, ಎಲ್ಲರಿಗೂ ಹಂಚುತ್ತಿದ್ದನು. ಬೇಟಿಯು ಜಾಸ್ತಿ ಸಿಕ್ಕಿದರೆ ಹಂಚಿಕೆಯಾಗಿ ಉಳಿದ ಮಾಂಸವನ್ನು ಎಲ್ಲ ಮನೆಯವರಿಗೆ ಹಂಚುವ ಉದಾರ ಮನೋಭಾವ ಹೊಂದಿದ್ದನು. ಈತನ ಹೆಂಡತಿ ಮಲ್ಲವ್ವ ರೊಕ್ಕ ರೂಪಾಯಿಯಲ್ಲಿ ಜಿಪುಣಿಯಾದರು ಉಣಿಸುವ, ತಿನಿಸುವುದರಲ್ಲಿ, ಕಾಳು ಕಡ್ಡಿಗಳ ಧಾನಧರ್ಮದಲ್ಲಿ ಅವಳು ಎಂದು ತನ್ನ ಕೈ ಬಿಗಿಹಿಡಿಯುತ್ತಿರಲಿಲ್ಲ, ಊಟದಲ್ಲಿ ತಮಗೊಂದು, ಆಳಿಗಳಿಗೊಂದು ಭೇದ ಎಣಿಸುವ ಮನೋಭಾವ ಇರಲಿಲ್ಲ, ಆದರೆ ಸಿರಿವಂತ ಹೆಂಗಸರು ಈ ಭೇದಭಾವ ಎಣಿಸುವ ಮನೋಭಾವ ಹೊಂದಿದ್ದರೂ ಇವರು ಹಬ್ಬ ಹರಿದಿನಗಳಲ್ಲಿ ಮನೆಯವರಿಗೆ ಸಕ್ಕರೆ ಹೋಳಿಗೆ ಮಾಡಿ ಆಳು ಮಕ್ಕಳಿಗೆ ಬೆಲ್ಲದ ಹೋಳಿಗೆ ಮಾಡುತ್ತಿದ್ದರು, ತಮಗೆ ಬಿಳಿ ಆರ್ಯ ಭಾನವಾದರೆ, ಆಳುಗಳಿಗೆ ನವಣೆ ಅಕ್ಕಿ

ಭಾನ, ನುಚ್ಚಕ್ಕಿ ಬಾನ ಕೊಡುವ ಮನಸ್ಥಿತಿ ಉಳ್ಳವರಾಗಿದ್ದರು. ಆದರೆ ಮಲ್ಲವ್ವ ಇವರಿಗೆ ವಿರೋಧಿ ಮನೋಸ್ಥಿತಿ ಹೊಂದಿದ್ದು, ತಾವು ಉಂಡದ್ದನ್ನೇ ಅವರಿಗೂ ಬಡಿಸುತ್ತಿದ್ದಳು.

ಜಮಾದಾರ ಮಲ್ಲಪ್ಪನಂತೆ ಅವನ ಮಗ ಕಲ್ಯಾಣಿಯು ಉದಾರ ಮನಸ್ಥಿತಿ ಹೊಂದಿದ್ದನು. ಮಲ್ಲಪ್ಪನ ಸಾಕು ಮಗ ಫತ್ತರನನ್ನು ಸ್ವಂತ ಸಹೋದರನಂತೆ ಎಣಿಸಿದ್ದನು ಇವರು ಬೇರೆ ಬೇರೆ ಜಾತಿ, ಜನಾಂಗ ಧರ್ಮವರಾಗಿದ್ದರೂ ಸಹ ಇವರಲ್ಲಿ ಅನ್ಯೋನ್ಯತೆ ಇತ್ತು. ಕಲ್ಯಾಣಿಯು ಇವನಿಗೆ ೫ ಎಕರೆ, ಜಮೀನು ಖರೀದಿಸಿ ಇವನ ಹೆಸರಿಗೆ ರಿಜಿಸ್ಟರು ಮಾಡಿಸಿದ್ದನು. ಕಲ್ಯಾಣಿ ಜೈಲು ಸೇರಿದ ಮೇಲೆ ಆತನ ಹೆಂಡತಿ ಮಕ್ಕಳಿಗೆ ಆಸರೆಯಾಗಿ ನಿಂತು, ತೋಟ ಮನೆಗಳನ್ನು ನೋಡಿಕೊಂಡು ಹೆಗಲಿಗೆ ನಿಂತನು. ಫತರನ ಹೆಂಡತಿ ನಜಾಮಳು ಸಹ ಒಳ್ಳೆಯ ಗುಣಸ್ವಭಾವ ಉಳ್ಳವಳಾಗಿದ್ದು, ಅನ್ಯೂನತೆಯಿಂದ ಮಲ್ಲಪ್ಪನ ಕುಟುಂಬದಲ್ಲಿ ಬಾಳ್ವೆ ಮಾಡಿಕೊಂಡಿದ್ದಳು. ಆದರೆ ಪ್ರಸ್ತುತದಲ್ಲಿ ಅಣ್ಣ ತಮ್ಮಂದಿರೇ ಆಸ್ತಿಗಾಗಿ ಕಚ್ಚಾಡುವುದನ್ನು ನೋಡುತ್ತೇವೆ. ಇಲ್ಲಿ ಬೇರೆ ಬೇರೆ ಧರ್ಮದವರಿದ್ದರೂ ಸಹ ಸ್ವತಃ ಒಡಹುಟ್ಟಿದವರಂತೆ ಸಾಮರಸ್ಯದಿಂದ ಇದ್ದರು.

ಸಮಾಜದಲ್ಲಿ ಒಪ್ಪಿತವಲ್ಲದ ಮೌಲ್ಯಗಳಲ್ಲಿ ಪ್ರೇಮ ಪ್ರಕರಣವು ಒಂದು ಮಲ್ಲಪ್ಪನ ಮಗಳಾದ–ಕಾಶಿ ಹಾಗೂ ಮೇಲ್ವರ್ಗದ ಸಾಹುಕಾರನ ಮಗನಾದ ಲಿಂಗರಾಜು, ಇವರ ಪ್ರೇಮ ಬಾಂಧವ್ಯ ಕಾದಂಬರಿಯ ತಿರುವುಗಳಲ್ಲೊಂದು. ಇಲ್ಲಿ ಲೇಖಕಿಯು ಜಾತಿ, ಜಾತಿಗಳ ನಡುವೆ ವೈವಾಹಿಕ ಸಂಬಂಧಗಳು ಗಟ್ಟಿಗೊಳಿಸುವ ನೆಲೆಯಲ್ಲಿ ಕಾಶಮ್ಮ ಲಿಂಗರಾಜ ಪ್ರೇಮ ಪ್ರಕರಣವನ್ನು ತಂದರೂ, ಆಸ್ತಿ ಅಂತಸ್ತು, ಜಾತಿಯ ಮೌಢ್ಯ ಸಾಹುಕಾರರ ದಬ್ಬಾಳಿಕೆಯಿಂದ ಒಂದು ನೆಲೆಯನ್ನು ಕಂಡುಕೊಳ್ಳಲಾಗದೆ ಅತಂತ್ರ ಸ್ಥಿತಿಯಲ್ಲಿ ನಿಲ್ಲುತ್ತದೆ.

ಕಾಶಮ್ಮ ಮತ್ತು ಲಿಂಗರಾಜು, ಅನ್ಯ ಕೋಮಿನ ಜನಾಂದವರು. ಅಂತಸ್ತಿನಲ್ಲಿ ಸಮಾನರೆನಿಸಿದರೂ ಜಾತಿಯಲ್ಲಿ ಲಿಂಗರಾಜು ಮೇಲ್ವರ್ಗದವನು. ಮೊದ ಮೊದಲು ಸ್ನೇಹಿತರಾಗಿದ್ದ ಇವರಲ್ಲಿ ಕ್ರಮೇಣ ಪ್ರೀತಿಗೆ ತಿರುಗತ್ತದೆ. ಇವರು ಬನದಾಗ ಅಡವ್ಯಾಗೆ, ಗುಡ್ಡದಾಗ ತಿರುಗಾಡುವ ಇವರ ಪ್ರೀತಿ ಮತ್ತಷ್ಟು ಗಟ್ಟಿಯಾಗುತ್ತದೆ. ಆಣೆ, ಭಾಷೆಗಳ ಮೂಲಕ ಮನಸ್ಸಿನಲ್ಲಿ ದೃಢ ನಿರ್ಧಾರ ಕೈಗೊಂಡು ಮದುವೆಯಾಗಿಯೇ ತೀರವಾ... ಎಂದು ನಿರ್ಧರಿಸಿರುತ್ತಾರೆ.

ಹೀಗೆ ದಿನಕಳೆದಂತೆ ಇವರ ಪ್ರೀತಿ ವಿಷಯ ಊರಿಗೆಲ್ಲಾ ಪಸರಿಸುತ್ತದೆ. ಈ ವಿಷಯ ಸಾಹುಕಾರನಿಗೂ ತಲುಪಿ, ಮಲ್ಲಪ್ಪನ್ನು ಕರೆಯಿಸಿ ಬೆದರಿಕೆಯೊಡ್ಡುತ್ತಾನೆ. ಏನೂ ತಿಳಿಯದ ಮಲ್ಲಪ್ಪ ಕಂಗಲಾಗಿ, ತಿಳಿದು ಸಾಹುಕಾರನ ಈ ನಿಂದನೆಯ ನುಡಿಯನ್ನು 'ಯಾಕೆಲೇ ಮಲ್ಯಾ' ಸೊಕ್ಕ ಬಂದದೇನ್ಲೇ ಕಬ್ಬಲಿಗ್ಯಾ....? ಎಂದು ಒದರಾಡಿದ ಸಾಹುಕಾರನ ನುಡಿಗೆ ಏನೂ ತಿಳಿಯದೆ ಪಿಳಿಪಿಳಿ ಕಣ್ಣು ಬಿಡುತ್ತಾನೆ. ನಿಮ್ಮವ್ವನಾ ಸೂಳ್ಯಾ ಮಗನೇ .... ಕಡೀಗಿ ನಿಮ್ ಕಮಜಾತಿ ಹಲ್ಕಟ್ ಗುಣ ಎಲ್ಲಿ ಬಿಟ್ಟರಲೆ ನೀವು? ಏಟು ಸೊಕ್ಕಲೇ

ಬೋಸುಡಿ ಮಗನಾ ನಿನಗೆ" ಎಂದು ಸಾಹುಕಾರ ಬೈದಾಗ ಅವನ ಮಾತು ಕೇಳಿ ಮಲ್ಲಪ್ಪನಿಗೂ ಸಿಟ್ಟು ಬಂದಿತು.

'ಯಾಕ್ರೀ, ಸಾಹುಕಾರ ಏನಾಯ್ತು ಎಂಬುದ ಮೊದಲು ಹೇಳ್ರಿ, ಹಿಂಗ ಸಿಕ್ಕಂಗೆಲ್ಲ ಬೈಯಲಿಕತ್ಯಾರಾ, ನನಗೆ ಹ್ಯಾಂಗ ತಿಳಿಬೇಕು, ಹೀಗಂಲ್ಲ ಸುಮ್ ಸುಮನೆ ಕೆಟ್ಟ ಕೆಟ್ಟ ಬೈಗುಳ ಬೈಯೋದು ನಿಮಗೆ ತರವಲ್ಲ. ನೀವು ಹತ್ತಂದ್ರೆ ನಾನು ತಿರುಗಿ ಒಂದನಾದ್ರು ಅಂತ್ತಿನಿ. ಆ ದೇವ್ರು ನನಗೂ ಅಭಿಮಾನ ಮತ್ತು ನಾಲಿಗೆ ಕೊಟ್ಟಿದಾನೆ ಎಂಬುದು ನಿಮಗೆ ನೆನಪಿರಲಿ ಏನಾಯ್ತು ಬಿಡಿಸಿ ಹೇಳಿ ಎಂದು ತಾಳ್ಮೆಯಿಂದಲೇ ಕೇಳಿದೆ.

ಹೀಗೆ ಇವರಿಬ್ಬರ ನಡುವೆ ಮಾತಿಗೆ ಮಾತು ಬೆಳೆದು ಕೊನೆಗೆ ಲಿಂಗರಾಜು ಕರೆಸಿ ಕೇಳುತ್ತಾರೆ. ಆಗ ಲಿಂಗರಾಜು 'ನಾನು ಕಾಶಿ ಇಬ್ಬರೂ ಒಬ್ಬರಿಗೊಬ್ಬರು ಪ್ರೀತಿ ಮಾಡುತ್ತೇವೆ. ಒಬ್ಬರಿಗೊಬ್ಬರು ಮನಸ್ಸುಕೊಟ್ಟಿದ್ದೀವಿ, ಆಕಿ ನನ್ ತಲೆಕೆಡಸಿಲ್ಲ. ನಾವಿಬ್ರೂ ಮದುವೆ ಮಾಡಿಕೊಂಡು ಸಂಸಾರ ಮಾಡ್ತೀವಿ ಎಂದನು. ಈ ಮಾತು ಕೇಳಿಸಿಕೊಂಡು ಕುಳಿತ್ತಿದ್ದ ಸಾಹುಕಾರನ ಸ್ನೇಹಿತರು ನೀವಿಬ್ರು ಜಗಳ ಮಾಡಿಕೊಂಡು ಕಿತ್ತಾಡಿಕೊಂಡ್ರೆ ನೀವು ಜೈಲು ಸೇರ್ತಿರಾ, ನೀವು ಜೈಲು ಸೇರಿದರೆ ಅವರಿಬ್ಬರೂ ಓಡಿ ಹೋಗಿ ಮದ್ವೆ ಮಾಡ್ಕೊಂಡು ಸುಖವಾಗಿರುತ್ತಾರೆ. ನೀವು ಜೈಲು ಕೇಸು, ಕಛೇರಿಯಂತೆ ಅಲೆಯಬೇಕಾಗುತ್ತದೆ. ಕೆಳಗೆರಿಯವರಿಗೆ ಕಾನೂನು ನೆರವು ನೀಡುತ್ತದೆ. ಊರಜನ ನಿಮ್ಮ ನೋಡಿ ನಗ್ತಾರೆ, ಅದರಿಂದ ಇದೆಲ್ಲಾ ಬೇಡ ಮಕ್ಕಳಿಗೆ ಬುದ್ಧಿಹೇಳಿ ಅವರನ್ನು ದೂರಮಾಡಿ, ಬೇರೆ ಬೇರೆ ಹುಡುಗ-ಹುಡುಗಿ ನೋಡಿ ಮದುವೆ ಮಾಡಿದರೆ ಎಲ್ಲಾ ಸರಿಹೊಗ್ತದೆ ಎಂದು ಅನುವಪ್ಪಗೌಡ, ಸಿಂಗ್ರಪ್ಪಗೌಡ, ಕಾಶಪು ಕುಲಕರ್ಣಿ ಹೇಳಿದರು. ಇವರ ಮಾತಿಗೆ ಮಲ್ಲಪ್ಪ ಜಮಾದಾರ ಒಪ್ಪಿಕೊಂಡನು ಹಾಗೆ ಸಾಹುಕಾರನು ಅನುಮೋದಿಸಿದನು. ಲಿಂಗರಾಜು ಕಾಶಮ್ಮ ಬೇಟಿ ಆಗದ ಹಾಗೆ ನೋಡ್ಕೋತ್ತೀವಿ ಅಂತೇಳಿ ಮಲ್ಲಪ್ಪ ಮನೆದಾರಿ ಹಿಡಿದನು.

ಇತ್ತ ಕಡೆ ಮಲ್ಲವ್ವ ನಿನ್ನನ್ನು ಹೆತ್ತಿ ತಲೆತಗ್ಗಿಸುವ ಪರಿಸ್ಥಿತಿ ಬಂತಲ್ಲಾ ಎಂದು ಅಳತೊಡಗಿದಳು. ಇದನೆಲ್ಲಾ ಗಮನಿಸುತ್ತಿದ್ದ ಕಾಶಮ್ಮಯೇನೋ ಹಾದರಗಿತ್ತಿ ಅಲ್ಲ. ಲಿಂಗರಾಜ ನನಗೆ ಮದ್ವೆ ಮಾಡ್ಕೋತ್ತೀನಿ ಎಂದು ಮಾತು ಕೊಟ್ಟಾನಾ ಎಂದು ಹೇಳಿ, ನಾವು ಮದ್ವೆ ಆಗಿ ಬೇರೆ ದೇಶಕ್ಕೋಗ್ತಿವಿ ಎಂದು ಅಬ್ಬರಿಸಿದಳು ಹೀಗೆ ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವುದು ಕಂಡು ಬರುತ್ತದೆ.

ಇಷ್ಟೆಲ್ಲಾ ವಾಗ್ವಾದ ನಡೆದ ಮೇಲೆ ಮಲ್ಲಪ್ಪ ಕಾಶಮ್ಮನನ್ನು ರಾತ್ರೋ ರಾತ್ರಿ ತನ್ನ ಹಿರಿಯ ಮಗಳು ಶಾಣಮ್ಮನ ಮನೆಗೆ ಕರೆದ್ಯೋಯುತ್ತಾನೆ. ಇಲ್ಲಿ ನಡೆದ ವಿಚಾರಗಳನ್ನೆಲ್ಲಾ ಅಳಿಯ ಹಾಲಪ್ಪನಿಗೆ ತಿಳಿಸಿ, ಬೇರೊಂದು ಹುಡುಗನನ್ನು ನೋಡುವಂತೆ ಹೇಳಿದಾಗ ಹಾಲಪ್ಪ ಸೊಲ್ಲಾಪುರದ ಬಟ್ಟೆ ಗಿರಿಣಿಯಲ್ಲಿ ಕೆಲಸ ಮಾಡುತ್ತಿದ್ದ ಅನಾಥ ಮಾರ್ತಾಂಡನಿಗೆ ಕೊಟ್ಟು ಮದುವೆ ಮಾಡುತ್ತಾರೆ.

ಇತ್ತ ಲಿಂಗರಾಜು ಸಹ ಎಲ್ಲಾ ಕಡೆ ಕಾಶಮ್ಮನನ್ನು ಹುಡುಕಿ ಸಿಗದೆ ಹೋದಾಗ ಅಪ್ಪನ ಆಸೆಯಂತೆ ನೀಲವ್ವನನ್ನು ಮದುವೆಯಾಗುತ್ತಾನೆ. ಮೂರು ವರ್ಷದ ಅನಂತರ ಕಾಶಮ್ಮ ತನ್ನ ತವರು ಮನೆಯ ಹಬ್ಬಕ್ಕೆಂದು ಬಂದಾಗ ಲಿಂಗರಾಜುವನ್ನು ಭೇಟಿಯಾಗಿ ಬಿಗಿದಪ್ಪಿ ಅಳುತ್ತಾ ಸ್ವಲ್ಪದಿನ ಕಳೆದ ಮೇಲೆ ಲಿಂಗರಾಜು ಸೋಲ್ಲಾಪುರಕ್ಕೆ ಹೋಗಿ ಮಾರ್ತಾಂಡನಿಗೆ ತಮ್ಮ ಪ್ರೀತಿ ವಿಚಾರ ತಿಳಿಸಿ ಶಿವಳ್ಳಿಗೆ ಕರೆದುಕೊಂಡು ಬಂದು, ತಮ್ಮ ತೋಟದ ಮನೆಯಲ್ಲಿ ಮದುವೆಯಾಗದೆ ಸಂಸಾರ ನಡೆಸುತ್ತಾನೆ. ಮತ್ತೆ ಇದನ್ನು ತಿಳಿದಂತಹ ಮಲ್ಲಪ್ಪ, ಹಾಗೂ ಲಿಂಗರಾಜನ ಹೆಂಡತಿ ನೀಲವ್ವಗ ತಿಳಿದು ಮಾತುಕತೆಗಳು ನಡೆಯುತ್ತವೆ. ನೀಲವ್ವ ತನ್ನ ತವರು ಮನೆಗೆ ವಿಷಯ ತಿಳಿಸುತ್ತಾಳೆ. ತವರು ಮನೆಯವರು ಮಲ್ಲಪ್ಪನನ್ನು ಕರೆಸಿ ಅವಮಾನ ಮಾಡುತ್ತಾರೆ. ಈ ಅವಮಾನವನ್ನು ಸಹಿಸಿದ ಮಲ್ಲಪ್ಪ ಕೆರೆಗೆ ಹಾರಿ ಜೀವ ತೆಗೆದುಕೊಳ್ಳುತ್ತಾನೆ. ಇದೇ ಕೊರಗಿನಲ್ಲಿ ಮಲ್ಲವ್ವ ಹಾಸಿಗೆ ಹಿಡಿಯುತ್ತಾಳೆ.

ಹೀಗೆ ಸಾಗುತ್ತಿದ್ದ ಸಂಸಾರಕ್ಕೆ ಅನಿರೀಕ್ಷಿತ ಘಟನೆಯಿಂದ ಮತ್ತಷ್ಟು ಸಂಕಟ ಎದುರಾಗುತ್ತದೆ ಕಲ್ಯಾಣಿ ಮತ್ತು ಸ್ನೇಹಿತರು ಸೇಂದಿ ಕುಡಿಯುವ ಕೆಲ್ಲಪ್ಪನ ಅಂಗಡಿಯಲ್ಲಿ ಮುಕುಡಪ್ಪ ಮತ್ತು ಉಳಿದವರು, ಕುಡಿದ ನಶೆಯಲ್ಲಿ ಕಲ್ಯಾಣಿಯ ಸಂಸಾರಿಕ ವಿಷಯವನ್ನು ಜರಿಯುತ್ತಾರೆ. ಇದರಿಂದ ಸಿಟ್ಟಿಗೆದ್ದ ಕಲ್ಯಾಣಿ ಮುಕ್ಕಡಪ್ಪನನ್ನು ಜಾಡಿಸಿ ತಳ್ಳುತ್ತಾನೆ. ಕುಡಿದ ನಿಶೆಯಲ್ಲಿದ್ದ ಮುಕ್ಕಟಪ್ಪ ಕೆಳಗೆ ಬಿದ್ದು ತಲೆಗೆ ಕಲ್ಲು ತಾಗಿ ರಕ್ತ ಸ್ರಾವದಿಂದ ಸಾಯುತ್ತಾನೆ. ಇದರ ಪರಿಣಾಮವಾಗಿ ಕಲ್ಯಾಣಿ ಜೈಲು ಸೇರುತ್ತಾನೆ. ಜಮಾದಾರನ ಕುಟುಂಬದ ನಿರ್ವಹಣೆ ಅತಂತ್ರವಾಗುತ್ತದೆ.

ಇಲ್ಲಿ ಲೇಖಕಿಯು ಎರಡು ಜಾತಿಗಳನ್ನು ಒಂದೆ ನೆಲೆಯಲ್ಲಿ ಸಮನ್ವಯಗೊಳಿಸಲು ಈ ಪ್ರೇಮ ಪ್ರಕರಣ ತರುತ್ತಾರೆ. ಆದರೆ ಈ ಪ್ರಕರಣವು ಯಶಸ್ವಿನ ಹಾದಿಯಲ್ಲಿ ವಿಫಲವಾಗಿಯೇ ನಿಲ್ಲುತ್ತದೆ. ಕಾರಣ ಜಾತಿಯತೆ, ಶ್ರೀಮಂತಿಕೆ, ದಬ್ಬಾಳಿಕೆ, ಪರಂಪರಾಗತ ಒಪ್ಪಿತ ಮೌಲ್ಯಗಳಿಂದ ಹೊರ ಬರಲಾಗದ ಮನಸ್ಥಿತಿಗಳಿಂದ ಈ ಪ್ರೇಮಿಗಳು ದೂರವಾಗಿಯೇ ಉಳಿಯುತ್ತಾರೆ. ಆದರೂ ಇವೆಲ್ಲವನ್ನು ಮೆಟ್ಟು ನಿಂತು ಒಂದು ಹೆಜ್ಜೆ ಮುಂದೆ ಸಾಗಿದರು ಸೂಕ್ತ ನೆಲೆ ಸಿಗದೆ ಸಮಾಜ ಒಪ್ಪಿತ ಮೌಲ್ಯದ ವಿರೋಧಿ ನೆಲೆಯಲ್ಲಿಯೇ ಅಂದರೆ ಕಾಶಮ್ಮ ಗಂಡನನ್ನು ಬಿಟ್ಟು ಪ್ರಿಯತಮನ ಹತ್ತಿರ ಬಂದರೂ, ಅವಳಿಗೆ ಹೆಂಡತಿ ಸ್ಥಾನ ಕೊಡದೆ ರಂಡೆಯಂತೆ ಇಟ್ಟುಕೊಳ್ಳುತ್ತಾನೆ. ಕಾಶಮ್ಮ ಗಂಡನನ್ನು ಬಿಟ್ಟು ಬಂದರೂ, ಸಾಹುಕಾರ ಮಗ ಲಿಂಗರಾಜು ಹೆಂಡತಿಯನ್ನು ಬಿಟ್ಟು ಬರುವುದಿಲ್ಲ.

ಈ ಹಿನ್ನೆಲೆಯಲ್ಲಿ ಸಮಾದ ಹಿಂದಿನ ಮೌಲ್ಯಗಳ ವಿರುದ್ಧ ಬದಲಾವಣೆಯ ಮನೋಧರ್ಮ ಹೊಂದಿ ಪ್ರಗತಿಪರ ಚಿಂತನೆಯಲ್ಲಿ ಮುನ್ನಡೆದರು, ಇದನ್ನು ಬಗ್ಗು ಬಡಿಯುವ ಅಥವಾ ತನ್ನ ಮೂಲ ಸ್ವರೂಪದಲ್ಲೇ ಉಳಿಯಲು, ಜಾತಿಯತೆ ಮತ್ತು ಮೇಲ್ವರ್ಗದವರ ಹಿತಾಶಕ್ತಿಗಳ ಬಗ್ಗುಬಡಿಯುತ್ತವೆ. ಈ ಪ್ರಕರಣಗಳು ಕೇವಲ ಈ ಭಾಗದಲ್ಲಿ ಮಾತ್ರವಲ್ಲದೇ ದೇಶದ ತುಂಬೆಲ್ಲ ನಡೆದರೂ, ಇನ್ನು ಒಪ್ಪಿತ ಮೌಲ್ಯಗಳಾಗಿಲ್ಲ. ಇವು

ಸಮಾಜ ವಿರೋಧಿ ನೆಲೆಯಲ್ಲಿಯೇ ವಿಹರಿಸಿ ಅಪರೂಪಕ್ಕೆಂಬಂತೆ ಗೆಲ್ಲುತ್ತವೆ, ಕೆಲವು ಸೋಲುತ್ತವೆ.

ಮೌಢ್ಯಗಳು ಪ್ರಾದೇಶಿಕ ನೆಲೆಗಟ್ಟಿನಲ್ಲಿ ಭಿನ್ನ ಭಿನ್ನ ಸ್ವರೂಪದಲ್ಲಿ ಸ್ಥಾಪಿತವಾಗಿದ್ದು, ಸಮಾಜದ ನೆಲಗಟ್ಟಿನಲ್ಲಿ ವೈರುಧ್ಯಗಳಾಗಿಯೇ ಉಳಿಯುವಂತಹ ಪ್ರಕ್ರಿಯೆಗಳು, ಈ ಕಾದಂಬರಿಯಲ್ಲಿ ಕಾಕತಾಳೀಯವೆಂಬಂತೆ ನಡೆಯುವ ಘಟನೆಗಳಿಗೆ ಪೂರಕವಾಗಿಯೇ ನಿಲ್ಲುತ್ತವೆ.

ಕಾದಂಬರಿಯ ಕೇಂದ್ರ ಬಿಂದು ಮಲ್ಲಪ್ಪನ ಕುಟುಂಬ ಮತ್ತು ಆತನ ಸುತ್ತ ಸುತ್ತುವ ಪಾತ್ರಗಳು ಮಲ್ಲಪ್ಪ ಜಮಾದಾರ ಸರ್ಕಾರ ನೀಡಿದ ಜಮೀನಿನ ನೆರವಿನಿಂದ ಮೇಲ್ವರ್ಗದ ಶ್ರೀಮಂತ ಸಾಹುಕಾರರಿಗೆ ಹೊಯ್ ಕಯ್ ಆಗುವಂತೆ ವೈಭೋಗ ಜೀವನ ನಡೆಸಿದವನು. ಈತನ ಕೌಟುಂಬಿಕ ವಾತಾವರಣದಲ್ಲಿ ಅನಿರೀಕ್ಷಿತವಾಗಿ ನಡೆಯುವ ಘಟನೆಗಳು ಕೆಲವು ತಿರುವುಗಳನ್ನು ಪಡೆಯುತ್ತವೆ. ಈ ತಿರುವುಗಳ ಪರಿಣಾಮದಿಂದ ಮಲ್ಲಪ್ಪನ ಕುಟುಂಬವೇ ಅವಸಾನವಾಗುತ್ತವೆ. ಇದಕ್ಕೆ ಹಿನ್ನಲೆಯಾಗಿ ಧಾರ್ಮಿಕ ಮೌಢ್ಯಗಳು ಪ್ರಭಾವ ಬೀರಿವೆಯೇನೋ ಎಂಬ ಅಂಶ ಓದುಗನನ್ನು ಚಿಂತೆಗೀಡು ಮಾಡುತ್ತವೆ.

ಮೊದಲನೆಯದಾಗಿ ಮಲ್ಲಪ್ಪನ ಮನೆತನಕ್ಕೆ ಹಿರಿಯರ ಕಾಲಕ್ಕೆ ಶಾಪ ಹತ್ತಿತ್ತು. ಕಾರಣ ಅವರ ಹಿರಿಯರು ಮಠದಯ್ಯನಿಗೆ ಹೊಡೆದಿದ್ದರಂತೆ ಆ ಮಠದಯ್ಯ ದಿನ ಮನೆ ಮುಂದೆ ಬಂದು ನಿಂತು "ಗುರು ಕ್ವಾರುಣ್ಯ ಭಿಕ್ಷೆಯಂತಾ, ಜೋಳವನ್ನು ಬೇಡಿದನಂತೆ, ಆವಾಗ ಮನಿ ಹೆಣ್ಣುಮಗಳು, ಅದನ್ನ ಹರೇದಕ್ಕೆ ಕುಡಿತ ತುಂಬಾ ಹಿಟ್ಟತಗೊಂಡು ಬಂದು ಅವನ ಜೋಳಗಿಗೆ ನೀಡಿ ಪಾದಕ್ಕೆ ಹಣೆ ಹಚ್ಚಿ ಸಣ್ಣಮಾಡಿದಾಗ, ಆ ಮಠದಯ್ಯ ಆ ಹುಡುಗಿಯ ಮೈಯಮುಟ್ಟಿ ಬಗಲಗ ಕೈಹಾಕಿ ಎಳೆದನಂತೆ, ಆದ ನೋಡಿದ ಆಕೆಯ ಅಪ್ಪ ಒಂದೇಟಿಗೆ ಹಾರಿ ಬಂದು ಆ ಸ್ವಾಮಿಗೆ ನೆಲಕ್ಕೊತ್ತಿ ಗುದ್ದಿ ಗುದ್ದಿ ಹಣ್ಣುಗಾಯಿ ನೀರುಗಾಯಿ ಮಾಡಿದನಂತೆ, "ಆ ಆಯ್ಯ 'ಇದೆ ಅಂಗಳದಾಗ ನಿಂತು "ಏ ಜಮದಾರ ನಿನ್ನ ಮಗಳು ನನ್ನ ಮಠಕ್ಕೆ ಸೇವೆಗೆ ಬೇಕು, ಕಳಿಸಿಕೊಂಡು ನಿನಗ ಸಾವಿರ ವರುಷ ಕುಳಿತು ತಿಂದರೂನೂ ಸವೆಯದ ಸಂಪತ್ತು ಸಿಗತಾದ ಆ ಶಿವ ನಿನ್ನ ಮನ್ಯಾಗ ಹಾಲಕ್ಕಿ ಹಳ್ಳಾ ಹರಸತಾನ ನಿಂದೆಲ್ಲಾ ಭಲೋ ಆಗ್ತದ......" ಅಂತ ಕೇಳಿದನಂತೆ ಅವಾಗ ಆ ಜಮಾದಾರ ಮತ್ತೀಟ್ಟು ಸಿಟ್ಟಿಗೆದ್ದು ಬಕ್ಕಂತ ಬಂದು ಒದ್ದು ಬಿಟ್ಟನಂತೆ. ಆ ಅಯ್ಯ ಅಪ್ಪು ಹೊಡಸ್ಕೊಂಡ್ರು, ಹೊದಿಸ್ಕಂಡು ತಟ್ಟಂತ ಸೆಟೆದೆದ್ದು ನಿಂತು ಬಾಲ ತುಳಿದ ಹಾವಿನಂತೆ ಬುಸುಗಟ್ಟಿ ಮಣ್ಣು ತೂರಿ "ನಿಮ್ ಮನಿತನಕ್ ಒಂದೊಂದೆ ಗಂಡು ಸಂತಾನ ಆಗಲಿ" ಅಂತ ಶಾಪ ಕೊಟ್ಟು ಪಾರಾರಿಯಾದ ನಂತೆ ಮಠದಯ್ಯನ ಮಾತಿನಂತೆ ಅಂದಿನಿಂದ ಮಲ್ಲಪ್ಪನ ಮಗನವರೆಗೂ ಒಬ್ಬನೆ ಮಗ ಹುಟ್ಟುವ ಪರಿ ಮೌಢ್ಯವೋ ಅಥವಾ ಶಾಪದ ಪರಿಣಾಮವೋ ನಂಬಲಾಗದ ವಿಷಯವಾಗಿದೆ.

ಮಠದಯ್ಯನ ಶಾಪದ ಪರಿಣಾಮದ ಪ್ರಭಾವವೆಂಬಂತೆ ಮೊಹರಂ ಹಬ್ಬದ

ಸಂಧರ್ಭದಲ್ಲೂ ಮೆರವಣಿಗೆ ಹೊರಟ ಖತಲ್ ಸಾಬ್ ದೇವರು, ಮಲ್ಲಪ್ಪನ ಮನೆಯ ಮುಂದೆ ನಿಂತು "ಯಾಕೋ ನಿನ್ ಮನೆ ತುಂಬಾ ಕತ್ತಲು ತುಂಬ್ಕೊಂಡದಲ್ಲೊ ಮಲ್ಲಪ್ಪ"– ಎಂದು ಕುಟುಂಬದ ಅವಸಾನದ ಮುನ್ಸೂಚನೆ ಎಂಬಂತೆ ಭವಿಷ್ಯ ನುಡಿಯುವುದು, ಅದು ಮುಂದೆ ನಿಜಕೂಡ ಆಗುವುದು ಮೌಢ್ಯದ ಅತಿರೇಕವೆಂಬಂತೆ ನಡೆಯುತ್ತದೆ. ಮಲ್ಲಪ್ಪನ ಮಗಳು ಬೇರೆ ಜಾತಿ ಯುವಕನನ್ನು ಪ್ರೀತಿಸುವುದು, ಇದರ ಪರಿಣಾಮವಾಗಿ ಅವಮಾನ ಸಹಿಸಲಾಗದೆ ಮಲ್ಲಪ್ಪ ಸಾಯುವುದು, ಮಗ ಜೈಲಿಗೆ ಹೋಗುವುದು. ಇಷ್ಟೆಲ್ಲಾ ಜರುಗುತ್ತವೆ. ಇಂತಹ ನಂಬಿಕೆಗಳು ಇಂದಿನ ಸಮಾಜದಲ್ಲಿಯೂ ಇರುವುದು ನಮಗೆ ತಿಳಿಯುತ್ತದೆ. ಮಲ್ಲಪ್ಪನ ಕುಟುಂಬದಂತೆ ಸಮಾಜದಲ್ಲಿ ಇರುವ ಬೇರೆ ಕುಟುಂಬಗಳ ಕೆಲವೊಂದು ಬಿದ್ದಿರುವುದು ತಿಳಿಯುತ್ತದೆ.

ಗಂಡನ ಸಾವಿನಿಂದ ಅಸ್ವಸ್ತಳಾಗಿದ್ದ ಮಲ್ಲವ್ವ ದೆವ್ವ ಹಿಡಿದವಳಂತೆ ವರ್ತಿಸುತ್ತಾಳೆ. ಇದಕ್ಕೆ ಪರಿಹಾರವಾಗಿ ಸಾವಿನಿಂದ ಜೀವಣಿಗೆ ಅಂಬಾ ಭವಾನಿಗೆ ದೇವರಿಗೆ ಕರೆದುಕೊಂಡು ಹೋಗಿ, ಹಣ್ಣುಕಾಯಿ ಪೂಜೆ ಮಾಡಿಸಿ ಕೈ ಮುಗಿದು ಬಂದು, ಅಂಗಳದಲ್ಲಿ ಕುಳಿತರು ಆಗ ದೇವಿಯ ಪೂಜಾರಿಯ ಮೈಮೇಲೆ ದೇವಿಯು ಅವತರಿಸಿ ಮಲ್ಲವ್ವನನ್ನು ಕರೆಯುತ್ತದೆ. "ಗಂಡ ಹೆಣ್ತಿಗೆ ಒಂದೆ ಹೆಸರಿದ್ದು, ಈಗ ರಂಡೆ ಮುಂಡೆಯಾಗಿ, ಬದನೆ ಬಣ್ಣದ ಸೀರೆ ಉಟ್ಕೊಂಡು ಶಿವಳ್ಳಿ ಎಂಬೋ ಹಳ್ಳಿಯಿಂದ ಎರಡು ಗಂಡು ಪಾರ್ಗೊಳಿಗೆ ಮುಂದಿಟ್ಟುಕೊಂಡು ಬಂದು ಕುಳಿತಳಲ್ಲೋ ಎಂದು ಕರೆಯಿತು. ನಿನ್ನೂರಿನಿಂದ ಬಂದ ಮಾದಾರ ಕಳಸಪ್ಪ ಇಲ್ಲಿ ತನಕ ಬಂದು ನನ್ನ ಗುಡಿಗೆ ಬರಲಾದರೆ ಬೇವಿನ ಮರದಲ್ಲಿ ನೇತಾಡುತ್ತಿದೆ ಎಂದು ಹೇಳಿತ್ತು. ನಿನ್ನ ಜೀವಕ್ಕ ನಾನು ತೊಂದರೆಯಾಗಲಿಕ್ಕೆ ಬೀಡೋದಿಲ್ಲ ಎಂದು ದೇವರು ಭಂಡಾರ ಮತ್ತು ನಿಂಬೆ ಹಣ್ಣನ್ನು ಮಂತ್ರಿಸಿ ಕೊಟ್ಟು ಇದನ್ನು ಹಾಸಿಗೆ ಕೆಳಗಡೆ ಇಡಿ ಮುಂದಿನ ವರ್ಷ ಇದೆ. ಅಮಾವಾಸ್ಯೆಗೆ ಬನ್ನಿ ಎಂದು ಹೇಳಿ ಕಳುಹಿಸಿತು. ಹೀಗೆ ಮನೆಗೆ ವಾಪಸ್ಸು ಬರುವಾಗ ದಾರಿಯಲ್ಲಿ ಬೇವಿನ ಮರದಲ್ಲಿ ನೇತಾಡುತ್ತಿದ್ದ ದೆವ್ವ, ಮಲ್ಲವ್ವನನ್ನು ಮತ್ತೆ ಬೆನ್ನರಿತು, ಮನಗೆ ಬಂದ ಮೇಲೆ ದೇವಿ ಕೊಟ್ಟಿದ್ದ ನಿಂಬೆ ಹಣ್ಣನ್ನು ತಲೆದಿಂಬಿನ ಕೆಳಗೆ ಹಾಕಿ ಮಲಗಿಸುತ್ತಾರೆ. ಮಲ್ಲವ್ವ ಮಲಗಲು ಹಠ ಮಾಡುತ್ತಾಳೆ. ಕಲ್ಯಾಣಿ ಫತಾರು ಮಲಗಿಸುತ್ತಾರೆ. ಹೀಗೆ ಮತ್ತೆ ಮತ್ತೆ ದೆವ್ವಗಳು ಮಲ್ಲವ್ವನನ್ನು ಬಂದು ಕಾಡಿಸುತ್ತವೆ ಇದನ್ನು ಫತಾರುಗೆ ಮಲ್ಲವ್ವ ಹೇಳಿದಾಗ ಅವ್ವಾ ಇದೆಲ್ಲಾ ನಿನ್ನ ಭ್ರಮೆ ಏನೇನೋ ಯೋಚಿಸಿ ಬೇಡ, ಅದಕ್ಕೆ ನಿಂಗೆ ಹಾಗೆ ಅನಿಸುತ್ತದೆ ಎಂದು ಸಮಾಧಾನ ಪಡಿಸಿದನು. ಅದಕ್ಕೆ ಪ್ರತಿಯಾಗಿ ಮಲ್ಲವ್ವ ಕಂಡು ಮುಕುಡಪ್ಪನ ದೆವ್ವದ ವಿಚಾರವನ್ನೆಲ್ಲಾ ಹೇಳತೊಡಗಿದಳು. ಮುಕುಡಪ್ಪ ಬಂದು 'ನಾ ಬೆಳ್ಳಿ ಅಲಗ್ಯ ಮಲ್ಲಿ ನನ್ ಕೂನ ಸಿಗಲಿಲ್ಲವೇನೂ ನಿನಗ? ನಾನು ಜಬಂಗಿ ಹಳ್ಳಿ ಮುಕಡಪ್ಪ ಇದೀನಿ, ನಿನ್ ಮಗ ನನಗ ಹೊಡೆದು ಕೊಲ್ಯಾನಲ್ಲ ಆ ಮುಕಡಪ್ಪ ಇದ್ದೀನಿ. ಅಂದ ಅದಕ್ಕೆ ಮಲವ್ವ ಪ್ರತಿಯಾಗಿ 'ಮುಕುಡಪ್ಪರೆ ಇರು, ಕಿವುಡಪ್ಪರೆ ಇರು ನೀ ಯಾಕೆ ಇಲ್ಲಿಗೆ ಬಂದ್ಯೋಯೊಪ್ಪಾ ನನ್ ಮಗ ನಿನ್ನಿಂದಾಗಿ ಜೈಲುಖಾನೆಯಾಗಿ ಕೊಳಲ್ಲಿಕತ್ಯಾನಾ...s

ಮತ್ತೆ ಮುಕ್ಯಡಪ್ಪನಾ ದೆವ್ವ ಮಾತನಾಡಿತು "ಆ ಸೇಡು ತೀರಿಸ್ಕೋಳಕ್ಕೆ ಬಂದೀನಿ ಮುದುಕಿ ನಿನ್ ಬಳಿ..... ಅವತ್ತ ಹೋಳಿ ಹುಣ್ಣಿಮೆ ಕರಿ ಇತ್ತು ಸೀಂದಿ ಕುಡ್ದು ಮನೀಗಿ ಹೋಗಿ ಗೋಧಿ ರೊಟ್ಟಿ, ಖಂಡದ ಪಲ್ಯ ತಿನ್ಬೇಕಂತ ನಾನೂ ನನ್ ಗೆಳೆಯರೆಲ್ಲಾ ಕೂಡಿ ಸೀಂದಿಗಡಂಗಕ್ಕ ಬಂದಿದ್ದೇವು ಅದರ ನಿನ್ ಮಗಾ ಅಲ್ಲೇ ನನಗ ಖೂನ್ ಮಾಡದನಲ್ಲ ಬದಮಾಸ ನನಗ ಊಟಾನೇ ಸಿಗಲಿಲ್ಲ, ಹಂಗೆ ಹಸಿವಿನಿಂದ್ಲೇ ಸತ್ತೀನೀ ಅದಕ್ಕ ನನಗೆ ಹೊಟ್ಟೆತುಂಬ ಊಟ ಹಾಕು ಎಂದು ಮುಕುಡಪ್ಪನ ದೆವ್ವ ತಾಕೀತು ಮಾಡಿದ್ದನ್ನು ಮಲ್ಲವ್ವ ಘತಾರುಗೆ ಹೇಳಿದಳು. ಆಯ್ತು ಎಂದು ಘತರು ಒಪ್ಪಿಕೊಂಡ ಇದರಿಂದ ಆದ್ರೂ ಮಲ್ಲವ್ವನ ಭ್ರಮೆ ಹೋಗುತ್ತದೆ ಎಂಬ ನಂಬಿಕೆಯಿಂದ ಘತರೂ ಒಪ್ಪಿಕೊಂಡನು. ಹೀಗೆ ಮಲ್ಲವ್ವನ ಮನಸ್ಸು ಕಲ್ಯಾಣಿಯು ಜೈಲಿಗೆ ಹೋದದ್ದರಿಂದ ಅಘಾತವಾಗಿ ಆಸ್ವಸ್ಥಳಾದಳು, ಆದರೆ ದೆವ್ವದ ಕಲ್ಪನೆಯಿಂದಲೇ ಸತ್ತಳು ಎಂಬ ಮೌಢ್ಯ ಇಲ್ಲಿ ಮನೆಮಾಡಿದೆ ಹಾಗೂ ಕಲ್ಯಾಣಿ ಮಗ ಸಣ್ಣಮಲ್ಲು ಮನೆಬಿಟ್ಟು ಹೋಗುವುದು ಈ ಎಲ್ಲ ಘಟನೆಗಳು ಶಾಪದ ಪರಿಣಾಮವೆಂಬಂತೆ ದುರ್ಘಟನೆಗಳು ನಡೆಯುತ್ತವೆ ಹಾಗೂ ಮಾನಸಿಕವಾಗಿ ಅಸ್ವಸ್ತನಾಗಿದ್ದ ಕಲ್ಯಾಣಿಯ ಕನಸ್ಸಿನಲ್ಲಿ ಸತ್ತ ಮಲ್ಲಪ್ಪ ಬಂದು ನಾವು ಶ್ರೀ ಶೈಲಕ್ಕೆ ಹೋಗುತ್ತಿದ್ದೇವೆ ಎಂದು ಕೊನೆಯದಾಗಿ ನಿನ್ನ ಬಳಿ ಹೇಳಿ ಹೋಗೋಣವೆಂದು ಬಂದೆ ಎಂದು ಹೇಳಿ ಮಾಯವಾಗುತ್ತಾನೆ. ಎಂದೂ ಕಾಣಿಸಿಕೊಳ್ಳದ ಅಪ್ಪ ಇವತ್ಯಾಕೆ ಬಂದ ಎಂದು ಯೋಚಿಸುತ್ತಾ ಕೊನೆಗೆ ಕಲ್ಯಾಣಿ ಮತ್ತು ಬೆಳ್ಳಿ ಇಬ್ಬರೂ ಶ್ರೀಶೈಲಕ್ಕೆ ಹೋಗಲು ನಿರ್ಧರಿಸುತ್ತಾರೆ. ಅಲ್ಲಿ ದೇವರ ದರ್ಶನ ಮಾಡಿ ಹಿಂತಿರುಗಿ ಬರುವ ವೇಳೆ ಬಸ್ಸು ಅಪಘಾತಕ್ಕೀಡಾಗಿ ಕಲ್ಯಾಣಿ ಮತ್ತು ಬೆಳ್ಳಿ ಇಬ್ಬರೂ ಸಾವನಪ್ಪುತ್ತಾರೆ. ಹೀಗೆ ಅನಿರೀಕ್ಷಿತವಾಗಿ ನಡೆಯುವ ಘಟನೆಗಳು ಮಲ್ಲಪ್ಪನ ಕುಟುಂಬದ ಅವಸಾನಕ್ಕೆ ಕಾರಣವಾಗುವ ಹಿನ್ನಲೆಯಲ್ಲಿ ಮೌಢ್ಯವು ಕೂಡ ತಳುಕು ಹಾಕಿಕೊಂಡಿದೆ.

ಈ ಭಾಗದಲ್ಲಿ ನಡೆಯುವ ವಿಶೇಷ ಹಬ್ಬ ಜಾತ್ರೆಗಳಾದ ಮಾಪುರ ತಾಯಿಯ ಜಾತ್ರೆ, ಕಾರುಣ್ಣಿಮೆ, ಮೊಹರು, ಇತ್ಯಾದಿ ವಿಶೇಷ ದಿನಗಳಲ್ಲಿ ಮೌಢ್ಯದ ಪರಾಮಾವಧಿ ಎಂಬಂತೆ ಪ್ರಾಣಿಗಳನ್ನು ಬಲಿಕೊಡುವುದು ನಡೆಯುತ್ತದೆ. ಮಾಪುರ ತಾಯಿಯ ಜಾತ್ರೆಯಲ್ಲಿ ಪ್ರಾಣಿಯ ವಿವಿಧ ಅಂಗಾಂಗಳನ್ನು ದೇವಿಗೆ ಅರ್ಪಿಸುವುದು ವಿಶೇಷ ಎನಿಸುತ್ತದೆ. ಜನರು ತಮ್ಮ ಕಷ್ಟ ನಿವಾರಣೆಗಾಗಿ ಮುಡಿಪು ಕಟ್ಟಿಕೊಂಡು ಅದರ ನಿಮಿತ್ತ ಬೆತ್ತಲೆ ಪೂಜೆ ಸೇವೆ ಮಾಡುವುದು ಹಾಗೂ ಜೊಗಣೆಯರ ಸಂಪ್ರದಾಯ ಈ ಭಾಗದ ಮೌಢ್ಯದ ಪರಮಾವಧಿ ಎನಿಸಿವೆ. ಸಮಾಜದಲ್ಲಿರುವ ಉನ್ನತ ವರ್ಗದವರ ಹಿತಾಶಕ್ತಿಗಳು ಈ ಮೌಢ್ಯದ ಹಿಂದೆ ಕೆಲಸ ಮಾಡಿದ್ದು ಸಮಾಜದ ವಿರೋಧಿ ನೆಲೆಯಲ್ಲಿ ತಮ್ಮ ಅಸ್ತಿತ್ವ ಸ್ಥಾಪಿಸಿಕೊಂಡಿವೆ.

ಕಾದಂಬರಿಯಲ್ಲಿ ಬರುವ ಹಾದರ, ಕಳವು-ಸುಳ್ಳು ಸಮಾಜದ ವೈರುಧ್ಯ ನೆಲೆಗಳು, ಕಲ್ಬುರ್ಗಿಯಲ್ಲಿ ವಾಸಿಸುವ ಮಂದಿ ಕೂಲಿ ನಾಲಿ ಮಾಡಿ ಸಣ್ಣ ಸಣ್ಣ ಗುಡಿಸಿಲಿನಲ್ಲಿ

ವಾಸಿಸುತ್ತಿದ್ದರು. ಅತಿಯಾದ ಬಡತನ ಇವರನ್ನು ಕೂಲಿನಾಲಿ ಸಿಗದಿದ್ದಾಗ ಕಳ್ಳತನ ಮಾಡಲು ಪ್ರೇರಿಪಿಸುತ್ತಿತ್ತು. ಅಂತೆಯೇ ಇವರು ಕಳ್ಳತನ ಕೃತ್ಯಗಳಲ್ಲಿ ತೊಡಗಿ ಪೋಲೀಸನವರ ಬೂಟಿನ ರುಚಿಯನ್ನು ನೋಡುತ್ತಿದ್ದರು. ಹೀಗಾಗಿ ಪೋಲಿಸರು ಝೋಪಡಿಯ ಹೆಂಗಸರಿಗೆ ಆಗಾಗ ತೊಂದರೆ ಕೊಡುತ್ತಿದ್ದರು. ಇಲ್ಲಿ ಮೋಟಾರು ಕಳ್ಳರು, ಕಿಸೆಗಳ್ಳರು, ಪಾಕೇಟು, ಕಳ್ಳರು, ಮಾರ್‌ಗೋಳು, ಜುವ್ವಾ ಅಡಿ, ಜುವ್ವಾಕೋರರು ಮತ್ತು ಜೋಗಣೆಯರು, ಕುಂಟಲಗಿತ್ತಿಯರು, ದಲ್ಲಾಲರು ಚಾಕು ಚೂರಿ ಆಡಿಸೋ ಮಾಮೂಲಿ ಕಳ್ಳತನ ಮಾಡುತ್ತಿದ್ದರು. ಅಲ್ಲದೆ ಇಲ್ಲಿನ ಜನ ಬಡತನದಿಂದಲೋ, ಅಥವಾ ಕಾಮ ತೃಷೆಯ ಖಯ್ಯಾಲಿಯಿಂದಲೋ ಇವರು ಹಾದರತನವನ್ನು ಸಹ ಕೆಲವರು ರೂಢಿಸಿಕೊಂಡಿದ್ದರು.

ಶಿವಳ್ಳಿಯ ಕೆಲಗೇರಿಯ ಮಂದಿಯಲ್ಲಿ ಹಾದರ ಮತ್ತು ಕುಡಿತಕ್ಕೇನೋ ಕಡಿಮೆ ಇರಲಿಲ್ಲ. ಇದಕ್ಕೆ ನಿದರ್ಶನವೆಂಬಂತೆ ಜಮಾದಾರ ಮಲ್ಲಪ್ಪ ಹರೆಯದ ಕಾಲದಲ್ಲಿ ತುಂಬಾ ರಸಿಕ ಮನುಷ್ಯನಾಗಿದ್ದ. ಮಲ್ಲವ್ವನನ್ನು ಮದುವೆಯಾಗಿದ್ದರೂ. ತನ್ನ ತೆಕ್ಕೆಗೆ ಬರುವುದಿಲ್ಲವೆಂದು ಜೋಗಣೆಯರ ಕೇರಿಗೆ ಕಾಲಾಡಿಸಿದ, ಸಾನಿಯರ ಮಗ್ಗುಲಲ್ಲಿ ಕೈಯಾಡಿಸಿದ, ಕದ್ದುಮುಚ್ಚಿ, ಮೇಲ್ವರ್ಗದ ಸಣ್ಣ ಗೌಡತಿ, ಕಸ್ತೂರಿ ಬಾಯಿ, ಕುಲಕರ್ಣಿ ಮಗಳು ರತ್ನ, ಸುಬೇದಾರನ ಪೋರಿ ಮಂಜುಳಾ ಇತ್ಯಾದಿಯವರ ಜೋಡಿ ಹಾದರಕ್ಕಿಳಿದಿದ್ದ. ಇವರಲ್ಲದೆ ಗಂಡಸತ್ತ ಈರವ್ವನ ಸನಿಹ ಬಯಸಿದವನು. ಎಲ್ಲರನ್ನೂ ಬಿಟ್ಟರು ಗಂಡಸತ್ತ ಈರವ್ವನನ್ನು ಬಿಟ್ಟಿರಲಿಲ್ಲ. ಅವಳ ಜೀವನ ನಿರ್ವಹಣೆಯ ಹೊಣೆ ಹೊತ್ತು ಆಸರೆಯಾಗಿದ್ದನು.

ಮುಕದ್ಯ ಹುಟ್ಟುಕುಡುಕಿನಾಗಿದ್ದ ಜೊತೆಗೆ ರಾಂಡಬಾಜ, ದಿನಕೆರಡು ಸಲ ಮೈಥುನ ಇಲ್ಲದಿದ್ದರೆ ಅವನ ಮೈಯಲ್ಲಿ ಮೃಗ ಅಬ್ಬರಿಸುತ್ತದೆ. ಜೋಗಣೆಯರು, ಸಾನಿಯರು ಅಂತ ಹೊರಗಿನ ಹೆಣ್ಣುಗಳ ಮೈನೆಕ್ಕಲು, ಕೈಯಲ್ಲಿ ರೊಕ್ಕವಿಲ್ಲದ ವಿಕೃತ ಕಾಮಿಯಾಗಿದ್ದ. ರಾತ್ರಿಯಲ್ಲಾ ಹೆಂಡತಿ ಕಲ್ಲವ್ವನನ್ನು ತಾನು ಆಸೆ ಪಟ್ಟ ಜೋಗಣೆಯೆಂದುಕೊಂಡು ಸೂಳೆಗೇರಿಯ ಹೆಣ್ಣೆಂದು ಭಾವಿಸಿ, ಕೆತ್ತಲಿಲ್ಲ ಅವಳ ಮೈಯನ್ನು ನುಗ್ಗು ನುಗ್ಗು ಮಾಡುತ್ತಾನೆ. ಕಸುವಿದ್ದ ಕಲ್ಲವ್ವನ ಮೈ ಇವನ ಅಧಿಕ ಕಾಮುಕತನದ ಹೊಡೆತಗಳನ್ನು ಸಹಿಸಿಕೊಂಡಿತ್ತು.

ಒಂದು ದಿನ ತುಂಬಿದ ಬಸುರಿಯಾಗಿದ್ದ ಕಲ್ಲವ್ವನ ಮೇಲೆ ಆಕ್ರಮಣ ಮಾಡಿ ಬಲತ್ಕಾರದಿಂದ ಸಂಭೋಗಿಸಿ ಅವಳ ಸಾವಿಗೆ ಕಾರಣನಾಗುತ್ತಾನೆ. ಹೀಗೆ ಗಂಡನ ಅತ್ಯಾಚಾರದಿಂದ ಅಸುನೀಗುತ್ತಾಳೆ. ಈ ಕೆಳಗೇರಿ ಮಂದಿಗಳು ಒಂದೆರಡು ಮಗಿ ಸೀಂದಗಿ ಒಂದೀಸು ರೊಕ್ಕ ರೂಪಾಯಿಗಾಗಿ, ಒಂದು ಜೋಳ ಹಳ್ಳಿದೋತ್ತರ, ಅಂಗಿಗಳಿಗೆ ಆಸೆ ಬಿದ್ದು ಊರ ಸಾವುಕಾರ, ಗೌಡ, ಕುಲಕರ್ಣಿಗಳ ಮೊಗ್ಗಲು ಬಿಸಿಮಡಲಿಕ್ಕೆ ತಮ್ಮ ಹರೆಯದ ಹೆಣ್ಣುಗಳನ್ನು ಕರೆದುಕೊಂಡೊಯ್ದು, ಅವರ ಗಂಡಂದಿರೆ ಹಾದರಕ್ಕಿಳಿಸುತ್ತಿದ್ದರು. ಒಮ್ಮೊಮ್ಮೆ ಹೊಟ್ಟೆ ಹಸಿವು ತಾಳಲಾರದೆ ಹೆಣ್ಣು ಮಕ್ಕಳು ಹಾದರಕ್ಕಿಳಿಯುತ್ತಿದ್ದರು.

ಹೀಗೆ ಕೆಳಗೇರಿ ಮಂದಿಯಲ್ಲಿ ಕಳ್ಳತನ, ಸುಲಿಗೆ, ಹಾದರ ಮುಂತಾದ ಸಾಮಾಜಿಕ ವಿರೋಧಿಯಾದ ಮೌಲ್ಯಗಳು ಸಹಜವಾಗಿ ಕಂಡು ಬರುವ ಪ್ರಕ್ರಿಯೆಗಳಾಗಿದ್ದವು ಇಡಿಯಾಗಿ ಕಾದಂಬರಿಯ ತುಂಬೆಲ್ಲಾ ಕೆಳಗೇರಿಯ ಚಿತ್ರಣವೇ ಪ್ರಮುಖವಾದ್ದರಿಂದ ಅವರ ಸಮಾಜದ ಸಂಸ್ಕಾರ ಗುಣಗಳು ಮತ್ತು ಮಾನವೀಯ ಗುಣಗಳು ಅಷ್ಟಕಷ್ಟೇ ಎನಿಸುತ್ತವೆ. ಇವರಿಗೆ ಸೇಂದಿ ಬಾಡೇ ಪ್ರಿಯವಾದವುಗಳಾಗಿದ್ದವು. ಹಾಗಾಗಿ ಅಸ್ಪೃಶ್ಯ ಹಾಗೂ ಕೆಳವರ್ಗದ ಜೀವನ ಚಿತ್ರಣದ ಹಿನ್ನೆಲೆಯಲ್ಲಿ ಸಾಮಾಜಿಕ ವೈರುಧ್ಯ ಮೌಲ್ಯಗಳು ಕಂಡುಬರುತ್ತವೆ.

ಅಡಿ ಟಿಪ್ಪಣಿ :

೧. ಕನಕದಾಸರ ಕೀರ್ತನೆಗಳು, ಬಿ.ಶಿವಮೂರ್ತಿಶಾಸ್ತ್ರಿ, ಕೀರ್ತನ ಸಂಖ್ಯೆ ೧೭೭, ಪುಟ ಸಂ. ೧೬೧.

೨. ಬದುಕು – ಗೀತಾ ನಾಗಭೂಷಣ, ಲೋಹಿಯಾ ಪ್ರಕಾಶನ, ಬಳ್ಳಾರಿ, ಪುಟ ಸಂ. ೬೫.

೩. ಅದೇ ಪು. .... ಪುಟ ಸಂ. ೬೭.

೪. ಅದೇ ಪು. .... ಪುಟ ಸಂ. ೨೦೬.

೫. ಅದೇ ಪು. .... ಪುಟ ಸಂ. ೨೦೯.

೬. ಅದೇ ಪು. .... ಪುಟ ಸಂ. ೨೧೩.

೭. ಅದೇ ಪು. .... ಪುಟ ಸಂ. ೨೧೩.

೮. ಅದೇ ಪು. .... ಪುಟ ಸಂ. ೨೨೪.

೯. ಅದೇ ಪು. .... ಪುಟ ಸಂ. ೨೨೦

೧೦. ಅದೇ ಪು. .... ಪುಟ ಸಂ. ೨೩೩.

೧೧. ಅದೇ ಪು. .... ಪುಟ ಸಂ. ೨೨೫.

ಅಧ್ಯಾಯ–೬

ಬದುಕು ಕಾದಂಬರಿಯ ಭಾಷೆ, ಶೈಲಿ, ಕಲಾತ್ಮಕತೆ

ಲೇಖಕಿಯು ಕಾದಂಬರಿಯಲ್ಲಿ ಬಳಸಿರುವ ಭಾಷೆಯು ಕಾದಂಬರಿಯ ಯಶಸ್ವಿನ ಅಂಶಗಳೊಂದಾಗಿದೆ. ಉತ್ತರ ಕರ್ನಾಟಕದ ಗಂಡು ಭಾಷೆಯ ಬಳಕೆಯಿದೆ. ಭಾಷೆಯಲ್ಲಿ ಶೀಲ–ಅಶ್ಲೀಲವೆನ್ನದೆ ಪಾತ್ರಗಳ ಓಘಕ್ಕೆ ಹಸಿಹಸಿಯಾದ ಖಡಕ್ ಭಾಷೆಯ ಬಳಕೆಯಿದೆ. ಲೇಖಕಿಯ ಭಾಷೆಯನ್ನು ಕುರಿತಂತೆ. ಮಡಿವಂತರ ದೃಷ್ಟಿಯಲ್ಲಿ ಅಸಹ್ಯ ಎಂಬ ಮೂಗು ಮುರಿಯುವ ದಾಟಿಯಲ್ಲಿ ಚಿತ್ರಿಸಿದ್ದಾರೆ. ಈ ಬಗ್ಗೆ ಲೇಖಕಿಯ ದೃಷ್ಟಿಯಲ್ಲಿ ಒಂದಿನಿತು ಅಹಸ್ಯವೆನಿಸದೆ ಬದುಕಿನ ವಾಸ್ತವತೆಯನ್ನು ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ಈ ಬಗ್ಗೆ ಲೇಖಕಿ ಪ್ರಕ್ರಿಯೆಯ ಮಾತುಗಳೆಂದರೆ "ಮಹಾದೇವಿ ವರ್ಮ, ಅಮೃತಾ ಪ್ರೀತಂ, ಮಹಾಶ್ವೇತದೇವಿ, ಇವರೆಲ್ಲರೂ ತಮ್ಮ ತಮ್ಮ ಸಾಹಿತ್ಯ ವಲಯದಲ್ಲಿ ಸಾಂದರ್ಭಿಕ ಟೀಕೆಗೆ ಒಳಗಾದವರೆ."[1] ತನ್ನಲ್ಲಿ ಅಂಕುರಿಸುತ್ತಿರುವ ಪಾಪ ಭೀತಿಯಿಂದ ಮುಕ್ತವಾಗಲೆಂದೇ ಮಡಿವಂತ ಸಮಾಜವು ಭಾಷೆಯಲ್ಲಿ ಶೀಲ–ಅಶ್ಲೀಲ, ಶ್ರೇಷ್ಠ–ಕನಿಷ್ಠ, ಸಹ್ಯ–ಅಸಹ್ಯ ಎಂಬ ಗೆರೆಗಳನ್ನು ಕೊರೆಯುವ ಪ್ರಯತ್ನ ಮಾಡುತ್ತಿರುತ್ತದೆ. ಇದು ಆಯಾ ಸಮಾಜದ ಮಿತಿಯೂ ಹೌದು, ದೌರ್ಬಲ್ಯವೂ ಹೌದು. ಬಸವಣ್ಣನ ಹಿತನುಡಿಯಂತೆ ಎನಹಾನಿ ವೃದ್ಧಿ ನಿನ್ನದಯ್ಯ, ಎನ್ನ ಮಾನಪಮಾನ ನಿನ್ನದಯ್ಯ ಎನ್ನುವಂತೆ ಬರೆಯುತ್ತೇನೆ ಎನ್ನುವ ಲೇಖಕಿಯರ ಮಾತುಗಳು ಮಡಿವಂತ ಸಮಾಜವನ್ನು ನಿರ್ಲಕ್ಷ್ಯ ದೃಷ್ಟಿಯಿಂದ ಕಂಡಿದ್ದಾರೆ. ಲೇಖಕಿಯರಿಗೆ ವಚನ ಸಾಹಿತ್ಯ ಸ್ಫೂರ್ತಿ, ಹಾಗಾಗಿ ಯಾರಿಗೂ ಹೆದರದ ನೇರ ನುಡಿಯನ್ನು ನುಡಿದುಬಂಡಾಯ ಪ್ರವೃತ್ತಿಯ ವಚನಕಾರರಂತೆ ಭಾಷೆಯ ಹಿನ್ನೆಲೆಯಲ್ಲಿ ಬಂಡಾಯ ಮನೋಧರ್ಮವನ್ನು ಹೊಂದಿದ್ದಾರೆ. ಈ ಬಂಡಾಯ ಮನೋಧರ್ಮ ಸರಿಸಿ ನೋಡಿದಾಗ ಸಾಮಾನ್ಯ ಲೇಖಕಿಯರು ಬರೆಯುವಂತೆ ಇವರು ಕಂಡು ಬರುತ್ತಾರೆ. ಹಾಗಾಗಿ ಲೇಖಕಿಯರು ಬೇರೆಯವರಿಗಿಂತ ಭಿನ್ನವಾಗಿ ಕಾಣುತ್ತರೆಂದರೆ ಅವರ ಬರವಣಿಗೆಯ ಶೈಲಿಯೂ ಒಂದಾಗಿದೆ.

ಲೇಖಕಿಯ ಭಾಷೆಯ ಹಿನ್ನೆಲೆಯಲ್ಲಿ ಅರ್ಥೈಸಲು ಹೋರಟಾಗ, ಅವರು ಯಾವುದೇ ಸಾಹಿತ್ಯ ಸಿದ್ಧಾಂತ ಅಥವಾ ಭಾಷಿಕ ಪ್ರೌಢಿಮೆಯ ದಿಸೆಯಲ್ಲಿ ಯಾವುದೇ ಶಾಸ್ತ್ರೋಕ್ತ ಪರಿಕರಗಳನ್ನು ಓದಿದವರಲ್ಲ. ಮಿಗಿಲಾಗಿ ಸಾಹಿತ್ಯಿಕ ಆಕಾಂಕ್ಷೆ ಇವರಲ್ಲಿ ಇರಲಿಲ್ಲ. ಆದರೆ ಬಸವಾದಿ ಶರಣರ ಆದರ್ಶಗಳನ್ನು ರೂಢಿಸಿಕೊಂಡವರು. ತತ್ವಪದಕಾರರ ಭಾಷೆಯನ್ನು ಕಂಡು ಬದುಕಿದವರು ಹೀಗಾಗಿ 'ಕೂಡಲ ಸಂಗಮದೇವಾ ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ ಎಂದು ನಂಬಿ ಪರಿಸರದಲ್ಲಿ ಕಂಡ ಪಾತ್ರಗಳನ್ನು ಜೀವಂತವಾಗಿ ಇದ್ದಂತೆಯೇ ಚಿತ್ರಿಸಿದ್ದಾರೆ.

ಗೀತಾ ಅವರು ಯಾವುದೇ ಪೌರಾಣಿಕ, ಐತಿಹಾಸಕ ಹಿನ್ನೆಲೆಯಲ್ಲಿ ಸಾಹಿತ್ಯ ರಚಿಸಿದವರಲ್ಲ. ಅವರಲ್ಲಿ ಸೃಜನಶೀಲ ಸಾಹಿತ್ಯ ಗುಣವಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಬದುಕನ್ನು

ಅದು ಇದ್ದ ಸ್ಥಿತಿಯಲ್ಲಿಯೇ ಗ್ರಹಿಸಬೇಕೆಂಬ ಮನೋಧೋರಣೆಯುಳ್ಳ ವಾಸ್ತವವಾದಿ. ಇವರು ಕಥೆ ಕಾದಂಬರಿಗಳಲ್ಲಿ ಕಾಣಿಸಿಕೊಂಡ ಪಾತ್ರಗಳನ್ನು ಚಿತ್ರಿಸದೆ, ಅವರ ಅನುಭವದ ವ್ಯಾಪ್ತಿಯಲ್ಲಿ ಎದುರಾದ ಗಟ್ಟಿಗಿತ್ತಿ ಮಹಿಳೆಯರು ಲೇಖಕಿಯನ್ನಾಗಿಸುವಂತೆ ರೂಪಿಸಿದವರು. ಹಾಗಾಗಿ ವಾಸ್ತವ ಬದುಕಿನ ಪಾತ್ರಗಳನ್ನು ವ್ಯಕ್ತಿಗಳ ಮೂಲಕ ನುಡಿಸಲು ಹೋರಾಟಾಗ ಅವರಾಡುವ ಭಾಷೆಯೇ ಆಪ್ತತತೆಯನ್ನು ಪಡೆಯುತ್ತದೆ. ಈ ಕಾದಂಬರಿ ಬಿಡುಗಡೆಯಾದಾಗ ಹಲವಾರು ಬೆದರಿಕೆ ಕರೆಗಳು ಬಂದ ಉದಾಹರಣೆಯನ್ನು ಲೇಖಕಿಯರೇ ಹೇಳಿಕೊಂಡಿದ್ದಾರೆ.

"ನನ್ನ ವಾರಿಗೆಯವರು ಕೆಲವು ಸಂಭಾವಿತರೆನಿಸಿಕೊಂಡವರು ಮೇಡಂ ಇಂಥದೆಲ್ಲಾ ಬರ್ದ್ದಿಯಾಕ್ ರಿಸ್ಕ್ ತಗೋತಿರಿ. ಸುಮ್ನ್ನೆಛಂದನ್ ಕತಿ–ಕಾದಂಬರಿ ಬರೀರಿ. ಅಂದವ್ರು ಇದ್ರು, ಆದರ್ ಏನ್ ಮಾಡತಿ 'ನಂಗ್ ಉರಿಬರಲಿ, ಸಿರಿ ಬರಲಿ, ಆರ ಮುನಿದು ನಮ್ಮನೇನು ಮಾಡುವರು? ಊರ ಮುನಿದು ನಮ್ಮನೇನು ಮಾಡುವರು?' ಎಂಬ ವಚನಕಾರರ ಛಲಾ ಇತ್ತಲ. ಅದು ಎಲ್ಲ ರಿಸ್ಕ್‌ಗಳನ್ನು ಮೀರಿ ಬರಿಯುವಂಗ್ ಮಾಡುತ್ತಿತ್ತು. ಇನ್ನು ಕೆಲವು ಮಡಿವಂತ ವಿಮರ್ಶಕರಿಗಂತು ಇದು ಅಶ್ಲೀಲ ಭಾಷೆ, ಟೊಂಕದ ಕೆಳಗಿನ ಬದುಕು ಅಂಬಾ ಗೀಳಾ ಹತ್ತಿತ್ತು. ಅದ್ರೆ ನಮ್ ಮೊಘಲಾಯಿ ಏರಿಯಾದ ಜೀವನದ ಗರ್ದಿ ಅವ್ರಿಗೀಗೊತ್ತಿದ್ದಿಲ್ ನೋಡು. ನಮ್ ಮಂದಿ ಭಾಷಾನೆ ಹಂಗೇ. ಬಯ್ಗುಳ ಮೂಲಕವೇ ಖುಷಿಯನ್ನು, ಮೆಚ್ಚುಗೆಯನ್ನು ವ್ಯಕ್ತಪಡಿಸುವ ಶೈಲಿ ನಮ್ಮದು. ಅಲ್ಲಮ ಹೇಳಿದಂತೆ ನಮ್ಮ ಜನರಿಗೆ ಶಬ್ದಸೂತಕವಿಲ್ಲ. ಮೈಲಿಗೆ ಅಂಬಾದು, ಅಶ್ಲೀಲ ಅಂಬಾದು ಶಬ್ದದಾಗ ಇರುವುದಿಲ್ಲ. ಅದು ಮನಸ್ಸಿಗಿ ಹತ್ತಿದ ಮೈಲಿಗಿ, ತತ್ವ ಪದಗಳಲ್ಲಿ ಬಳಕೆಯಾದ ಪಕ್ಕಾ ಜವಾರಿ ಶಬ್ದಗಳನ್ನು ಅವರು ನೋಡಿಯೇ ಇಲ್ಲ. ಅದ್ರ ನಮ್ಮ ಭಾಗದ ಕೆಳಗೇರಿಯ ಮಂದಿಗಿ ಅವೆಲ್ಲಾ ಮಾಮೂಲು. ಇಲ್ಲಿಯವರಿಗೆ ಮಧ್ಯಮ, ಮೇಲ್ವರ್ಗದ ನಾಜೂಕಯ್ಯಗಳ ಬದುಕು ಮಾತುಕಥೆ ಕಾದಂಬರಿಗಳಲ್ಲಿ ಕಂಡಿದ್ದ ನಿರ್ದಿಷ್ಟ ವರ್ಗದ ಓದುಗರಿಗೆ ನನ್ ಭಾಷೆ–ಅಲ್ಲಿ ಪಡಿಮೂಡಿದ್ದ ಬದುಕು ಇವೆಲ್ಲಾ ಅಬ್ಬಾ ಅನ್ನುವಂಗ್ ಅಗ್‌ತಿದ್ದವು. ಆಗಲೂ ನಮ್ ಭಾಗದವ್ರೇ ಅನೇಕರು ಅಲಲಾ ಏನ್ ಖತರ್‌ನಾಕ್ ಬರೀತೀರಿ ಮೇಡಂ ಅಂದವ್ರು ಇದ್ರು, ಏನ್ ಮಾಡತಿರಿ ಇಂಥ ಬದುಕು–ಭಾಷೆಯನ್ನು ಓದುವುದೇ ನಿಮಗೆ ಇಷ್ಟು ಹೈರಾಣ ಅನ್‌ಸ್‌ತಿದ್ರ– ಅಂಥದೊಂದು ಒರಟ ಬದುಕನ್ನು ಸಾಗಿಸುವುದನ್ನು ಕಂಡು ಬಾಯಿ ಮುಚ್ಕೊಂಡು ಕುಳಿತಿದ್ದರಲ್ಲಾ ಅವ್ರರಿಗಿ ಏನ್ ಅನ್ ಸ್ತಿರಬೇಕು? ಅಂಥವರ ಬದುಕಿನ ಬಗೆಗೆ ಆಲೋಚನೆ ಹರಸ್‌ಬೇಕು ಅಂಬಾದೇ ನನ್ ಕಾಳಜಿ ಆಗಿತ್ತು"[3]

ಹೀಗೆ ಶೋಷಿತರ, ಕೆಳವರ್ಗದವರ ಬದುಕು ಹೇಗೊ ಭಾಷೆಯೂ ಕೂಡ ಹಾಗೆಯೇ ಇರುತ್ತದೆ. ಒಂದನೊಂದು ಬಿಟ್ಟು ಬರೆದರೆ ಬದುಕನ್ನು ದೂರವೇ ನಿಂತು ನೋಡುವ ಅಂತರ ಏರ್ಪಡಬಹುದು. ಈ ದಿಸೆಯಲ್ಲಿ ಲೇಖಕಿಯರು ಬಳಸಿರುವ ಭಾಷೆಯು ಕೆಳವರ್ಗದವರ ಹಸಿಹಸಿಯಾದ ಬದುಕಿನ ಬವಣೆಗಳನ್ನು, ಹಸಿಹಸಿಯಾದ ಭಾಷೆಯಲ್ಲಿಯೇ ಉಣಬಡಿಸಿದ್ದಾರೆ.

ಮೊದಲು ಶಿಷ್ಟ ಭಾಷೆಯಲ್ಲಿಯೇ ಬರೆಯುವ ಲೇಖಕಿಯರಿಗೆ ಗೀತಾ ಅವರ ಗುಲ್ಬರ್ಗದ ಮಣ್ಣಿನವಾಸನೆಯು ಜವಾರಿ ಕನ್ನಡವನ್ನು ಅರಗಿಸಿಕೊಳ್ಳುವುದು ಕಷ್ಟವಾಗಿತ್ತು. ಈ ವಿಶಿಷ್ಟ ಭಾಷಾ ಪ್ರಯೋಗ ಗುಲ್ಬರ್ಗದ ಜೋಪಡಿಪಟ್ಟಿ ಜನಗಳ ಬದುಕು ಬವಣೆಗಳು ಗೀತಾಅವರ ಲೇಖನಿಗೆ ಕಸುವು ನೀಡಿವೆ. ಇದರ ಭಾಷೆಯು ಅಪ್ಪಟ ಗ್ರಾಮೀಣ ಭಾಷೆಯ ಸೊಗಡಿನಲ್ಲಿ ಉತ್ತರ ಕರ್ನಾಟಕದ ಅದರಲ್ಲೂ ಹೈದರಾಬಾದ್ ಕರ್ನಾಟಕ ಕಲ್ಬುರ್ಗಿ ಜಿಲ್ಲೆಯ ಮೊಘಲಾಯಿ ಭಾಷೆಯನ್ನು ಖಡಕ್ಕಾಗಿ ಬಳಸಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಭಾಷೆಯನ್ನು ಪಸರಿಸಿದ ಕೀರ್ತಿ ಗೀತಾ ನಾಗಭೂಷಣ ಅವರಿಗೆ ಸಲ್ಲುತ್ತದೆ.

ಹಿಂದುಳಿದ ಜಿಲ್ಲೆ ಎಂದು ಕರೆಸಿಕೊಳ್ಳುವ ಕಲ್ಬುರ್ಗಿಯು ತನ್ನದೆ ಆದ ವಿಶಿಷ್ಟ ಭಾಷಾ ಸೊಗಡನ್ನು ಹೊಂದಿದೆ. ಇವರ ಭಾಷೆಯಲ್ಲಿ ಕನ್ನಡ, ತೆಲುಗು, ಮರಾಠಿ ಮತ್ತು ಉರ್ದು ಮಿಶ್ರಿತ ಪದಗಳ ಬಳಕೆಯಿದ್ದು ಗ್ರಾಮ್ಯ ದಾಟಿಯಲ್ಲಿ ಭಾಷೆಯಿಂದಾಗಿಯೇ, ಗೀತಾ ಅಟವರು ಸಮಕಾಲೀನ ಕನ್ನಡ ಸಾಹಿತ್ಯದ ಲೇಖಕಿಯರ ಸಾಲಿನಲ್ಲಿ ವಿಶಿಷ್ಟರೆನಿಸಿದ್ದಾರೆ. ನವೋದಯ ಪ್ರಗತಿಶೀಲ ನವ್ಯ ಸಾಹಿತ್ಯ ಘಟ್ಟಗಳ ಜೊತೆಯಲ್ಲಿಯೇ ಬಂದ ಬಂಡಾಯ ದಲಿತ ಸಾಹಿತ್ಯ ಚಳುವಳಿಯು ಈ ತೆರನಾದ ಸಂವೇದನೆಗಳಿಂದಾಗಿಯೇ ಗಮನ ಸೆಳೆಯುತ್ತದೆ.

ತನ್ನ ಭಾಷೆಯಡಿಯಲ್ಲಿ ಗೀತಾನಾಗಭೂಷಣ ಅವರು ಕಾದಂಬರಿಗಳಲ್ಲಿ ಸ್ತ್ರೀಪರ ನಿಲುವು ಸಮಾನತೆ, ಜಾತಿಮೌಢ್ಯತೆ, ಮೇಲ್ವರ್ಗ ಮತ್ತು ಕೆಳವರ್ಗದ ರೀತಿ–ರಿವಾಜು, ಆಚಾರ ವಿಚಾರಗಳು ಪ್ರಕೃತಿ ವರ್ಣನೆಗಳು, ರೂಢಿ–ಸಂಪ್ರದಾಯಗಳನ್ನು ಕಟ್ಟಿಕೊಟ್ಟಿದ್ದಾರೆ. ಉದಾ : ಭಲೋ ಆಗ್ಯಾದೆ ಉಪ್ಪಹಟ್ಟೆ ಹಸಿಮೆಣಸಿನಕಾಯಿ ಕರ್ದಿಲೇನು ಇದರ ಜೋಡಿ........

ವಾಾವನೆ ಸಕ್ಕೂ ವಾಾವನೆ ಕಾಯಕರೊಲಾಗಲಿ ಫರಾತಾ ಬನೂನ? ಹೊರಗಬಾರೇ.............

ಏಃ ಮಾಂವನೇ ಕ್ವಾಣಾನೂ ಇಲ್ಲಾಃ ಎಮ್ಮಿನೂ ಇಲ್ಲಾ. ಬಾರೆ... ನಾವಿದ್ದೀವಿ ಈ ಝೋಪಡಿ ಪಟ್ಟಾಗಿನ ತೀನದೇವಿಗಳು ಮೂರು ಮಂದಿ ಗೆಳತೇರೂ.......

ಹೀಗೆ ಮರಾಠಿ ಮಿಶ್ರಿತ ಕನ್ನಡ ಭಾಷೆಯ ಪದಗಳನ್ನು ಕಲ್ಬುರ್ಗಿಯ ಝೋಪಡಿಯಲ್ಲಿ ವಾಸಿಸುವ ಸಕ್ಕೂಬಾಯಿ ಹೇಳುತ್ತಾರೆ. ಲೇಖಕಿ ಎಲ್ಲಿಯೂ ವಾಕ್ಯಕ್ಕೆ ಧಕ್ಕೆ ಬರದಂತೆ ಸಂಭಾಳಿಸಿಕೊಂಡು ಬಂದಿದ್ದಾರೆ.

"ಥತ್ ನಿನ್ ಛಿನಾಲೀ....... ದಿನಾ ಎಲ್ಲಿ ಬರ್ತೀನಿಗಃ ಬೋಸುಡಿ? ಸುಳ್ಳ ಹೇಳ್ತ್ಯಾಃ ಕಾಳೀ......"

"ಏ ಬಿಡೋ ಏನ್ಹೇಳೀ..... ಅಂವಗೊಬ್ಬ ಹರ್‍ಯದ ಮಗಾ ಹಾನಂತಲ್ಲ ಈಟಿಲ್ಲಾ ಅಗಾ ತನಕಾ ಅಂಥಾಯೇನು ಉದ್ದು ಹುರಿತಿದ್ದೇನೇನು? ನನಗೆಲ್ಲಾ ಗೊತ್ತದಾ ಬೀಡು ಎಲ್ಲೋರೂ ಭಾಢತಿಲ್ಲಕ್ಕ ಬಿದ್ದೀರ್ತಾರ ಮಕ್ಕಳೂ..."

ಇಂತಹ ಜವಾರಿ ಶೈಲಿಯ ಭಾಷೆ ಮತ್ತು ಕೆಳಮಂದಿನ ಖುಲ್ಲಾ ಖುಲ್ಲಾ ಬದುಕಿನ ಚಿತ್ರಣಗಳು ಗೀತಾ ಅವರ ಕಾದಂಬರಿಯಲ್ಲಿ ಎದ್ದು ಕಾಣುತ್ತಿದೆ. ಹೀಗೆ ಗೀತಾ ಅವರ ಬದುಕು ಕಾದಂಬರಿಯು ಒಂದು ಊರಿನ ಕೆಳವರ್ಗದ ಮಂದಿಯ ಕತೆ. ಇದು ಮೇಲ್ನೋಟಕ್ಕೆ ಮಲ್ಲಪ್ಪ ಜಮಾದಾರನ ಮನೆಯ ಕತೆಯಂತೆ ಕಂಡರೂ ಅದರ ಸುತ್ತ ಕೆಳವರ್ಗದ, ದಲಿತರ, ಬಡವರ ನಿರ್ಗತಿಕರ ಬದುಕಿನ ಧಾರುಣ ಚಿತ್ರಗಳ ಪದರುಗಳನ್ನು ತಮ್ಮ ನೆಲದ ಭಾಷೆಯಲ್ಲಿಯೇ ಚಿತ್ರಿಸಿದ್ದಾರೆ. ನಿದರ್ಶನವೆಂಬಂತೆ ಶಿವಳ್ಳಿ ಹೇಳುವುದು ಸತಾವಿ ಸವಾರಿ. ಖತಲ್ ಸಾಬನ ಸವಾರ‍್ರಿ, ಸತಾವಿ ದಿನಬೆಳಗಿನ ಜಾವದಲ್ಲಿ ಖತಲ್ ಸಾಹೇಬನೆ ಜಾಗೃತದೇವರು. ನಾಳೆ ಬೆಳಗಿನ ನಸುಕಿನಲ್ಲಿ ಸವಾರಿ ಹೇಳುತ್ತದೆ. ಅಂದಾಗ ಇಂದೆ ಮಧ್ಯಾಹ್ನದಿಂದ ನೈವೇದ್ಯ ಬರುವುದು ಶುರುವಾಗುತ್ತದೆ. ಊರ ಹಿಂದು ಮುಸ್ಲಿಂ, ಎಲ್ಲರೂ ಕೂಡಿ ಹಬ್ಬ ಆಚರಿಸುತ್ತಿದ್ದರು. ಖತಲ್ ಸಾಬ್ ದೇವರ ಸವಾರಿ ಬರುವುದು ಮಲ್ಲಪ್ಪ ಜಮಾದಾರನ ಸಂಬಂಧಿಕನಾಗಿದ್ದ ನಾಗಪ್ಪನ ಮೈಯಲ್ಲಿ ಪ್ರತಿವರ್ಷ ಈ ಖತಲ್ ಸಾಬ್ ದೇವರಿಗೆ ಮಲ್ಲಪ್ಪನ ಮನೆಯಿಂದ ಒಂದು ಬಲಿತ ಹೋತದ 'ಕಂದೂರಿ' ನೈವೇದ್ಯ ಮಾಮೂಲಿಯಾದ ಹರಕೆಯಾಗಿತ್ತು.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಪರಂಪರಾಗತವಾಗಿ ಆಚರಿಸಿಕೊಂಡು ಬರುತ್ತಿರುವ ಮೋಹರಂ ಹಬ್ಬದ ವಿವರಣೆ ಇಲ್ಲಿದೆ. ಖತಲ್ ಸಾಬ್ ಎಂಬ ದೇವರು, ಸಾವಿತ ಮದ್ಯಾಣ ಕಂದೂರಿ, ಮುಂತಾದ ಉರ್ದುಮಯ ದೇಶಿ ಶಬ್ದಗಳು ಮೋಫಲಾಯಿ ಏರಿಯಾದ ಭಾಷಾ ವೈಶಿಷ್ಟ್ಯವನ್ನು ಬಿಂಬಿಸುತ್ತವೆ. ಇದಕ್ಕಿಂತ ಮುಖ್ಯವಾಗಿ ಆಚರಿಸಿಕೊಂಡು ಬರುತ್ತಿರುವ ಸಾಂಸ್ಕೃತಿಕ ವಿದ್ಯಾಮಾನಗಳಿಂದಾಗಿಯೂ ಈ ವಿವರಣೆ ಗಮನ ಸೆಳೆಯುತ್ತವೆ. ಗೀತಾ ಅವರು ತಮ್ಮ ಕಾದಂಬರಿಯಲ್ಲಿ ಬಳಸಿದ ಭಾಷೆ ಅಪ್ಪಟ ಜವಾರಿ. ಅಂದರೆ ನಿರಂತರ ೬೦೦ ವರ್ಷಗಳವರೆಗೆ ಉರ್ದು ಭಾಷಿಕ ವಲಯದಲ್ಲಿ ಹರಳಿದ ದೇಶಿ ಬದುಕಿನ ವಿವರಗಳು ಮೈದಾಳಿ ನಿಂತಿವೆ.

ತುಂಬಾ ಕಷ್ಟಪಟ್ಟು ಅಕ್ಷರಜ್ಞಾನ ಪಡೆದುಕೊಂಡ ಗೀತಾ ಅವರು ಬರವಣಿಗೆಗೆ ತೊಡಗಿಸಿಕೊಂಡಿದ್ದೆ ಸೋಜಿಗದ ಸಂಗತಿ. ಅದರಲ್ಲೂ ಈ ಭಾಗದ ಹಿಂದುಳಿದ ಮಹಿಳೆಯರ ಶೋಷಣಾಮಯವಾದ ಬದುಕನ್ನು ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದು, ಚಾರಿತ್ರಕವಾಗಿ ತುಂಬಾ ಮಹತ್ವದ ಸಂಗತಿಯಾಗಿದೆ. ಗೀತಾ ಅವರು ಮೊದಮೊದಲು ಕನ್ನಡದ ಇತರ ಲೇಖಕಿಯರಂತೆ ಗ್ರಾಂಥಿಕ ಭಾಷೆಯಲ್ಲಿಯೇ ಪ್ರೀತಿ-ಪ್ರಣಯ. ಹಸಿಹಸಿ ಪ್ರೇಮಗಳ ಕಥೆಯ ಸುತ್ತಲೂ ಗಿರಕಿ ಹೊಡೆದದ್ದು ಇದೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಗುರ್ತಿಸಿಕೊಳ್ಳಬೇಕು ಎಂಬ ಹಂಬಲದಲ್ಲಿ, ಈ ತೆರೆನಾದ ಕೃತಿಗಳನ್ನು ರಚಿಸುವುದಾಗಿ ಸ್ವತಃ ಲೇಖಕಿಯೇ ಹಲವಾರು ಸಂದರ್ಭದಲ್ಲಿ ಸ್ಪಷ್ಟಪಡಿಸಿದ್ದಾರೆ. ಆದರೆ ಸ್ಥಳೀಯ ಶೋಷಿತ ಮಹಿಳೆಯ ಬದುಕನ್ನ ಕುರಿತು ಬರೆಯಬೇಕೆಂಬ ಛಲದೊಂದಿಗೆ, ಪಾಳೆಗಾರಿಕೆ ಕಾರ್ಯವನ್ನು ಬಯಲಿಗೆಳೆಯಬೇಕೆಂಬ ಹಠದೊಂದಿಗೆ

ಪುರುಷ ಪ್ರಧಾನ ವ್ಯಸ್ಥೆಯು ಒಡ್ಡಿದ ದಬ್ಬಾಳಿಕೆಯನ್ನು ಧಿಕ್ಕರಿಸುವ ಮನೋಭೂಮಿಕೆಯ ಕಾರಣವಾಗಿ ಸ್ಥಳೀಯ ಭಾಷಾ ಸೊಗಡನ್ನು ದುಡಿಸಿಕೊಳ್ಳುವ ನಿಲುವಿಗೆ ಬದ್ಧರಾಗಿ ನಿಂತಿದ್ದಾರೆ. ನಾಡಿನ ಸೌಂದರ್ಯ ಪರಂಪರೆಯನ್ನು ಜನ ಸಂಸ್ಕೃತಿಯನ್ನು ದಲಿತ ಮಹಿಳೆ ಮತ್ತು ನೊಂದವರ ಜೀವನವನ್ನು ನಿಷ್ಕಲ್ಮಷ ಪ್ರೇಮವನ್ನು ಕಟ್ಟಿಕೊಡುವಾಗೆಲ್ಲ ಗೀತಾ ಅವರ ಕೈಯಲ್ಲಿ ಈ ನೆಲದ ಭಾಷೆಯು ಧೀಮಂತಿಕೆಯಿಂದ ಅರಳುತ್ತದೆ.

ಭಾಷಾಶಾಸ್ತ್ರ ಕುರಿತು ವೈಜ್ಞಾನಿಕ ಅಧ್ಯಯನಗಳು ಭಾರತದಲ್ಲಿ ನೆಲೆ ಕಂಡಿದ್ದು, ತೀರ ಇತ್ತೀಚೆಗೆ ಅದು ಆಧುನಿಕ ಅಂತರ್‌ಶಾಸ್ತ್ರೀಯ ಜ್ಞಾನ ಶಾಖೆಗಳು ವಿಸ್ತರಿಸಿಕೊಂಡಿರುವ ಸಂದರ್ಭದಲ್ಲಿ, ಲೇಖಕಿಗೆ ಭಾಷಾ ಪ್ರಯೋಗಗಳ ಬಗ್ಗೆ ಇದ್ದ ಮಡಿವಂತೆ ಧೋರಣೆಗೆ ಇಂದು ಸಕಾರಣವಾಗಿಯೇ ಬದಲಾಗಿದೆ ನಾವು ಬಳಸುವ ಭಾಷೆಗಾಗಿ ಉಚ್ಚ–ನೀಚ, ಸುಶಿಕ್ಷಿತ–ಅಶಿಕ್ಷಿತ, ಶೀಲ–ಅಶ್ಲೀಲ, ಶ್ರೇಷ್ಠ–ಕನಿಷ್ಠ ಎಂಬ ವಿಭಾಗಿಕರಣವು ಭಾಷಾ ರಾಜಕಾರಣದ ತಂತ್ರಗಾರಿಕೆಯಾಗಿಯೇ ಮುಂದುವರೆದುಕೊಂಡು ಬಂದಿರುವುದನ್ನು ಕಾಣುತ್ತೇವೆ. ಭಾಷೆಯಲ್ಲಿ ಸಾವಾಜಿಕ ವರ್ಗೀಕರಣವನ್ನು ನಾವು ಕಾಣುತ್ತೇವೆ. ಸಮುದಾಯಗಳು ತಮ್ಮ ತಮ್ಮ ಸಾಮಾಜಿಕ ಆರ್ಥಿಕ, ಸಾಂಸ್ಕೃತಿಕ, ರಾಜಕೀಯ, ಹಿನ್ನೆಲೆಯೊಂದಿಗೆ ಭಾಷಾ ಪ್ರಭೇದಗಳನ್ನು ಅಭಿವೃದ್ಧಿ ಪಡಿಸಿಕೊಂಡಿರುತ್ತವೆ. ಹೀಗಾಗಿಯೇ ಪ್ರತಿಯೊಂದು ಭಾಷಾ ಶೈಲಿಯು ಜನಾಂಗವೊಂದರ ಸಾಂಸ್ಕೃತಿಕ ಬದುಕಿನ ಪ್ರತಿಬಿಂಬವಾಗಿಯೇ ಆಕಾರ ತಾಳಿರುತ್ತದೆ. ಗೀತಾ ಅವರು ತಮ್ಮ ಕೃತಿಗಳಿಗೆ ಧಾತುವಾಗಿ ಬಳಸಿಕೊಂಡಿರುವ ಭಾಷೆಯಾದರೂ ಹೈದರಾಬಾದ್ ಕರ್ನಾಟಕ ಝೋಪಡಿಯಲ್ಲಿ ವಾಸಿಸುತ್ತಿರುವ ಹಾಗೂ ತೀರ ಒಳಗ್ರಾಮಗಳಲ್ಲಿ ವಾಸಿಸುತ್ತಿರುವ ಜನತೆಯ ಭಾಷೆ "ಥತ್ ನಿನ ನಿನಾಲಿ ದಿನಾ ಎಲ್ಲಿ ಬರ್ತೀನಿ ಈಗ ಬೋಸುಡಿ? ಸೂಳ್ಯೆ ಹೇಳ್ತ್ಯಾ, ಕಾಳೀ, ನಿನ್ನ ಗಲ್ಲ ನಾ ಕಡಲಿ.." ನಾಗವಾಯಿ ಬೆಂಕಿಗೆ ಹಾಕಿದ ಎಳ್ಳಿನಂತೆ ಸಿಡಿದಳು" ಈ ಸಾಲುಗಳು ಕಾದಂಬರಿಯಲ್ಲಿನ ಶಿವಳ್ಳಿ ಗ್ರಾಮದ ವಯೋವೃದ್ಧೆಯೊಬ್ಬಳು ಆಡುವ ಮಾತುಗಳಾಗಿವೆ. ನಾಗವಾಯಿ ಎಂಬ ಈ ವೃದ್ಧೆ ತನ್ನನ್ನು ಮಾತನಾಡಿಸಿದ ಕಾಳಿ ಎಂಬ ಹರೆಯದ ಹುಡುಗಿಗೆ ತುಂಬಾ ಪ್ರೀತಿಯಿಂದ ಸಲುಗೆಯಿಂದ ಹೇಳುವ ಮಾತುಗಳಾಗಿವೆ. ಈ ಸಾಲಿನಲ್ಲಿ ಛೀನಾಲಿ ಬೋಸುಡಿ ಎಂಬ ತೀರ ಒರಟು ಬೈಗುಳ ಎಡೆಪಡೆದುಕೊಂಡಿದೆ. ಮೇಲ್ವರ್ಗದ ಮಡಿವಂತ ಜನರು ಇಂಥ ಶಬ್ದಗಳನ್ನು ಕೇಳಲು ಹೇಳಲು ಹಿಂಜರಿಯುವಂತವು. ಆದರೆ ನಮ್ಮ ಅನೇಕ ಗ್ರಾಮೀಣ ಪ್ರದೇಶದಲ್ಲಿ ತಮ್ಮ ಖುಷಿಯನ್ನು, ಆತ್ಮೀಯತೆಯನ್ನು, ಅಥಮ್ಯ ಪ್ರೀತಿಯನ್ನು ಮತ್ತು ಸಲುಗೆಯನ್ನು ವ್ಯಕ್ತಪಡಿಸಲು ಬಳಸುವ ಸಹಜ ಶಬ್ಧಗಳಿವು. ಆದರಿಂದಲೇ ಇದನ್ನು ಪಕ್ಕಾ ಜವಾರಿ ಭಾಷೆಯೆಂದು ಕರೆಯಲಾಗಿದೆ. ಈ ಭಾಗದ ತತ್ವಪದ ಕಾರರು ಬಳಸುವ ಭಾಷೆಯು ಇಂತಹದ್ದೆ ಉರ್ದು ಮಿಶ್ರಿತ ಕನ್ನಡದಾಗಿದೆ.

"ಗರ್ಜಿನ ಮಾತು ಆಡುವುದ್ಯಾಕೋ...

ನಿಜಗುರ್ತದ ಪರ್ಜಿಗೆ ಕೈಹಾಕೋ...

ಅವರ ಮರ್ಜಿ ತಿಳಿದು ಬಾಣ ಬಿಡಬೇಕೋ..."[3]

ಈ ಪದ್ಯದ ನುಡಿಯಲ್ಲಿ ಬಳಕೆಯಾದ ಗರ್ಜಿ, ಅರ್ಜಿ, ಮರ್ಜಿ, ಪರ್ಜಿ, ಮುಂತಾದ ಪದಗಳು ಉರ್ದುವಿನಿಂದ ಬಂದಿವೆ. ಇನ್ನೊಂದೆಡೆ ಮರಾಠಿ ಭಾಷಿಕರ ಒಡನಾಟದಿಂದ ಮರಾಠಿ ಪದಗಳು ಆಂಧ್ರ ನೆರೆಯಲ್ಲಿರುವುದರಿಂದ ಕೆಲವು ತೆಲಗು ಪದಗಳು ಸಮಸಮವಾಗಿ ಸೇರಿಕೊಂಡಿವೆ. ವಿಶೇಷವಾಗಿ ಅಂಕಿ ಸಂಖ್ಯೆಗಳು ಮರಾಠಿ ಭಾಷೆಯಿಂದ ಇಲ್ಲಿನವರು ಎರವಲು ಪಡೆದುಕೊಂಡು ಬಳಸುವುದುಂಟು, ಅದರೊಟ್ಟಿಗೆ ದಗದಾಕ ಜುಲ್ಮ, ಧಾವಂತಿಕೆ, ತೋಲ, ಮುಂತಾದಿ ನೂರಾರು ದೇಶಿ ಪದಗಳನ್ನು ಬಳಸುವುದುಂಟು, ಹೀಗಾಗಿ ಕಲ್ಬುರ್ಗಿ ಕನ್ನಡದ ವೈಖರಿಯೇ ತುಂಬಾ ವಿಭಿನ್ನ ಮತ್ತು ರೂಚಕವಾದುದು. ಗೀತಾ ಅವರು ತಮ್ಮ ಕೃತಿಗಳುದ್ದಕ್ಕೂ ಈ ತೆರೆದ ಭಾಷೆ ಬಳಸಿ ಓದುಗರಲ್ಲಿ ಅಪ್ತತೆಯ ಭಾವನೆಯನ್ನು ಮೂಡಿಸಿದ್ದಾರೆ.

ಗೀತಾ ಅವರು ಜನಭಾಷೆಯನ್ನು ಆಡಿದಂತೆ ಹಾಗೆಯೇ ಹಿಡಿದಿರುವ ಪರ ಹೀಗಿದೆ. "ರಾತ್ರೀಲಿ ಗುಡಸ್ಯಾಗೆಲ್ಲಿ ದೀಪ ಹಚ್ಚಿಡ್ತಾರವ್ವ ಬೆಳಗಗಾ ತನಕ ನಮ್ಮ ಕೇರಿ ಮಂದಿ ಬೆಳಗಾಗ ದೀಪ ಉರಿಸಿ ಇಟ್ಕೊಳ್ಳೋಟು ಘಾಸಲೆ ಟಿಣ್ಣೆ ಎಲ್ಲಿಂದ ತರಬೇಕವ್ವಾ........ ಉಂಡು ಮನ್ಯಾಗಿನ ದೀಪಗೋಳು.. ಆರಿಬಿಡ್ತಾವ... ಇದೆಲ್ಲಾ ಏನೋ ಇಚಿತ್ತರ ಅಗ್ಲಕತ್ತಾದೇ ತಾಯೀ... ಪಾಪ ಪರಪ್ಪ ಬಿಡು ಮನುಶ್ಯಾ.... ಮನ್ಯಾಗಿದ್ದದೆಲ್ಲಾ ಸುಟ್ಟು ಬೂದಿಯಾಯಿತು."[4] ಈ ವಾಕ್ಯಗಳು ಅಡುನುಡಿಯ ಜೊತೆಗೆ ದಿನಬಳಕೆಯ ಭಾಷೆ ಸರಾಗವಾಗಿ ಹರಿದು ಬರುತ್ತದೆ. ನಮ್ಮ ಜನ ಇಂದಿಗೂ ಸುತ್ತ ಮುತ್ತಲಿನ ಭಾಷೆಗಳನ್ನು ತಮ್ಮ ಜೀವನದ ನಡೆಯಲ್ಲಿ ಮಾತೃ ಭಾಷೆಯಂತೆ ಬಳಸವುದನೆಲ್ಲ ಕಾಣುತ್ತೇವೆ.

ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಜನಪ್ರಿಯವಾದ ಭಾಷೆ ಯಾರಿಗೂ ಅರ್ಥವಾಗುವುದಿಲ್ಲ ಎಂಬುವಂತಿಲ್ಲ. ಯಾಕೆಂದರೆ ಇದು ಜನ ಬದುಕಿನ ದಿನ ನಿತ್ಯದ ಭಾಷೆ, ಈಗಾಗಿ ಗೀತಾ ನಾಗಭೂಷಣ ಅವರು ಈ ಭಾಷೆ ಸೊಗಡನ್ನು ಅಷ್ಟೇ ಗಟ್ಟಿಯಾಗಿ ಹಿಡಿದಿಟ್ಟಿದ್ದಾರೆ.

ಕಲ್ಬುರ್ಗಿಯ ವಿಶಿಷ್ಟ ಕನ್ನಡವನ್ನು ಗೀತಾ ಅವರಷ್ಟು ಹದವಾಗಿ ದುಡಿಸಿಕೊಂಡವರು ಮತ್ತೊಬ್ಬ ಲೇಖಕಿಯರಿಲ್ಲ. ಜವಾರಿ ಮೆಣಸಿನ ಕಾಯಿಯಂತೆ ತುಂಬಾ ಖಾರವಾದ ಭಾಷೆ ಅವರದ್ದು ಚುರುಕು ಮುಟ್ಟಿಸುವ ಇದು ಅನ್ಯರಿಗೆ ಒರಟು ಅನಿಸುವುದಿಲ್ಲ.

ಕಾದಂಬರಿಯಲ್ಲಿ ಉದ್ದಕ್ಕೂ ಕಾಣಿಸಿಕೊಳ್ಳುವ ಸೇಂದಿ ಖಾನೆ ಮಾಂಸದ ಅಡುಗೆ, ಉರಿದ ಮೀನು, ಕರಿದ ತತ್ತಿ, ಬಾಳಕ, ಖಂಡದ ಪಲ್ಯ, ಈ ಎಲ್ಲ ವಿವರಗಳು ಇಲ್ಲಿ ಜೀವಂತವಾಗಿವೆ. ಕಾಮ ಪ್ರೇಮ ಹಾದರದ ವರ್ಣನೆಗಳು ಕಂಡು ಬಂದರೂ, ಅವು ಎಲ್ಲಿಯೂ ಅಶ್ಲೀಲ ಎನಿಸುವುದಿಲ್ಲ. ತಮ್ಮ ಅನುಭವಕ್ಕೆ ದಕ್ಕಿರುವುದನೆಲ್ಲಾ, ಅದರಲ್ಲೂ ಸಂಸ್ಕೃತಿಕ ಲೋಕದ ಸಂಗತಿಗಳನ್ನು ಅಕ್ಷರಗಳಲ್ಲಿ ಬೆರಗು ಮೂಡಿಸುವ ಭಾಷಾ ಕಟ್ಟಿನಲ್ಲಿ

ಜೋಡಿಸುವ ಕಲಾತ್ಮಕತೆ ಅನನ್ಯವಾದುದ್ದು.

ಆಡು ಮಾತನ್ನು ಸಮರ್ಥವಾಗಿ ಬಳಸುವುದರಲ್ಲಿ ಗೀತಾ ನಾಗಭೂಷಣ ಅವರನ್ನು ಬಿಟ್ಟರೆ ಇನ್ನೊಬರಿಲ್ಲ. ಜನಪದ ನುಡಿಗಟ್ಟು, ವಾಕ್ಯ, ಗಾಧೆ, ಒಗಟು, ಹಾಡು ಇವು ಉರ್ದು ಭಾಷೆಯ ಪದ ಪುಂಜಗಳನ್ನು ಬಳಸುವುದರ ಮೂಲಕ ಈ ಬದುಕು ಕಾದಂಬರಿಯ ಸತ್ವ, ಶಕ್ತಿ ಸೊಬಗು ಹೆಚ್ಚಾಗಿದೆ. ಇದಕ್ಕೆ ಕೆಲವು ಕಲಾತ್ಮಕವಾಗಿ ಬಂದುದಕ್ಕೆ ಉದಾ: 'ಗುಡ್ಡದ ನೆತ್ತಿಯ ಮೇಲೆ ಆಕಾಶವೆಂಬೋ ಆಕಾಶದ ಮಾರಿಯೆಲ್ಲಾ, ಜಾಜ ಬರೆದಂಗಾಗಿ ಕೆಂಪಗೆ ಲಾಲ್ ಆಗಿತ್ತು. ತಣ್ಣಗೆ ಅವಾಜು ಮಾಡುತ್ತಾ ಬೀಸಿ ಬರೋ ಅಡವಿ ಮ್ಯಾಲಿನ ಗಾಳಿ ಆ ಗುಡ್ಡದ ತಂಪೆರಚಿ ಕೆಳಗಿಳಿದು, ಸೇಂದಿ ಬನದ ಕಡೆ ನಡೆದಿತ್ತು. ನೋಡು ನೋಡುತ್ತಿದ್ದಂಗೆ ಮುಗಿಲ ಮಾರಿಯ ಕೆಂಪಿನಲ್ಲಿ ಅಲ್ಲೀಟು ಹಳದಿ, ಇಲ್ಲೀಟು ಕೇಸರಿ, ಮತ್ತೀಟ್ಟು, ಬಂಗಾರದ ಬಣ್ಣ ಕಲಸಿದಂಗಾಗಿ ಬೆಳಗು ಹುಟ್ಟಿ ಕೈ ಕಾಲು ಬಡಿಯುತ್ತಿತ್ತು. ಕರಿಬಿಳಿಮೋಡದ ಸಂದಿಗೊಂದಿಯಲ್ಲಿ ಕೈ ಕಾಲು ಚಾಚುತ್ತಾ, ಬೆಳಗು ಬಲಿಯುತ್ತ, ಕೆಳಗಿಳಿಯುತ್ತಾ ಗುಡ್ಡದ ಮೈಮೇಲಿನ ಗಿಡಗಳ ತಲೆಯ ಮೇಲೆ ಚಿನ್ನದ ನೀರು ಚಿಮುಕಿಸುತ್ತ ಹಂಗೆ ತುಸು ಕೆಳಜಾರಿ ಗುಡ್ಡ ಪಾದಕ್ಕಂಟಿಕೊಂಡೇ ಮೈ ತುಂಬಿಕಿಂಡು ನಿಂತಿದ್ದ ಶಿವಳ್ಳಿಯ ಮನೆ. ಗುಡಿಸಲುಗಳ ನೆತ್ತಿಯ ಮೇಲೆ ಝುಲ್ಲನೆ ಹರಿದುಬಂದಿತು.'

ಹೀಗೆ ವಿಶಿಷ್ಟವಾದ ಪ್ರಾದೇಶಿಕ ಪದಗಳಿಂದ, ಉರ್ದು ಭಾಷೆ ಎರಕದಿಂದ ಜನಪದ ನುಡಿಗಟ್ಟುಗಳಿಂದ ಮಾತನಾಡಿದಂತೆ, ಬರುವ ಸಹಜವಾಗಿ ಮಾಡಿದಂತಿರುವ ರೀತಿಯಿಂದ ಗೀತಾ ಅವರ ಕಾದಂಬರಿ ಜೀವಂತವಾಗಿರಲು ಕಾರಣವಾಗಿದೆ.

ಗೀತಾ ಅವರ ಬದುಕು ಕಾದಂಬರಿಯ ಬರವಣಿಗೆಯು ಓಘ ನದಿ ಹರಿದಂತೆ ಸರಾಗವಾಗಿ ಒಂದಕ್ಕೊಂದು ಸಾವಯವ ಸಂಬಂಧ ಹೊಂದಿ ಯಾವ ಸಿದ್ಧಾಂತಕ್ಕೂ ಕಟ್ಟು ಬೀಳದೆ, ಕಾರ್ಡು ಬೋರ್ಡಾಗದೆ ಬದುಕು ತಾನೇ ತಾನಾಗಿ ಸಾಗುವಂತೆ ಅವರ ಶೈಲಿ ಮಗು ಹುಟ್ಟು, ಬಾಲ್ಯ, ಯೌವನ, ಪ್ರೌಢತ್ವ ಹೊಂದುವಂತೆ ಬೆಳೆದು ಬಂದಿದ್ದು, ಇವರ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಶೀಲವೆ "Style is the man" ಎಂಬ ಮಾತನ್ನು ಇಲ್ಲಿ ನೋಡಬಹುದು. ಗೀತಾ ಅವರ ಕಥನ ಶೈಲಿ ಬದುಕಿನೊಂದಿಗೆ ಹರಿದು ಬಂದಿದೆ.

ಉದಾ: ಗುರುಲಿಂಗಪ್ಪ ಸಾಹುಕಾರನ ಮಗ ಲಿಂಗರಾಜು ಮತ್ತು ಜಮಾದಾರ ಮಲ್ಲಪ್ಪನ ಮಗಳು ಕಾಶೀ ಒಬ್ಬರಿಗೊಬ್ಬರೂ ಪ್ರೀತಿಸಿದರೂ ಮೊದಲಿಗೆ ಆ ಹಳ್ಳಿಯ ವಾತಾವರಣದಲ್ಲಿ ಪ್ರತಿಭಟಿಸಲಾರದಕ್ಕೆ ಇಬ್ಬರು ಬೇರೆ ಬೇರೆ ಕಡೆಗೆ ಲಗ್ನವಾಗಿ ಕೊನೆಗೆ ಗುರುಲಿಂಗಪ್ಪ ಸಾಹುಕಾರ ಸತ್ತ ಬಳಿಕ ಮನೆಯ ಅಧಿಕಾರ ತನ್ನ ಕೈಗೆ ಬಂದಾಗ ಲಿಂಗರಾಜು ಕಾಶಿ ಒಂದಾದುದ್ದು.

ಹೀಗೆ ಇಡೀ ಕಾದಂಬರಿ ಲಿಂಗರಾಜು ಕಾಶಿ ಸಂಬಂಧದಿಂದ ಕೂಡಿದ್ದು, ಇದರ ಸುತ್ತಮುತ್ತ ಉಳಿದೆಲ್ಲಾ ಪಾತ್ರಗಳು ಕೆಲಸ ಮಾಡುತ್ತವೆ. ಅವು ಸಮಯಕ್ಕೆ ತಕ್ಕಂತೆ ಪ್ರತಿಕ್ರಿಯೆ ನೀಡುವುದು ಗೀತಾ ಅವರ ಕಥನ ಶೈಲಿಯಾಗಿದೆ.

ಹೀಗೆ ಕಾದಂಬರಿಯಲ್ಲಿ ಲೇಖಕಿಯು ಬಳಸಿರುವ ವಿಶಿಷ್ಟ ಭಾಷಾ ಪ್ರಯೋಗ ಕಾದಂಬರಿಗೆ ಅನನ್ಯತೆಯನ್ನು ತಂದುಕೊಟ್ಟಿದೆ. ಈ ಭಾಷಾ ಬಳುಕಿನ ಜೊತೆ ಜೊತೆಗೆ ಕಥನ ಶೈಲಿಯು ಒಂದುಗೂಡಿ ಕಾದಂಬರಿಯ ಯಶಸ್ವಿಗೆ ಕಾರಣವಾಗಿದೆ. ಇಲ್ಲಿನ ವಸ್ತು ವೈವಿಧ್ಯ, ಭಾಷೆಯ ಸೊಗಡು, ಸರಾಗವಾಗಿ ಸಾಗುವ ಕಥನ ಶೈಲಿ, ಈ ಎಲ್ಲಾ ಮಿಶ್ರಣಗಳ ಹರವಿನಿಂದ ರಸಾನುಭವದ ಮೂಸೆಯಲ್ಲಿ ಮೂಡಿಬಂದು, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಗೌರವಕ್ಕೆ ಕಾರಣವಾಗಿರುವುದು, 'ಬದುಕು' ಕಾದಂಬರಿಯು ಹೆಗ್ಗಳಿಕೆಯಾಗಿದೆ.

ಅಡಿ ಟಿಪ್ಪಣಿ :

೧. ಗೀತಾ ನಾಗಭೂಷಣ ಮಹಿಳಾ ಮಾರ್ಗ – ಸಂ. ಡಾ. ಕೆ.ಷರೀಪ, ಬಸವರಾಜ ಸೂಳಿಬಾವಿ, ಪು. ೯೩.

೨. ಅದೇ ಪು. .... ಪುಟ ಸಂ. ೪೧.

೩. ಅದೇ ಪು. .... ಪುಟ ಸಂ. ೯೫.

೪. ಬದುಕು – ಗೀತಾ ನಾಗಭೂಷಣ, ಲೋಹಿಯಾ ಪ್ರಕಾಶನ, ಬಳ್ಳಾರಿ, ಪುಟ ಸಂ. ೨೧೭.

ಅಧ್ಯಾಯ-೭

ಉಪಸಂಹಾರ

ಕನ್ನಡ ಕಥಾಸಾಹಿತ್ಯದಲ್ಲಿ ಗೀತಾನಾಗಭೂಷಣ ಅವರ ಕೊಡುಗೆ ಅನನ್ಯವಾದುದು. ಅವರ ಬರವಣಿಗೆಗಳು ಕನ್ನಡ ಸಾಹಿತ್ಯದ ವಿಸ್ತಾರವನ್ನು ಹೆಚ್ಚಿಸಿವೆ. ಸಾಹಿತ್ಯದಲ್ಲಿ ಇದುವರೆಗೆ ದಾಖಲಾಗದೆ ಹೋಗಿರುವ ಸಮಾಜದ ಅಂಚಿನಲ್ಲಿರುವ ಧಮನಕ್ಕೆ ಒಳಗಾದವರ ಬದುಕನ್ನು ಅವರು ತಮ್ಮ ಕೃತಿಯಲ್ಲಿ ತೆರೆದಿಟ್ಟಿದ್ದಾರೆ. ಜೋಪಡಿಪಟ್ಟಿಯ ಜನರು ಬದುಕಿನ ಸಂಕೀರ್ಣ ಅನುಭವಗಳು ಗೀತಾ ಅವರ ಲೇಖನದಲ್ಲಿಸೃಜನಶೀಲ ಅಭಿವ್ಯಕ್ತಿಯಾಗಿ ಪ್ರಕಟಗೊಂಡಿವೆ. ಈ ಸಾಹಿತ್ಯದ ಅನುಭವ ಕಟ್ಟಿಕೊಡುವ ಸೈದ್ಧಾಂತಿಕ ತಾತ್ವಿಕತೆ ದಲಿತ ಚಳುವಳಿಗೆ ಮಾರ್ಗದರ್ಶಕವಾಗಬಲ್ಲುದೆ ಎಂಬುದು ಇನ್ನು ಹೆಚ್ಚಿನ ಚರ್ಚೆಗೊಳಗಾಗಬೇಕಾದ ವಿಷಯವಾಗಿದೆ.

ಕನ್ನಡದ ಸಾಹಿತ್ಯವು ಈಗಾಗಲೇ ಸೃಷ್ಟಿಸಿರುವ ಪಾತ್ರಗಳಿಗಿಂತಲ್ಲೂ ಭಿನ್ನವಾದ ಮಾದರಿಗಳನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ನೀಡಿರುವ ಗೀತಾಅವರ ಒಟ್ಟು ಬರವಣಿಗೆ ಚಾರಿತ್ರಿಕವಾಗಿ ಮತ್ತು ಸಾಹಿತ್ಯವಾಗಿ ಮಹತ್ವದ ಕನ್ನಡ ಕಲಿಕೆಯೆ? ದುರ್ಬಲವಾಗಿದ್ದ ನಿಜಾಮರ ಆಳ್ವಿಕೆಯ ಪ್ರಾಂತ್ಯದಿಂದ ಲೇಖಕಿ ಇವರಾಗಿದ್ದರೆ. ಅಕ್ಷರ ಜ್ಞಾನವಿರದ ಪ್ರತಿದಿನಕೂಳನ್ನು ದುಡಿದೇತಿನನ್ನ ಬೇಕಾದ ಕುಟುಂಬಗಳು, ಅವರನ್ನು ಆವರಿಸಿರುವ ಮೂಡಾ ನಂಬಿಕೆ ಮತ್ತು ಅವರ ಅಜ್ಞಾನವನ್ನು ಲಾಭಮಾಡಿಕೊಂಡು ಅವರನ್ನು ಶೋಷಿಸುವ ವರ್ಗ ಜಾತಿಗಳೂ ಒಟ್ಟಾರೆಯಾಗಿ ಶ್ರೇಣಿಕೃತ ಸಮಾಜದಲ್ಲಿ ಅತ್ಯಂತ ಅಂಚಿನಲ್ಲಿ ನೂಕಲ್ಪಟ್ಟು ಜನಸಮುದಾಯದ ಬದುಕನ್ನು, ತಮ್ಮದೇ ಭಾಷೆಯಲ್ಲಿ ಸೃಜನಶೀಲ ನೆಲೆಯನ್ನು ಗೀತಾರವರು ಅಭಿವ್ಯಕ್ತಿ ಸಿರುವುದು ಸಾಹಿತ್ಯ ಲೋಕದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ದೊರಕಿಸಿ ಕೊಟ್ಟಿದೆ "ಡಾ. ಎಚ್.ಎಸ್. ರಾಘವೇಂದ್ರರಾವ್ ಅವರು ಹೇಳುವಂತೆ, "ಅವರ ಬಳಿ ಇದ್ದ ಕಚ್ಚಾಮಾಲು ಮೀಸ್ಸಲು ಮುರಿಯದ ಅನುಭವ ಪ್ರಪಂಚವಾಗಿತು. ಅದು ಎಷ್ಟು ಮಾತ್ರವು ಬಳಕೆಯಾದಾಗ, ಬಳಸಿ ಸಮಯದ ಐಂದ್ರಿಕ ವಿವರಗಳು ಮತ್ತು ಭಾಷಿಕ ಅನನ್ಯತೆಗಳನ್ನು ಪಡೆದುಕೊಂಡಿತ್ತು."[1]

ಗೀತಾನಾಗಭೂಷಣ ಅವರ ಕಾದಂಬರಿಯಲ್ಲಿ ಪ್ರಕಟಪಡಿಸಿರುವ ವೈಚಾರಿಕತೆಯೆಂದೇ ಹಲವು ಪ್ರಭಾವ ಗುರುತಿಸಬಹುದಾಗಿದೆ. ಗೀತಾ ಅವರು ಸ್ವತ: ಅನುಭವಿಸಿದನ್ನು ಕಣ್ಣಾರೆ ಕಂಡಿದ್ದನ್ನು ಆಯಿ, ಮುತ್ಯಾ, ಚಿಂಗವ್ವರಿಂದ ಕೇಳಿದ್ದನ್ನು ತನ್ನ ಅನುಭವದ ಹಿನ್ನೆಲೆಯಲ್ಲಿ ರಚಿಸಿದಾರೆ ಈ ಕೃತಿಯಲ್ಲಿ ಕೆಳಜಾತಿ ವರ್ಗದ ಊಟ-ತಿಂಡಿ, ಆಚರಣೆ, ಒಡವೆ-ವಸ್ತ್ರ ಎಲ್ಲವನ್ನು ಸಂಭ್ರಮದಿಂದ ವರ್ಣಿಸುತ್ತಾ ಅದಕ್ಕೊಂದು ಪ್ರಾಶಸ್ತ್ಯ ತಂದುಕೊಟ್ಟಿದಾರೆ. ಆ ಮೂಲಕ ಜನರ ಸ್ವಾಭಿಮಾನದ ಗಡಿಯನ್ನು ಎತ್ತರಿಸಿದರು. ಅವರ ಕಾದಂಬರಿಯಲ್ಲಿ ಬರುವ ದಲಿತ ನಾಯಕಿಯರ ಸೌಂದರ್ಯವನ್ನು ದಣಿವಿಲ್ಲದೆ ವರ್ಣಿಸಿದ್ದಾರೆ. ಅವರ ಊಟತಿಂಡಿಯ ಬಗ್ಗೆ ಅಭಿಮಾನದಿಂದ ವಿವರಿಸಿದ್ದಾರೆ. ಕೆಳವರ್ಗದವರ ಸ್ತ್ರೀಯರ

ಸೂಕ್ಷ್ಮ ಸಂವೇದನೆಗಳು ಅವರು ಬಡತನದ ಬೇಗೆಯನ್ನು ಸಹಿಸಲು ತಮ್ಮ ದೇಹವನ್ನು ಇತರರಿಗೆ ಅರ್ಪಿಸುವ ಹೀನಕೃತ್ಯಗಳು, ಇಂತಹ ಅಂಶಗಳು ಕಾದಂಬರಿಯಲ್ಲಿ ಕಂಡು ಬರುತ್ತವೆ. ಇದಕ್ಕೆ ಅಪವಾದವೆಂಬಂತೆ ಬೆಳ್ಳಿಯು ಕಾಮುಕ ಕಣ್ಣಿಗೆ ಬಿದ್ದರೂ ಅವರಿಗೆ ಮನಸೋಲದೆ ಪ್ರತಿಭಟನಾತ್ಮಕವಾಗಿ ಕಂಡು ಬರುತ್ತಾಳೆ.

ಲೇಖಕಿಯರು ಶೂದ್ರ ಪರಂಪರೆಯ ಹಿನ್ನೆಲೆಯಲ್ಲಿ ಬಂದವರು ಸಮಾಜದಲ್ಲಿ ನಡೆಯುವ ದುಷ್ಟ ಆಚರಣೆಗಳಿಗೆ ಬಲಿಯಾಗುವವರು ಈ ಅನಕ್ಷರಸ್ಥ ಸಂಪ್ರದಾಯದ ಮುಗ್ಧರು. ಈ ಕಾದಂಬರಿಯಲ್ಲಿ ಸಮಾಜ ತಲೆತಗ್ಗಿಸುವಂತಹ ದುಷ್ಟ ಪದ್ಧತಿಗಳಾದ ಬೆತ್ತಲೆ ಪೂಜೆ ಮತ್ತು ಜೋಗಣಿ ಬಿಡುವ ಸಂಪ್ರಾದಾಯದ ವಿರುದ್ಧ ಲೇಖಕಿ ದನಿ ಎತ್ತಿರುವುದು ಗಮನ ಸೆಳೆಯುತ್ತದೆ. ದೈವದ ಹೆಸರಿನಲ್ಲಿ ನಡೆಯುವ ಈ ಅನಿಷ್ಟ ಸಂಪ್ರದಾಯವನ್ನು ಮೇಲ್ವರ್ಗದವರು ಯಾವ ರೀತಿಯಲ್ಲಿ ತಮ್ಮ ಸ್ವಾರ್ಥಕ್ಕಾಗಿ ಮತ್ತು ಲೈಂಗಿಕ ತೃಷೆಯನ್ನು ತಣಿಸಿಕೊಳ್ಳಲು ಬಳಸಿಕೊಳ್ಳುತ್ತಾರೆ ಎಂಬ ವಾಸ್ತವ ಸಾತ್ಯವನ್ನು ಹಸಿಹಸಿಯಾಗಿ ಚಿತ್ರಿಸಿದ್ದಾರೆ.

ಕೆಳವರ್ಗದವರ ಮೌಢ್ಯತನ ಎಷ್ಟರ ಮಟ್ಟಿಗೆ ದಟ್ಟವಾಗಿದೆಯೆಂದರೆ ಸರ್ಕಾರ ಕಾನೂನಾತ್ಮಾಕವಾಗಿ ನಿಷೇದ ಹೇರಿದ್ದರೂ ಕಾನೂನಿನ ಕಣ್ತಪ್ಪಿಸಿ ಇಂದಿಗೂ ಚಾಲ್ತಿಯಲ್ಲಿರುವುದು ಕಾದಂಬರಿಯಲ್ಲಿ ಬರುವ ಚಿತ್ರಣವನ್ನು ಮತ್ತಷ್ಟು ಪ್ರಭಾವಗೊಳಿಸುತ್ತದೆ.

ಕಾದಂಬರಿಯ ಮುಖ್ಯ ಆಶಯಗಳಲ್ಲಿ ಕಾಮವು ಒಂದು ಈ ಕಾಮ ಭಾವನೆ ಕೆಳಸ್ತರದಲ್ಲಿ ಹೆಚ್ಚಾಗಿದ್ದು, ಪರಿಣಾಮವಾಗಿ ಮನೆ ತುಂಬ ಓಡಾಡುವ ಮಕ್ಕಳು ಚಿತ್ರಣ ಇಂಬು ಕೊಡುತ್ತದೆ. ಯಾವುದೇ ವೈಚಾರಿಕ ನೆಲೆಗಟ್ಟನ್ನು ಹೊಂದದೆ ಹಸಿವು ಮತ್ತು ಬಡತನದ ನಿಮಿತ್ತ ಪರಂಪರೆಯಿಂದಲ್ಲೂ ಉಳಿಸಿಕೊಂಡು, ಬೆಳಸಿಕೊಂಡು ಬರುತ್ತಿರುವ ಸೇಂದಿಯ ಸೇವನೆಗೆ ತಮ್ಮ ಹಂಡತಿಯನ್ನೇ ತಲೆಹಿಡಿಯುವ ಕೆಳಸ್ತರದವರ ಹೀನ ಮನಸ್ಸನ್ನು ಲೇಖಕಿಯರು ಸವಿವಿವರವಾಗಿ ವಿವರಿಸಿದ್ದಾರೆ.

ಇಲ್ಲಿ ಸಾಂಸ್ಕೃತಿಕ ವಿಷಯಗಳಾದ ಹಬ್ಬಗಳು, ಜಾತ್ರೆಗಳು, ಮೊಹರಂ ಮುಂತಾದ ಧಾರ್ಮಿಕ ಕ್ರಿಯೆಯಡಿ ನಡೆಯುವ ಇಂಥ ಕ್ರಿಯಾಚರಣೆಯಲ್ಲಿ ಎಲ್ಲಾ ಧರ್ಮೀಯರು ಒಟ್ಟಿಗೆ ಸೇರಿ ಸಹಕಾರ ಮತ್ತು ಸಹ ಬಾಳ್ವೆಯಿಂದ ಸೇರುವುದು ಅಲ್ಲಿನ ಜನರ ವಿಶೇಷತೆಯಾದ ಅಂಶಗಳು. ಎಲ್ಲಿ ಜಾತಿ ಪ್ರಬಲವಾಗಿರುತ್ತದೆಯೋ ಅಲ್ಲೆಲ್ಲ ಬಾಂಧವ್ಯಗಳು, ಮಾನವೀಯ ಮೌಲ್ಯಗಳು ಕಡಿಮೆ ಆದರೆ ಕಾದಂಬರಿಯಲ್ಲಿ ಮದುವೆ ಮತ್ತು ಶುಭಾ ಸಮಾರಂಭಗಳಲ್ಲಿ ಜನರು ಒಟ್ಟಾಗಿ ಸೇರಿ ಕಾರ್ಯಕ್ರಮದ ಯಶಸ್ವಿಗೊಳಿಸುವುದು ಅವರ ಮನೋವೈಶಾಲ್ಯವನ್ನು ಕಾದಂಬರಿಯು ಧ್ವನಿಸುತ್ತದೆ.

ಈ ಕಾದಂಬರಿಯಲ್ಲಿ ಜನರ ಸಾಮರಸ್ಯ ಮನೋಧೋರಣಿ ಕಂಡು ಬಂದರೂ ಜಾತಿಯ ಜಟಿಲತೆಯಲ್ಲಿ ಪ್ರೇಮ ಪರಿಕಲ್ಪನೆಗೆ ಸ್ಥಾನವಿಲ್ಲ. ಲಿಂಗರಾಜು ಮತ್ತು ಕಾಶಮ್ಮ

ನಡುವಿನ ಆಂತರ್ಜಾತಿ ಪ್ರೇಮ ಪ್ರಕರಣ ದುರಂತ ಪ್ರಕರಣ ಇದು ಮಲ್ಲಪ್ಪ ಜಮಾದಾರನ ಮನೆಯನ್ನು ಕತ್ತಲೆ ಕೂಪಕ್ಕೆ ತಳ್ಳಲ್ಪಡುತ್ತದೆ. ಹಾಗಾಗಿ ಯಾವುದೇ ಪ್ರಾದೇಶಿಕವಾಗಿರಲಿ ಸಮಾಜದ ಒಪ್ಪಿತ ಮೌಲ್ಯಗಳ ವಿರೋಧಿ ನೆಲೆಯಾಗಿ ಬಂದ ವಿರೋಧಿ ಮೌಲ್ಯಗಳು ಸಮಾಜದಲ್ಲಿ ಮಾನ್ಯತೆಯನ್ನು ಪಡೆದುಕೊಳ್ಳುವುದಿಲ್ಲ. ಅವು ಸಂಘರ್ಷಕ್ಕೆ ದಾರಿಯಾಗಿ ಆಹಿತಕರ ಘಟನೆಗೆ ಕಾರಣವಾಗಿ ಸಾವಿನಲ್ಲಿ ಅಂತ್ಯವಾಗುವ ಸ್ವರೂಪದಿಂದ ಕೂಡಿದೆ.

ಒಟ್ಟಿನಲ್ಲಿ ಬದುಕು ಕಾದಂಬರಿಯ ಮುಖ್ಯ ದ್ರವ್ಯ ಜೀವಂತಿಕೆಯ ಅನ್ವೇಷಣೆ ಜೀವನ ಪ್ರೀತಿಯನ್ನು ಅಖಂಡವಾಗಿ ತುಂಬಿಕೊಂಡಿದ್ದ ಮಲ್ಲಪ್ಪ ಜಮಾದಾರನ ಕತೆಯಿಂದ ಆರಂಭ ಇವನ ಮನೆಯ ಆಗುಹೋಗುಗಳ ಕತೆಯಂತೆ ಕಂಡರೂ ಅದರ ಸುತ್ತ ಕೆಳವರ್ಗದ, ದಲಿತರ ಬಡವರ ನಿರ್ಗತಿಕರ ಜೀವಂತಿಕೆಯ ನಾಡಿಹಿಡಿಯುತ್ತಾ ಅದು ದುರ್ಬಲಗೊಳ್ಳದ ಹಾಗೆ ನೋಡಿಕೊಳ್ಳುತ್ತದೆ ಮತ್ತು ಇವರ ಬದುಕಿನ ಧಾರುಣ ಚಿತ್ರಣಗಳ ಪದರುಗಳನ್ನು ಒಂದೊಂದಾಗಿ ಸಡಿಲಿಸುತ್ತಾ ನಡೆಯುತ್ತದೆ.

ಕೆಳಜಾತಿಯ ಜನರ ನಂಬಿಕೆಗಳು, ಆಚರಣೆಗಳು, ಸಂಪ್ರದಾಯಗಳು, ಜೀವನದ ರೀತಿ–ನೀತಿಗಳು ಮೊದಲಾದವುಗಳೆಲ್ಲ ಕಾದಂಬರಿಯ ನೆಲೆಯಲ್ಲಿ ನಡೆಯುತ್ತದೆ.

ಇಲ್ಲಿ ಲೇಖಕಿ ಮೂಢನಂಬಿಕೆಗಳನ್ನು ಹೇಳುವುದರ ಜೊತೆ ಜೊತೆಯಲ್ಲಿಯೇ ವೈಚಾರಿಕ ನೆಲೆಯಲ್ಲಿ ಒರಗೆ ಹೆಚ್ಚುವ ಕೆಲಸವನ್ನು ಮಾಡಿದ್ದಾರೆ. ಈ ಮುಂದಿನ ದೌರ್ಬಲ್ಯಗಳು ಗಟ್ಟಿತನಗಳು ಪ್ರೀತಿ, ಪ್ರೇಮ, ಹಾದರ, ಕಳವು, ಸುಳ್ಳು ಮೊದಲಾದ ಹಲವು ಹದಿನೆಂಟು ರೀತಿ ನೀತಿಗಳಲ್ಲಿ ಮಾನವೀಯ ನೆಲೆಯನ್ನು ಅರಸಿಕೊಂಡು ಹೋಗುತ್ತವೆ. ಕೆಳಜಾತಿಯ ಜನರ ಅನುಭವಗಳ ಮಗ್ಗಲುಗಳನ್ನು ತೆರೆದಿಡುವುದಷ್ಟೆ ಅಲ್ಲ, ಅವಕ್ಕೊಂದು ನಿರ್ಧಿಷ್ಟ ಸಾಮಾಜಿಕ ಸ್ಥಾನಮಾನವನ್ನು, ಅಸ್ಮಿತೆಯನ್ನು ಕಲ್ಪಿಸಿಕೊಟ್ಟು ಸಾಂಸ್ಕೃತಿಕವಾಗಿ ಮಹತ್ವವನ್ನು ನಿರ್ಮಿಸುವ ಕೆಲಸ ಈ ಕಾದಂಬರಿಯಲ್ಲಿದೆ.

ಕಾದಂಬರಿಯ ಯಶಸ್ಸಿನರ್ಧಭಾಗ ಅಲ್ಲಿ ಬಳಕೆಯಾಗಿರುವ ಭಾಷಾ ಶೈಲಿ, ಈ ಭಾಷೆಯು ಅಲ್ಲಿನ ಪ್ರಾದೇಶಿಕ ನೆಲೆಗಟ್ಟಿನ ಭಾಷೆಯಲ್ಲೇ ಬಳಕೆಯಾಗಿದ್ದು, ಶ್ಲೀಲ–ಅಶ್ಲೀಲವೆನಿಸಿದೆ. ಹಸಿಹಸಿಯಾದ ಜೀವಂತ ಚಿತ್ರಣ ಕೊಡುವ ಮೂಲಕ ಅಲ್ಲಿನ ಜನರ ಬದುಕಿಗೂ ಮತ್ತು ಭಾಷೆಗೂ ಅವಿನಾಭಾವ ಸಂಬಂಧ ಕಲ್ಪಿಸಿದ್ದಾರೆ. ಈ ಕಾದಂಬರಿಯ ಬಾಷೆಯ ಬಗ್ಗೆ ವಿಮಾರ್ಶತ್ಮಕವಾಗಿ ದ್ವಂದ್ವ ಅಭಿಪ್ರಾಯವಿದ್ದರೂ, ಲೇಖಕಿಯರ ದೃಷ್ಟಿಯಲ್ಲಿ ಸಮರ್ಥವಾಗಿದೆ.

ಅಡಿ ಟಿಪ್ಪಣಿ :

೧. ಗೀತಾ ನಾಗಭೂಷಣ – ಡಾ. ಗಾಯತ್ರಿ – ನವಕರ್ನಾಟಕ ಪ್ರಕಾಶನ, ಪು. ೮೫.

ಗ್ರಂಥಋಣ

೧. ಬದುಕು – ಗೀತಾನಾಗಭೂಷಣ
ಲೋಹಿಯಾ ಪ್ರಕಾಶನ,
ಬಳ್ಳಾರಿ
ನಾಲ್ಕನೇ ಮುದ್ರಣ – ೨೦೧೦

ಪರಾಮರ್ಶನ ಗ್ರಂಥ

೧. ಅಂತರ್ ಜಾಲದಲ್ಲಿ ದೊರೆತ
ಬಿಡಿ ಲೇಖನಗಳು

೨. ಗೀತಾನಾಗಭೂಷಣ – ಡಾ. ಎನ್.ಗಾಯತ್ರಿ
(ಸಂ. ಡಾ. ಪ್ರಧಾನ್ ಗುರುದತ್ತ)
ನವ ಕರ್ನಾಟಕ ಪ್ರಕಾಶ – ೨೦೦೯.

೩. ಗೀತಾ ನಾಗಭೂಷಣ
ಮಹಿಳಾ ಮಾರ್ಗ – ಸಂಪಾದಕರು
ಡಾ. ಕೆ.ಷರೀಫಾ–ಬಸವರಾಜಸೂಳಿಭಾವಿ
–೨೦೧೦
ಲಡಾಯಿ ಪ್ರಕಾಶನ, ಗದಗ

೪. ಕನಕದಾಸರ ಕೀರ್ತನೆಗಳು – ಸಂಪಾದಕರು
ಶ್ರೀ ಬಿ.ಶಿವಮೂರ್ತಿಶಾಸ್ತ್ರೀ
ಪ್ರಕಾಶಕರು
ರಾಜ್ಯ ಸಮಿತಿ
ಶ್ರೀ ಕನಕದಾಸರ ನಾಲ್ಕನೆಯ ಶತಮಾನೋತ್ಸವ
ಮೈಸೂರು ಸರ್ಕಾರ
ಬೆಂಗಳೂರು

೫. ಸಾಂಸ್ಕೃತಿಕ ಅಧ್ಯಯನ – ರಹಮತ್ ತರೀಕೆರೆ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦೦೦೨